


ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಉತ್ತಮ ಪುರುಷನು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಅನುವಾದ : ಕೆ. ಹೇಮಲತ

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಉತ್ತಮ ಪುರುಷನು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡದ ಅನುವಾದ : ಕೆ. ಹೇಮಲತ

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Uttama Purushanu**
Edited & Published by **Srirama Publications,**
Sri Ramadhama Pyaramid Dyanakendra, Narayanappa
Garden, Whitefiled, Bangalore - 560 066.
**M.: 9449695503, 8050082689, 9886532204**

| | | |
|---|---|---|
| ಪ್ರಥಮ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪ್‌ಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 70/– ರೂ |
| ಪುಟಗಳು | : | iii +69 = 72 |
| ಮುಖಚಿತ್ರ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ** ಮತ್ತು

**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಯಾರು ಉತ್ತಮ ಪುರುಷನು?

ಗೌತಮ ಬುದ್ಧನು ಎಷ್ಟೋ ಬೋಧನೆಗಳನ್ನು ಮಾಡುತ್ತಿದ್ದನು. ಆತನು ಬೋಧಿಸಿದ ಪ್ರತಿಯೊಂದು ಆಚರಣೆಯೇ. ಬುದ್ಧನ ಬೋಧನೆಗಳನ್ನು ಅರ್ಥ ಮಾಡಿಕೊಂಡು ಆಚರಿಸಿದರೆ ಯಾರಾದರೂ ದುಃಖದಿಂದ ಹೊರ ಬರುತ್ತಾರೆ. ಅಷ್ಟು ಉತ್ತಮವಾದವು ಬುದ್ಧನ ಬೋಧನೆಗಳು. ಆದ್ದರಿಂದ ಆತನು ಮಾಡಿದ ಬೋಧನೆಗಳಲ್ಲಿ ಪ್ರಸ್ತುತವಾಗಿ ಈ ಕೆಳಗೆ ಹೇಳಲಾದ ಬೋಧನೆ ಕುರಿತು ತಿಳಿಯೋಣ.

**"ಅಂಧ ವಿಶ್ವಾಸಗಳ ಅಂತ್ಯ ಕಂಡವನು, ನಿರ್ವಾಣ ತತ್ವ ವಿಜ್ಞಾನ ತಿಳಿದವನು, ಭವ ಬಂಧನಗಳನ್ನು ಸದಾ ಬದಲು ಮಾಡಿದವನು. ಆಶಾರಹಿತನು, ಉತ್ತಮ ಪುರುಷನು."**

ಮೊದಲು "ಉತ್ತಮ ಪುರುಷನು" ಎಂದರೆ ಯಾರು ತಿಳಿದುಕೊಳ್ಳೋಣ. ಉತ್ತಮ ಪುರುಷನು ಅಂದರೆ ತುಂಬಾ ಉತ್ತಮವಾದವನು, ಹೆಚ್ಚು ಜ್ಞಾನವನ್ನು ಹೊಂದಿರುವವನು, ಜ್ಞಾನವನ್ನು ಸಂಪಾದಿಸಿಕೊಂಡವನು ಎಂದು ತಿಳಿಯಬೇಕು. ಇಂತಹ ಉತ್ತಮ ಪುರುಷನ ಲಕ್ಷಣಗಳು ಹೇಗೆ ಇರುತ್ತವೆ ಎಂದು ಬುದ್ಧನು ಹೇಳಿದ್ದಾನೆ.

ಅಂಧವಿಶ್ವಾಸಗಳು ಎಂದರೆ ಮೂಢನಂಬಿಕೆಗಳು. ಅಂತ್ಯವನ್ನು ನೋಡಿದವರು ಎಂದರೆ ಮೂಢನಂಬಿಕೆಗಳನ್ನು ಬಿಟ್ಟವರು. ನಿರ್ವಾಣ ತತ್ವ ವಿಜ್ಞಾನವನ್ನು ತಿಳಿದವರು, ಅಂದರೆ ಮೋಕ್ಷದ ಶ್ರೇಷ್ಠತೆಯನ್ನು ತಿಳಿದವರು. ಭವಬಂಧನಗಳು ಅಂದರೆ ಸಂಸಾರ ಬಂಧನಗಳಿಂದ ಸದಾ ಬದಲು ಮಾಡಿದವರು. ಅಂದರೆ ಹೊರಬಂದವರು.

ತೃಷ್ಣಾ ರಹಿತನು ಎಂದರೆ ಕೋರಿಕೆಗಳು ಇಲ್ಲದವನು. ಉತ್ತಮ ಪುರುಷನು ಎಂದರೆ ಈ ಎಲ್ಲಾ ಲಕ್ಷಣಗಳನ್ನು ಯಾರು ಹೊಂದಿರುತ್ತಾರೋ ಅವರು ಮಾನವರೆಲ್ಲರಿಗಿಂತಲೂ ಉತ್ತಮವಾದವನು ಎಂದು ತಿಳಿದುಕೊಳ್ಳಬೇಕು.

## (1.) "ಅಂಧ ವಿಶ್ವಾಸಗಳ ಅಂತ್ಯ ಕಂಡವನು"

ಇಲ್ಲಿ ಪುನಃ ನಾವು ಆತನು ಹೇಳಿದಂತಹ ಪ್ರತಿಯೊಂದು ಪದದ ಅರ್ಥವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡೋಣ. ಆಗ ನಮಗೆ ಆ ಸಂದೇಶದ ಅರ್ಥವು ಪೂರ್ತಿಯಾಗಿ ಅವಗಾಹನೆ ಆಗುತ್ತದೆ. ಅಂಧ ವಿಶ್ವಾಸಗಳ ಅಂತ್ಯ ಕಂಡವನು ಎಂದರೆ, ಮೂಢನಂಬಿಕೆಗಳು ಇಲ್ಲದವನೆಂದು ಹೇಳಬಹುದು. ನಾನು ಪತ್ರೀಜಿಯವರನ್ನು ಪದೇ ಪದೇ ಪ್ರಸ್ತಾವನೆ ಮಾಡಲು ಮುಖ್ಯ ಕಾರಣವೇನೆಂದರೆ, ಆತನಿಂದಲೇ ಇವೆಲ್ಲವನ್ನೂ ಕಲಿತುಕೊಂಡಿದ್ದೇನೆ. ಅರ್ಥೈಸಿಕೊಂಡಿದ್ದೇನೆ.

ಪತ್ರೀಜಿಯವರು ಮೊದಲು ಎಲ್ಲರಲ್ಲಿಯೂ ಇರುವಂತಹ ಮೂಢನಂಬಿಕೆಗಳನ್ನು ತೊಲಗಿಸುವ ಪ್ರಯತ್ನ ಮಾಡುತ್ತಿದ್ದರು. ಏಕೆಂದರೆ? ಈ ಮೂಢನಂಬಿಕೆಗಳನ್ನು ಹೊಂದಿರುವವರು ಯಾವ ಕೆಲಸ ಮಾಡಿದರೂ 3 ವಿಧಗಳಾಗಿ ಮಾಡುತ್ತಿರುತ್ತಾರೆ.

1. ಹಿಂದಿನಿಂದ, ತಲೆಮಾರುಗಳಿಂದ ಸಂಪ್ರದಾಯಗಳು ಆಚರಣೆಗಳಾಗಿ ಬರುತ್ತಿವೆ ಎಂದು ಮಾಡುತ್ತಿದ್ದಾರೆ.
2. ಎಲ್ಲರೂ ಮಾಡುತ್ತಿದ್ದಾರೆ ಎಂದು ಮಾಡುತ್ತಿರುತ್ತಾರೆ.
3. ಯಾರೋ ಹಿರಿಯರು, ಪಂಡಿತರು ಹೇಳಿದರೆಂದು ಮಾಡುತ್ತಿರುತ್ತಾರೆ.

ಮೂಢನಂಬಿಕೆಗಳು ಇರುವವರು ಈ 3 ರೀತಿಯಲ್ಲಿ ಇರುತ್ತಾರೆ.

ಕೆಲವರು ತಲೆಮಾರುಗಳಿಂದ ಬರುತ್ತಿದೆ ಎಂದು ಆಚರಿಸುತ್ತಾ ಇದ್ದರೆ, ಕೆಲವರು ಯಾರು ಹೆಚ್ಚಾಗಿ ಏನು ಮಾಡುತ್ತಾರೋ ಅದನ್ನೇ ಮಾಡುತ್ತಿರುತ್ತಾರೆ. ಇನ್ನೂ ಕೆಲವು ಜನರು ದೊಡ್ಡ ದೊಡ್ಡ ವ್ಯಕ್ತಿಗಳು ಹೇಳುತ್ತಿದ್ದಾರೆ. ಅಂತಹ ದೊಡ್ಡ ವ್ಯಕ್ತಿಗಳು ಏಕೆ ಹೇಳುತ್ತಿದ್ದಾರೆ ಎನ್ನುವ ಅಭಿಪ್ರಾಯದೊಂದಿಗೆ ಅನುಕರಣೆ ಮಾಡುತ್ತಿರುತ್ತಾರೆ.

ಆದುದರಿಂದ ಅವರು ಏಕೆ ಹಾಗೆ ಆಚರಿಸುತ್ತಾರೆ ಎಂದರೆ? ಅವರಲ್ಲಿ ವಿವೇಕವು ಇಲ್ಲದೇ ಇರುವುದರಿಂದ. ಅಂದರೆ ಆಲೋಚನೆ ಶಕ್ತಿ, ನಿರ್ಣಯಿಸುವ ಶಕ್ತಿ ಅವರಿಗೆ ಇಲ್ಲ. ಹಾಗೆಯೇ ಬುದ್ಧಿ ವಿಕಸನ ಆಗದವರಿಗೆ ವಿವೇಕವು ಇರುವುದಿಲ್ಲ. ಮುಖ್ಯವಾಗಿ ಯಾರಲ್ಲಿ ತಮೋ ಗುಣ, ರಜೋ ಗುಣದ ಲಕ್ಷಣಗಳು ಇರುತ್ತವೆಯೋ ಅಂತಹವರು ಈ ವಿಧವಾಗಿ ಪ್ರವರ್ತಿಸುತ್ತಾ ಇರುತ್ತಾರೆ.

ಸಾತ್ವಿಕ ಗುಣದಲ್ಲಿ ಬಂದವರು ಕೂಡಾ, ಇನ್ನೂ ಬುದ್ಧಿ ಚೆನ್ನಾಗಿ ವಿಕಸಿಸದೆ ಇರುವುದರಿಂದ ಈ ವಿಧವಾಗಿ ಪ್ರವರ್ತಿಸುತ್ತಾ ಇರುತ್ತಾರೆ. ತಮೋ ಗುಣದಲ್ಲಿ ಇರುವವರು ಹಿಂದಿನಿಂದಲೂ ಬಂದದ್ದನ್ನೇ ಆಚರಿಸುತ್ತಾ ಇರುತ್ತಾರೆ. ಅದೇ ಸರಿ ಎನ್ನುತ್ತಾರೆ, ವಾದಿಸುತ್ತಾರೆ ಕೂಡಾ. ರಜೋ ಗುಣದಲ್ಲಿ ಬಂದರೆ ಎಲ್ಲರೂ ಮಾಡುತ್ತಿದ್ದಾರೆ ಅಲ್ಲವೇ? ಎಂದು ಅದನ್ನೇ ಆಚರಿಸುತ್ತಾರೆ.

ಸಾತ್ವಿಕ ಗುಣದಲ್ಲಿ ಬಂದರೆ ಏನೋ ಪಂಡಿತರು, ದೊಡ್ಡ ದೊಡ್ಡ ಉಪನ್ಯಾಸಗಳನ್ನು ನೀಡುತ್ತಾರೆ. ಇಲ್ಲವೇ ಶಾಸ್ತ್ರಗಳಲ್ಲಿ ಇರುವ ವಿಷಯಗಳನ್ನು ಕಂಠಪಾಠ ಮಾಡಿ ನಿರರ್ಗಳವಾಗಿ ಹೇಳುತ್ತಾ ಇರುತ್ತಾರೆ. ಅಂತಹ ಮೇಧಾವಿಗಳು ಹೇಳಿದಾಗ, ಅವರು ಹೇಳಿದ್ದು ಸರಿಯಾಗಿರದೇ ಹೇಗೆ ಇರುತ್ತದೆ? ಎನ್ನುವ ಅಭಿಪ್ರಾಯದಲ್ಲಿ ಇರುತ್ತಾರೆ. ಆದರೆ ವಿವೇಕವನ್ನು ಉಪಯೋಗಿಸುವುದಿಲ್ಲ.

ಯಾರಿಗಾದರೆ ಹೆಚ್ಚಿನ ಬುದ್ಧಿ ವಿಕಸನವಾಗುತ್ತದೆಯೋ! ಪ್ರತಿ ವಿಷಯವನ್ನು ಆಲೋಚಿಸುವವರಾಗುತ್ತಾರೋ! ಅಂತಹವರು ಎಚ್ಚರದಿಂದ ಆಲೋಚಿಸುತ್ತಾರೆ. ಈ ಹಿಂದೆ ತಾವು ಆಚರಿಸುತ್ತಿದ್ದುದು, ಈಗ ಯೋಗಿಗಳಂತವರು, ಜ್ಞಾನಿಗಳು ಹೇಳಿದ ವಿಷಯವನ್ನು ಅಳೆದು–ತೂಗಿ ಒಳ್ಳೆಯದು ಕೆಟ್ಟದ್ದು ವಿಶ್ಲೇಷಣೆ ಮಾಡುತ್ತಾರೆ.

ಅಗತ್ಯವಾದರೆ ಕೆಲವು ಗ್ರಂಥಗಳನ್ನು ಓದುತ್ತಾರೆ, ಉಪನಿಷತ್ತುಗಳನ್ನು, ವೇದಗಳನ್ನು, ಭಗವದ್ಗೀತೆಯನ್ನು, ಪುರಾಣಗಳನ್ನು, ಇನ್ನೂ ಉತ್ತಮೋತ್ತಮ ಯೋಗಿಗಳು ಹೇಳಿದಂತಹ ವಿಷಯಗಳನ್ನೆಲ್ಲವನ್ನೂ ಕೂಡ ಅವರು ಓದುತ್ತಾ ಅಧ್ಯಯನ ಮಾಡುತ್ತಾರೆ. ಆಗ ಪಂಡಿತರು ಹೇಳಿದ್ದು ಒಂದು ರೀತಿಯಾಗಿ, ಯೋಗಿಗಳು ಹೇಳಿದ ಸತ್ಯವು ಇನ್ನೊಂದು ವಿಧವಾಗಿ ಇರುತ್ತದೆ ಎಂದು ಅವರಿಗೆ ಅರ್ಥವಾಗುತ್ತದೆ.

ಪತ್ರೀಜಿಯವರು ಪರಿಚಯವಾದಾಗ ಅವರು ಏನು ಹೇಳಿದರೆಂದರೆ? ವಿಗ್ರಹಾರಾಧನೆ ಬೇಡ. ಸತ್ಯಾರಾಧನೆಯನ್ನು ಮಾಡಿರಿ ಎಂದರು. ಸಾಧಾರಣವಾಗಿ ಈ ಮೂಢತ್ವದಲ್ಲಿ, ಮೂರ್ಖತ್ವದಲ್ಲಿ ಇದ್ದವರು ಸತ್ಯಾರಾಧನೆಯನ್ನು ಆಚರಿಸಿರಿ ಎಂದು ಹೇಳಿದರೂ ಕೂಡಾ ಅದನ್ನು ಬಿಟ್ಟು ವಿಗ್ರಹಾರಾಧನೆ ಏಕೆ ಬೇಡವೆನ್ನುತ್ತಿದ್ದಾರೆ? ಎನ್ನುವುದನ್ನು ಆಲೋಚಿಸುತ್ತಾರೆ. ಮೊದಲಲ್ಲಿ ನನಗೂ ಕೂಡಾ ಅದೇ ಆಲೋಚನೆ ಬಂದಿತ್ತು.

ಏಕೆಂದರೆ ಎಲ್ಲರೂ ಆಚರಣೆಯಾಗಿ ವಿಗ್ರಹಾರಾಧನೆ ಮಾಡುತ್ತಿದ್ದಾರೆ. ಅದಕ್ಕೆ ನಾನು ವೆಂಕಟೇಶ್ವರ ಸ್ವಾಮಿ ದೇವಸ್ಥಾನವನ್ನು ಕಟ್ಟಿಸಿದೆನು. ವೆಂಕಟೇಶ್ವರ ಸ್ವಾಮಿ ಎಂದರೆ ನನಗೆ ತುಂಬಾ ಇಷ್ಟ. ಅಲ್ಲಿ ದಿನಾಲೂ ಪೂಜೆಗಳನ್ನು ಮಾಡುತ್ತಾ ಇದ್ದರೆ ಪತ್ರೀಜಿಯವರು ವಿಗ್ರಹರಾಧನೆ ಬೇಡ ಎನ್ನುತ್ತಿದ್ದರು. ಇದೇನಿದು ಈತನು ಹೀಗೆ ಹೇಳಿದ ಎಂದು ಬಹಳ ಗೊಂದಲದಲ್ಲಿ ಬಿದ್ದೆನು.

ಆದರೆ ಸತ್ಯದ ಬಗ್ಗೆ ಯಾರು ಹೇಳಲಿಲ್ಲ. ಆದ್ದರಿಂದ ಪೂಜೆಗಳನ್ನೇ ಮಾಡುತ್ತಿದ್ದೆ. ಪತ್ರೀಜಿಯವರು ಯಾವಾಗ ಸತ್ಯಾರಾಧನೆ ಎಂದರೋ! ಆಗ ಸತ್ಯವು ಎಂದರೆ ಏನು? ಎಂದು ಆಲೋಚಿಸಿದೆನು! ಆಗ ತಿಳಿಯಿತು ಸತ್ಯವೆಂದರೆ ದೈವವೆಂದು ತಿಳಿದುಕೊಂಡೆನು. ಪತ್ರೀಜಿಯವರು ಸತ್ಯಾರಾಧನೆ ಮಾಡು ಎಂದರು ಅಂದರೆ ದೈವವನ್ನು ಆರಾಧಿಸು ಎಂದಿದ್ದಾರೆ ಹೊರತು, ಆರಾಧನೆ ಬಿಟ್ಟು ಬಿಡು ಎನ್ನಲಿಲ್ಲವಲ್ಲಾ? ಎಂದು ಅರ್ಥವಾಯಿತು. ಆಗ ದೈವವೆಂದರೆ ಆತ್ಮ ಎಂದು ತಿಳಿದುಕೊಂಡೆನು. ಆತ್ಮವೆಂದರೆ ಸತ್ಯವನ್ನು ಆರಾಧಿಸುವ ಮಾರ್ಗವೇ, "ಶ್ವಾಸದ ಮೇಲೆ ಗಮನ" ಎಂದು ತಿಳಿದುಕೊಂಡೆನು. ಅದು ವಿವೇಕವೆಂದರೆ.

ಆಗ ವಿಗ್ರಹಾರಾಧನೆ ಏಕೆ ಬೇಡವೆಂದರು? ಸತ್ಯಾರಾಧನೆ ಏಕೆ ಮಾಡು ಎಂದಿದ್ದಾರೆ? ಎಂದು ಆಲೋಚಿಸಿದೆ. ನಿಜವಾಗಿ ಸತ್ಯ ಎಂದರೆ ಏನು? ಎಂದು ಅಧ್ಯಯನ ಮಾಡಿದರೆ ತಿಳಿಯಿತು. ಸತ್ಯವೇ ಭಗವಂತನು ಎಂದು, ಸೃಷ್ಟಿಯಲ್ಲಿ ಇರುವುದೇ ಸತ್ಯವೆಂದು, ಆ ಸತ್ಯದಿಂದ ಎಲ್ಲಾ ಉದ್ಭವವಾಗಿದೆ ಎಂದೂ, ಆ ಸತ್ಯದಿಂದ ಉದ್ಭವಿಸಿದವೆಲ್ಲಾ ಅದೃಶ್ಯವಾಗುವವು. ಅವನ್ನು ಅಸತ್ಯವೆಂದು ಎನ್ನುತ್ತೇವೆ ಎಂದು ತಿಳಿದುಕೊಂಡೆನು. ಒಂದು ವಿಧದಲ್ಲಿ ಹೇಳುವುದಾದರೆ ಕಣ್ಣಿಗೆ ಕಾಣುವವೆಲ್ಲಾ ಅಸತ್ಯಗಳೇ.

ಕಣ್ಣಿಗೆ ಕಾಣಿಸದೆ ಇರುವುದೇ ಸತ್ಯ. ಶಾಶ್ವತವಾದದ್ದೇ ಸತ್ಯವೆಂದು ತಿಳಿದುಕೊಂಡೆ. ಇವೆಲ್ಲವೂ ಪೂರ್ವಜನ್ಮದ ಸಂಸ್ಕಾರವೆನೋ! ನನಗೆ ತಿಳಿಯದಾಗಲಿ, ಆ ವಿಧವಾಗಿ ವಿಚಾರಣೆ ಮಾಡಲಾಯಿತು. ಯಾರಾದರೂ ಸಂತೋಷವಾಗಿ ಜೀವಿಸಬೇಕು. ದುಃಖದಿಂದ ಹೊರಬರಬೇಕೆಂದು ಬಯಸುತ್ತಿದ್ದಾರೋ! ಆ ವಿಧವಾದ ಸ್ಥಿತಿ ಬೇಕೆಂದರೆ, ಸತ್ಯವನ್ನು ಆಶ್ರಯಿಸಬೇಕು. ಅಂದರೆ ಭಗವಂತನನ್ನು ಆಶ್ರಯಿಸಬೇಕು. ಅದಕ್ಕೆ ಧ್ಯಾನವನ್ನು ಮಾಡಬೇಕು ಎಂದು ತಿಳಿದುಕೊಂಡೆನು.

ಅದಕ್ಕೂ ಮೊದಲು ಪತ್ರೀಜಿಯವರು ಪೂಜೆಗಳನ್ನು ಬಿಡಬೇಕು ಎಂದು ಹೇಳಿದರೂ ಕೂಡಾ ಭಯ ಬೀಳುತ್ತಿದ್ದೆ. ಯಾವ ವಿಗ್ರಹವನ್ನು ನೋಡಿದರೂ ದೇವರೆನ್ನುವ ಭಾವನೆಯಿಂದ ಎರಡು ಕೈಗಳು ಹತ್ತಿರ ಬರುತ್ತಿದ್ದವು. ಕೈಗಳು ಹಾಗೆ ಹತ್ತಿರ ಬರದಂತೆ ಯಾವಾಗಾದರೂ ವಿಗ್ರಹವನ್ನು ನೋಡಿದಾಗ ನಮಸ್ಕರಿಸದೆ ಹೋಗಬೇಕು ಎಂದರೆ ತುಂಬಾ ಭಯಪಡುತ್ತಿದ್ದೆ.

ಯಾವಾಗ ಸತ್ಯದ ಹಿರಿಮೆಯನ್ನು ತಿಳಿದೊಕೊಂಡೆನೋ! ಆವಾಗಿನಿಂದ ಸತ್ಯವನ್ನು ಆಶ್ರಯಿಸುತ್ತಿದ್ದೇನೆ. ಸತ್ಯವನ್ನು ಆರಾಧಿಸುತ್ತಿದ್ದೇನೆ. ಮೆಲ್ಲಗೆ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡುವುದರಿಂದ ನನ್ನಲ್ಲಿರುವ ಭಯವು ಕೆಲವು ದಿನಗಳ ನಂತರ ಹೊರಟು ಹೋಯಿತು.

ಆಗಿನಿಂದಲೂ ಆ ಸತ್ಯವನ್ನು ಎಲ್ಲರಿಗೂ ಬೋಧಿಸಲು ಮೊದಲು ಮಾಡಿದೆನು. ಈ ವಿವೇಕವಿಲ್ಲದಿದ್ದರೆ ಬಹಳಷ್ಟು ಜನರು ಸತ್ಯಕ್ಕೆ ದೂರವಾಗುತ್ತಾರೆ. ಆದ್ದರಿಂದ ಗಮನಿಸಿದರೆ ವಿಗ್ರಹಾರಾಧನೆ ಮಾಡುವವರು ಮೂರು ರೀತಿಯಾಗಿ ಕಾಣಿಸುತ್ತಾರೆ.

ಸಂಪ್ರದಾಯದಿಂದ ಬರುತ್ತದೆ ಎಂದು ಮಾಡುವವರು ಇರುತ್ತಾರೆ, ಎಲ್ಲರೂ ಮಾಡುತ್ತಿದ್ದಾರೆ ಎಂದು ಮಾಡುವವರು, ಹಿರಿಯರು, ಪಂಡಿತರು ಹೇಳಿದರೆಂದು ಮಾಡುವವರು ಇರುತ್ತಾರೆ. ಆದುದರಿಂದ ವಿಚಾರಣೆ ಮಾಡಿ ಸತ್ಯವನ್ನು ತಿಳಿದುಕೊಂಡು ಧ್ಯಾನವನ್ನು ಮಾಡುವವರು ಚೆನ್ನಾಗಿ ಬೆಳೆದವರೆಂದು ಲೆಕ್ಕ.

ಹಾಗೆಯೇ ಪತ್ರೀಜಿಯವರು ಮಾಂಸಾಹಾರ ಬೇಡವೆಂದು ಹೇಳಿದರೆ, ಪತ್ರೀಜಿಯವರು ಹೇಳಿದ ಸತ್ಯಗಳು ಲೋಕಕ್ಕೆ ವಿರುದ್ಧವಾಗಿ ಅಂದರೆ ಲೋಕದಲ್ಲಿ ಆಚರಿಸುವುದರ ವಿರುದ್ಧವಾಗಿ ಇರುತ್ತವೆ. ಆದ್ದರಿಂದ ಅವರು ಬಹಳ ಗೊಂದಲದಲ್ಲಿ ಇರುತ್ತಾರೆ. ಆತನು ಹೇಳಿದ್ದು ಅರ್ಥ ಮಾಡಿಕೊಂಡವರು ತುಂಬಾ ಕಡಿಮೆ ಪ್ರಮಾಣದಲ್ಲಿ ಇರುತ್ತಾರೆ. ಆದ್ದರಿಂದ ಪಂಡಿತರ ಸಭೆಗಳಲ್ಲಿ ಜನರು ಸಾವಿರ, ಲಕ್ಷಗಳಲ್ಲಿ ಇರುತ್ತಾರೆ, ಯೋಗಿಗಳ ಸಭೆಗೆ ನೂರುಗಳಲ್ಲೇ ಜನರು ಇರುತ್ತಾರೆ.

ಈಗ ನಮ್ಮ ಹತ್ತಿರ ಕೂಡಾ ಬಹಳ ಕಡಿಮೆ ಜನರು ಬರುತ್ತಾರೆ. ಏಕೆಂದರೆ? ನಾವು ಸತ್ಯವನ್ನು ನುಡಿಯುತ್ತೇವೆ, ಸತ್ಯದ ವಿರುದ್ಧವಾಗಿ ನಾವು ಹೇಳಲಾರೆವು ಆದ್ದರಿಂದ ನಾವು ಹೆಚ್ಚಾಗಿ ಆತ್ಮದ ಕುರಿತು, ಆತ್ಮ ಜ್ಞಾನದ ಕುರಿತು ಹೇಳುತ್ತೇವೆ. ಅಸತ್ಯವಾದ ದೇಹಕ್ಕೆ, ಪ್ರಪಂಚಕ್ಕೆ ಬಹಳ ಕಡಿಮೆ ಪ್ರಾಮುಖ್ಯತೆ ಕೊಡುತ್ತೇವೆ. ಆದರೆ ಪ್ರಪಂಚವೆಲ್ಲಾ ಅಸತ್ಯದಲ್ಲಿಯೇ ಜೀವಿಸುತ್ತಿದ್ದಾರೆ. ಪ್ರಪಂಚದಲ್ಲಿ ಇರುವ ಎಲ್ಲವು ಅಸತ್ಯವೇ. ಆದ್ದರಿಂದ ನಾವು ಈ ಸಂಸಾರ, ಸಂಪಾದನೆಗಳಂತವುಗಳಿಗೆ ಕಡಿಮೆ ಪ್ರಾಮುಖ್ಯತೆ ಕೊಡುತ್ತೇವೆ. ಶಾಶ್ವತವಾಗಿ ಇರುವ ಆತ್ಮಕ್ಕೆ, ಆತ್ಮ ಜ್ಞಾನಕ್ಕೆ, ಆತ್ಮ ಉನ್ನತಿಗೆ, ಆತ್ಮ ಲಾಭಕ್ಕೆ, ಆತ್ಮದ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತೇವೆ.

ಇಲ್ಲಿ ಯಾರದೂ ತಪ್ಪಿಲ್ಲ, ಅವರವರ ಸ್ಥಾಯಿಯಲ್ಲಿ, ಅವರವರ ಅವಗಾಹನೆಯಲ್ಲಿ ಆಚರಿಸುತ್ತಾ ಇರುತ್ತಾರೆ. ತಿಳಿದುಕೊಳ್ಳಿ ಸತ್ಯವನ್ನು ಆಶ್ರಯಿಸುವವನು ಮೋಕ್ಷಕ್ಕೆ ಹತ್ತಿರವಾದಂತೆ ಲೆಕ್ಕ. ಅಸತ್ಯವನ್ನು ಆಶ್ರಯಿಸಿದವರು ಮೋಕ್ಷಕ್ಕೆ ದೂರವಾಗಿರುತ್ತಾರೆ. ಮೋಕ್ಷಕ್ಕೆ ಹತ್ತಿರವಾದರು ಅವರು ದುಃಖದಿಂದ ಹೊರಗೆ ಬರುತ್ತಾ ಇರುತ್ತಾರೆ. ಮೋಕ್ಷಕ್ಕೆ ದೂರವಾದವರು ಹೆಚ್ಚು ದುಃಖವನ್ನು ಪಡುತ್ತಿರುತ್ತಾರೆ.

ಆದ್ದರಿಂದ ಹಿರಿಯರು, ಯೋಗಿಗಳು, ಬುದ್ಧರು, ಪತ್ರೀಜಿಯವರು ಅಂತಹವರು ಏನು ಹೇಳಿರುವರೆಂದರೆ? ಈ ಅಂಧ ವಿಶ್ವಾಸಗಳನ್ನು ಬಿಡಲು ಹೇಳಿದ್ದಾರೆ. ಈ ಅಂಧ ವಿಶ್ವಾಸಗಳು ಅಂದರೆ ಮೂಢನಂಬಿಕೆಗಳು ಮತಗಳ ಪರವಾಗಿರುತ್ತವೆ, ಕುಲಗಳ ಪರವಾಗಿರುತ್ತವೆ. ಕುಟುಂಬ ಪರವಾಗಿರುತ್ತವೆ, ಪ್ರಾಂತೀಯ ಪರವಾಗಿರುತ್ತವೆ. ದೇಶೀಯವಾಗಿ ಕೂಡಾ ಇರುತ್ತವೆ.

ಸುಮ್ಮನೆ ಅವಗಾಹನೆಗೆಕ್ಕೋಸ್ಕರ ಕೆಲವು ಉದಾಹರಣೆಗಳನ್ನು ತಿಳಿದು ಕೊಳ್ಳೋಣ. ಹಿಂದೂ ಮತಗಳಲ್ಲಿ ಇರುವಂತಹ ಅಂಧ ವಿಶ್ವಾಸವೇನೆಂದರೆ? ಹಣೆಗೆ ತಿಲಕವಿಟ್ಟುಕೊಳ್ಳುವುದು, ಪುಣ್ಯವೆಂದೂ, ಇಟ್ಟುಕೊಳ್ಳದಿದ್ದರೆ ಪಾಪವೆಂದೇನು ಇಲ್ಲ, ಅದು ಅವರವರ ಇಷ್ಟಕ್ಕೆ ಬಿಟ್ಟಿದ್ದು.

ಅದೇ ಕ್ರಿಶ್ಚಿಯನ್ನರಾದರೆ ತಿಲಕ(ಕುಂಕುಮ) ಇಟ್ಟುಕೊಂಡರೆ ಪಾಪವೆಂದು ಭಾವಿಸುತ್ತಾರೆ. ಕ್ರಿಶ್ಚಿಯನ್ನರು ಯಾರಾದರೂ ಕುಂಕುಮವಿಟ್ಟರೆ ಬಹಳ ಹೀನವಾಗಿ ಕಾಣುತ್ತಾರೆ. ಆ ಮತದ ಅಂಧ ವಿಶ್ವಾಸವಿದು. ಈಗ ಇಟ್ಟುಕೊಂಡರೆ ಯಾರಿಗೇನಾಗಬೇಕಿದೆ? ಇಟ್ಟುಕೊಳ್ಳುತ್ತಿದ್ದರೆ ಯಾರಿಗೆ ಬೇಕಾಗಿದೆ? ಅದೇ ಮಸ್ಲಿಮರಲ್ಲಿ ಇರುವ ಅಂಧ ವಿಶ್ವಾಸವೆಂದರೆ ಹೆಣ್ಣುಮಕ್ಕಳು ಬುರಖಾ ಹೊದೆದುಕೊಳ್ಳುತ್ತಾರೆ. ಅಲ್ಲಿ ಬುರಖಾ  ಹೊದೆದುಕೊಳ್ಳದಿದ್ದರೆ ದೊಡ್ಡ ಪಾಪವನ್ನು ಮಾಡಿದಂತೆ ಲೆಕ್ಕ. ಅದು ಅವರ ಮತದಲ್ಲಿರುವ ವಿಶ್ವಾಸ. ಹಾಗೆಯೇ ಯಾವ ಮತದಲ್ಲಿ ಅಂಧವಿಶ್ವಾಸವಿದ್ದವರು, ಆ ಮತದ ಸಂಪ್ರದಾಯದಂತೆ ಆಭರಣಗಳನ್ನು ಧರಿಸುತ್ತಾರೆ.

ನೋಡಿ ಹಿಂದೂಗಳಾದರೆ ಕೊರಳಲ್ಲಿ ಸರವನ್ನು ಹಾಕಿಕೊಳ್ಳುತ್ತಾರೆ. ಅದರಲ್ಲಿ ಆಂಜನೇಯಸ್ವಾಮಿಯೋ, ಲಕ್ಷ್ಮೀದೇವಿಯೋ, ವೆಂಕಟಸ್ವಾಮಿಯೋ ಇರುತ್ತದೆ. ಅದೇ ಕ್ರಿಶ್ಚಿಯನ್ನರಾದರೆ ಶಿಲುಬೆಯ ಸರವನ್ನು ಹಾಕಿಕೊಳ್ಳುತ್ತಾರೆ. ಅವರು ಮುಸ್ಲೀಮನಾದರೆ ಅರ್ಧ ಚಂದ್ರನನ್ನು ಧರಿಸುತ್ತಾರೆ. ಹೀಗೆ ಅವರವರಿಗೆ ಅವರ ನಂಬಿಕೆ ಹಾಗೆಯೇ ಉಂಗುರಗಳು ಇರುತ್ತವೆ. ಎಲ್ಲರೂ ಧರಿಸುತ್ತಾರೆ. ಉಂಗುರಗಳ ಮೇಲೆಯೂ ಆ ಮತದ ವಿಶ್ವಾಸಗಳು ಕಾಣಿಸುತ್ತಾ ಇರುತ್ತವೆ.

ಸೃಷ್ಟಿಯಲ್ಲಿ ನೀವು ಏನು ಇಟ್ಟುಕೊಳ್ಳುತ್ತೀರಿ? ಏನು ಹಾಕಿಕೊಳ್ಳುತ್ತೀರಿ? ಹೇಗೆ ಇರುತ್ತೀರಿ? ಎನ್ನುವುದು ಮುಖ್ಯವಲ್ಲ. ನೀವು ಸತ್ಯವನ್ನು ಆಶ್ರಯಿಸುತ್ತಿದ್ದೀರಾ? ಇಲ್ಲವೇ ಸತ್ಯದಲ್ಲಿ ಜೀವಿಸುತ್ತಿದ್ದೀರಾ? ಎನ್ನುವುದು ಮುಖ್ಯ.

ಒಂದು ವೇಳೆ ನಿಮ್ಮಲ್ಲಿ ವಿಭಿನ್ನವಾದ ಪ್ರತ್ಯೇಕತೆಗಳು ಇದ್ದರೆ ಅಂಧವಿಶ್ವಾಸ ಇದ್ದಂತೆಯೇ! ಕಾರಣ ಎಲ್ಲರೂ ಆತ್ಮಗಳೇ! ಎಲ್ಲರೂ ಒಂದೇ! ಇನ್ನೂ ಈ ಬೇಧಗಳು ಏಕೆ ಇರುತ್ತಿವೆ? ಬೇಧಗಳನ್ನು ತೋರಿಸುತ್ತಿರುವಿರಿ ಎಂದರೆ ಅಂಧ ವಿಶ್ವಾಸ ಇದ್ದಂತೆಯೇ! ಅಂದರೆ ಇನ್ನೂ ಸತ್ಯ ತಿಳಿದಿಲ್ಲವೆಂದೇ ಅರ್ಥವಲ್ಲವೆ? ಅದಕ್ಕಾಗಿ ಪತ್ರೀಜೀಯವರು ಕೈಗಳಿಗೆ ಕಟ್ಟಿದ ದಾರಗಳನ್ನು ಬಿಡಿಸಿಬಿಡುತ್ತಾರೆ.

ಯಾವುದಾದರೆ ಬುದ್ಧನು ಹೇಳಿದ್ದಾನೋ! ಅದೇ ಪತ್ರೀಜಿಯವರು ಮಾಡಿಸಿದ್ದಾರೆ. ಆದ್ದರಿಂದ ಯಾರು ಉತ್ತಮರು? ಯಾರು ಉತ್ತಮ ಪರುಷರು? ಅಂದರೆ ಬುದ್ದನ ಲೆಕ್ಕಾಚಾರದಲ್ಲಿ "ಅಂಧ ವಿಶ್ವಾಸಗಳ ಅಂತ್ಯ ನೋಡಿದವನು" ಅಂದರೆ ಬಿಟ್ಟವನು. ಇದ್ದರೆ ಪ್ರಮಾದಗಳೇನು ಇಲ್ಲಾ. ಕೆಲವು ಜನ್ಮಗಳು ಮುಂದುವರೆಯುತ್ತವೆ ಅಷ್ಟೇ. ಪತ್ರೀಜಿಯವರು ಹೇಳುತ್ತಾರಲ್ಲ ಆತಂಕ ಪಡುವಂತಾದ್ದು ಏನಿಲ್ಲಾ. ಎಷ್ಟು ಜನ್ಮಗಳಾದರೂ ತೆಗೆದುಕೊಳ್ಳಬಹುದೆಂದು.

ಆದರೆ ಯಾರಾದರೇ ನಾನು ಈ ದುಃಖದಿಂದ ಶಾಶ್ವತವಾಗಿ ಹೊರಬರಬೇಕು ಎನ್ನುವಂತಹ ಆಕಾಂಕ್ಷೆ ಇರುತ್ತದೆಯೋ! ಅವರು ಮೊದಲು ಈ ಅಂಧ ವಿಶ್ವಾಸಗಳಿಂದ ಹೊರ ಬರಬೇಕು.

## 2) "ಮೋಕ್ಷ ಹೊಂದಬೇಕು ಎನ್ನುವ ತೀವ್ರವಾದ ಅಪೇಕ್ಷೆಯುಳ್ಳವನು"

ಬುದ್ಧನು ಇನ್ನು ಏನು ಹೇಳಿದ್ದಾನೆ ಎಂದರೆ? "ನಿರ್ವಾಣ ತತ್ವ ವಿಜ್ಞಾನವನ್ನು ತಿಳಿದವನು" ಎಂದಿದ್ದಾರೆ. ಅಂದರೆ ಮೋಕ್ಷದ ಶ್ರೇಷ್ಠತೆಯನ್ನು ತಿಳಿದವನು ಎಂದು ಅರಿಯಬೇಕು.

ಆದ್ದರಿಂದ ಮೊದಲಿಗೆ ಮೋಕ್ಷವು ಏಕೆ? ಮೋಕ್ಷವನ್ನು ಹೊಂದಿದರೆ ಬರುವ ಲಾಭವೇನು? ಮೋಕ್ಷದ ವಿಶೇಷತೆ ಏನು? ಇದೆಲ್ಲವು ತಿಳಿದವನು ಆಗಿರಬೇಕು. ಅಂತಹವನಿಗೆ ಮೋಕ್ಷವನ್ನು ಹೊಂದಬೇಕು ಎನ್ನುವ ಆಕಾಂಕ್ಷೆ ಇರುತ್ತದೆ. ಅಂತಹವರನ್ನು "ಮುಮುಕ್ಷುವು" ಎನ್ನುತ್ತಾರೆ.

ಶಂಕರಾಚಾರ್ಯರವರು ಹೇಳಿದರೂ, ಶಿರಡಿ ಬಾಬಾ ಹೇಳಿದರೂ,, ಯಾರು ಹೇಳಿದರೂ ಅದನ್ನೇ ಹೇಳುತಾರೆ. ಆಂತಹ ಆಕಾಂಕ್ಷೆ ಯಾರಿಗೆ ಇರುತ್ತದೆ? ಆ ಕೋರಿಕೆ ಯಾರಿಗೆ ಇರುತ್ತದೆ? ಅಂದರೆ? ಅದರ ವಿಶೇಷತೆಯನ್ನು ತಿಳಿದವನಿಗೆ, ಆ ಲಾಭವು ತಿಳಿದವನಿಗೆ ಇರುತ್ತದೆ.

ಹಾಗೇ ಮುಮುಕ್ಷುವು ಸ್ಥಿತಿಗೆ ಬರಬೇಕು ಎಂದರೆ 350 ಜನ್ಮಗಳನ್ನು ದಾಟಿರಬೇಕು. ಇದರ ಒಳಗೆ ಇರುವ ಜನ್ಮಗಳಲ್ಲಿ ಇದ್ದವರಿಗೆ ಮೋಕ್ಷದ ಆಸಕ್ತಿ ಇರುವುದಿಲ್ಲ. ಎಷ್ಟೋತ್ತು ಭೋಗ, ಸುಖಗಳು, ಸಂಭ್ರಮಗಳು ಎನ್ನುವುದರ ಮೇಲೆಯೇ ಆಸಕ್ತಿ ಇರುತ್ತದೆ.

ಮತ್ತೆ ಪ್ರಾರಂಭ ಜನ್ಮದಲ್ಲಿ ಆದರೆ ತಿನ್ನುವುದು, ಕುಡಿಯುವುದು, ಮಲಗುವುದು ಅಷ್ಟೇ. ಆಗಲಿ ಏನು ಇರುವುದಿಲ್ಲ. ಎಲ್ಲವೂ ಜಂತುಗಳ ಲಕ್ಷಣಗಳೇ ಇರುತ್ತವೆ. ಪ್ರಾಣಿಗಳನ್ನು ನೋಡಿ, ಆ ಮೂರಲ್ಲದೆ ಬೇರೇನಾದರೂ ಬೇಕಾಗಿದೆಯೇ? ಇನ್ನೂ ಬೇರೇನಾದರೂ ಸಂಘರ್ಷವಿದೆಯೇ? ಅಂದರೆ ಇವನ್ನು ಬಿಟ್ಟು ಬೇರೇನು ಇರುವುದಿಲ್ಲ. ತಿನ್ನುವುದು, ಕುಡಿಯುವುದು, ಮಲಗುವುದು. ಹೀಗೆ ಜೀವಿಸುವವರು ತಮೋ ಗುಣದಲ್ಲಿ ಇದ್ದಂತೆ.

ರಜೋಗುಣದಲ್ಲಿ ಇರುವವರು ನಾನೇ ಶ್ರೇಷ್ಠನು ಎನ್ನಿಸಿಕೊಳ್ಳಬೇಕು, ಉತ್ತಮನು ಆಗಬೇಕು ಎಂದುಕೊಳ್ಳುತ್ತಾರೆ. ಎಲ್ಲರ ಮೇಲೆ ಅಧಿಕಾರ ಚಲಾಯಿಸಬೇಕು ಎನ್ನುವ ಸ್ಥಿತಿಗೆ ಬರುತ್ತಾರೆ. ಅವರನ್ನು ಬೇಡ ಎನ್ನುವವರ ಮೇಲೆ ಕೋಪ ಕೂಡಾ ಇರುತ್ತದೆ. ಈ ರಜೋ ಗುಣದಲ್ಲಿಯೂ, ತಮೋ ಗುಣದಲ್ಲಿಯೂ ಬೇಡವಾದ ಎಷ್ಟೋ ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ಕಷ್ಟಗಳು ಬರುತ್ತವೆ.

ಇನ್ನೂ ಕೆಲವು ಜನರನ್ನು ನಾವು ನೋಡುತ್ತೇವೆ ಹೆಂಡತಿಯರು ದುಡಿದದ್ದನ್ನೂ ಕೂಡಾ ಕಸಿದುಕೊಳ್ಳುತ್ತಾರೆ. ಈಗ ಸರ್ಕಾರದವರು ಪಿಂಚಣಿ ಕೊಡುತ್ತಾರೆ. ಆ ಹಣವನ್ನು ಕೂಡಾ ಗಂಡಸರಿಗೆ ಕೊಟ್ಟುಬಿಡಬೇಕು. ತಂದೆ ಇದ್ದರೆ ತಂದೆಗೆ, ಗಂಡನಿದ್ದರೆ ಗಂಡನಿಗೆ ಕೊಡಬೇಕು.

ಕೆಲವು ಜನರು ಪದವಿಗಳನ್ನು ಪಡೆಯುತ್ತಾರೆ. ಆದರೆ ಪ್ರಜೆಗಳನ್ನು ಹಿಡಿಸಿಕೊಳ್ಳುವುದಿಲ್ಲ. ಮಾಡಬಾರದ ಅಕ್ರಮಗಳನ್ನು ಮಾಡಿ ಸಂಪಾದನೆ ಮಾಡುತ್ತಾರೆ. ಕೊನೆಗೆ ಮೇಲೆ ಹೋಗಿಬಿಡುತ್ತಾನೆ, ಸಂಪಾದನೆಗಾಗಿ ಮಾಡಿದ ಪಾಪಗಳು ಮಾತ್ರ ಬರುತ್ತವೆ. ಅದರಿಂದ ಮತ್ತೆ ಇನ್ನೊಂದು ಜನ್ಮವನ್ನು ಪಡೆದುಕೊಂಡು ಎಷ್ಟೋ ಕಷ್ಟಗಳನ್ನು ಪಡುತ್ತಾನೆ.

ಹೀಗೆ ಕೆಲವು ಜನ್ಮಗಳಲ್ಲಿ ಕಷ್ಟಗಳನ್ನು ಪಡುತ್ತಿದ್ದರೆ ಏತಕ್ಕೆ ಕಷ್ಟಗಳು? ಎನ್ನುವ ಆಲೋಚನೆ ಮೊದಲಾಗುತ್ತದೆ. ಆಗ ಮೆಲ್ಲಗೆ ಗುರುವನ್ನು ಆಶ್ರಯಿಸಿ ಚೆನ್ನಾಗಿರಬೇಕು. ತಪ್ಪುಗಳು ಮಾಡಿದರೆ ಮತ್ತೆ ಕಷ್ಟಗಳು ಬರುತ್ತವೆ ಎಂದು ತಿಳಿದುಕೊಳ್ಳುತ್ತಾನೆ. ಚೆನ್ನಾಗಿ ಇರಲು ಪ್ರಯತ್ನಿಸುತ್ತಾ ಕೆಲವು ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ.

ಸಾತ್ವಿಕ ಗುಣದಲ್ಲಿ ಬರುತ್ತಾರೆ. ಮೆಲ್ಲಗೆ ತಪ್ಪುಗಳನ್ನು ಬಿಟ್ಟು ಪುಣ್ಯಕಾರ್ಯಗಳನ್ನು ಸತ್ಕರ್ಮಗಳನ್ನು ಮಾಡುತ್ತಾ ಇರುತ್ತಾರೆ. ನಂತರ ಒಳ್ಳೆಯ ಜನ್ಮಗಳೇ ಬರುತ್ತವೆ. ಕಷ್ಟಗಳು ತಪ್ಪುತ್ತವೆ, ಆದರೆ ಜನ್ಮ ಎಂದಮೇಲೆ ಬಹಳ ಬಾಧೆಗಳು ಇರುತ್ತವೆ. ಕೆಲವು ವಿಧವಾದ ತೊಂದರೆಗಳು ಇರುತ್ತವೆ.

ನೋಡಿ ಪ್ರಕೃತಿ ವೈಪರೀತ್ಯಗಳಿಂದ ಅಂದರೆ ತುಫಾನುಗಳು, ಭೂಕಂಪನಗಳು ಪ್ರವಾಹಗಳು ಅಂತಹವುಗಳು ಬಂದಾಗ ಎಷ್ಟೋ ನೋವುಗಳು ಪಡುತ್ತಾರೆ. ಹಾಗೆಯೇ ಯುದ್ಧಗಳು ಆದರೆ ಇನ್ನೂ ಹೇಳೋದೇ ಬೇಡ. ಹೀಗೆ ಎಷ್ಟೋ ತೊಂದರೆಗಳು ಬಂದಾಗ ಏನು ಮಾಡಬೇಕು? ಎಂದು ಒಬ್ಬ ಸದ್ಗುರುವನ್ನು ಆಶ್ರಯಿಸುತ್ತಾರೆ. ಆಗ ಆತನು ಹೇಳುತ್ತಾನೆ ಜನ್ಮವಿದ್ದರೆ ನಿನ್ನ ಪರಿಸ್ಥಿತಿ ಹೀಗೆಯೇ ಇರುತ್ತದೆ. ಆದ್ದರಿಂದ ಜನ್ಮವಿಲ್ಲದೆ ಇರುವ ಪ್ರಯತ್ನವನ್ನು ಮಾಡು, ಆಗ ನಿನಗೆ ಯಾವ ತೊಂದರೆಯು ಇರುವುದಿಲ್ಲ. ಶರೀರ ಇದ್ದರೇನೆ ಈ ಬಾಧೆಗಳು, ಶರೀರವೇ ಬರದಿದ್ದರೆ ಈ ಬಾಧೆಗಳು ಇರುವುದಿಲ್ಲ ಅಲ್ಲವೇ? ಈ ಪ್ರಯತ್ನವನ್ನು ಮಾಡು ಮಗು ಅದನ್ನೇ ಮೋಕ್ಷವೆನ್ನುತ್ತಾರೆ, ಎಂದು ಗುರುವು ಬೋಧಿಸುತ್ತಾರೆ. ಅದಕ್ಕೆ ಏನು ಮಾಡಬೇಕೋ ಕೂಡಾ ಗುರುವು ಬೋಧಿಸುತ್ತಾನೆ.

ಹೀಗೆ ಯಾರಾದರೆ ಇವುಗಳಿಂದ ನಾನು ಪೂರ್ತಿಯಾಗಿ ಹೊರಬರಬೇಕು. ನನಗೆ ಜೀವನವೇ ಬೇಡ ಎನ್ನುವ ತೀವ್ರ ಆಕಾಂಕ್ಷೆ, ಅನ್ವೇಷಣೆ ಇರುತ್ತದೆಯೋ! ಅವರೇ ಗುರುಗಳು ಹೇಳಿದಂತೆ ಕಠಿಣ, ತೀವ್ರವಾದ ಸಾಧನೆ ಮಾಡುತ್ತಾರೆ. ಅಂತಹವರನ್ನು "ಮುಮುಕ್ಷುವು" ಎನ್ನುತ್ತಾರೆ.

ಆಗ ಅವರು ಗುರುವಿನ ಮೂಲಕ ಮೋಕ್ಷವೆಂದರೆ ಏನು? ಮೋಕ್ಷವನ್ನು ಹೊಂದಲು ಏನು ಮಾಡಬೇಕು? ಮೋಕ್ಷ ಹೊಂದಿದರೆ ಬರುವ ಲಾಭವೇನು? ಎನ್ನುವುದನ್ನು ತಿಳಿದುಕೊಳ್ಳುತ್ತಾರೆ.

ಆತನಿಗೆ ಗುರುವು ಹೇಳುತ್ತಾರೆ ಮಗು ಮೋಕ್ಷವೆಂದರೆ? ಪುನಃ ಜನ್ಮಗಳು ಇಲ್ಲದಿರುವ ಸ್ಥಿತಿ. ಅಂದರೆ ಹುಟ್ಟು ಸಾವುಗಳು ಇಲ್ಲದ ಸ್ಥಿತಿ, ಶಾಶ್ವತವಾಗಿ ದುಃಖದಿಂದ ಹೊರಬರುವ ಸ್ಥಿತಿ ಎಂದು ಹೇಳುತ್ತಾನೆ. ಅದಕ್ಕೆ "ಆತ್ಮ ಸಾಕ್ಷಾತ್ಕಾರ" ಹೊಂದುವ ಪ್ರಯತ್ನವನ್ನು ಮಾಡಬೇಕು ಎಂದು ಗುರುಗಳು ಹೇಳುತ್ತಾರೆ. ಅಂತಹವರನ್ನೇ ಮುಮುಕ್ಷುವು ಎನ್ನುತ್ತಾರೆ ಎಂದು ತಿಳಿದುಕೊಳ್ಳುತ್ತಾನೆ.

ಆತನಿಗೆ ಬೇಕಾದುದು ಅದೇ ತಾನೇ! ಆದ್ದರಿಂದ ಸದ್ಗುರುವು ಹೇಳಿದಂತೆ ನಿರಂತರ ಅಭ್ಯಾಸ ಮತ್ತು ತೀವ್ರ ಸಾಧನೆ ಮಾಡುತ್ತಾನೆ.

ಅದನ್ನೇ ಬುದ್ಧನು "ನಿರ್ವಾಣ ತತ್ವ ವಿಜ್ಞಾನವನ್ನು ತಿಳಿದವನು" ಎಂದು ಹೇಳಿದ್ದಾನೆ. ಅಂದರೆ ಮೋಕ್ಷದ ಶ್ರೇಷ್ಠತೆಯನ್ನು ತಿಳಿದುಕೊಂಡು, ಆ ಪ್ರಯತ್ನದಲ್ಲಿ ನಿಮಗ್ನನಾದವನು ಎಂದು ತಿಳಿದುಕೊಳ್ಳಬೇಕು. ಹಾಗೇ ಪ್ರಯತ್ನವನ್ನು ಮಾಡುವವನೇ ಉತ್ತಮ ಪುರುಷನು ಎಂದು ಬುದ್ಧನು ಹೇಳಿದ್ದಾನೆ.

ಆದ್ದರಿಂದ ಮಾನವರಲ್ಲೆಲ್ಲಾ ಉತ್ತಮನಾಗಿ ಆಗಬೇಕೆಂದರೆ? ಮೋಕ್ಷವನ್ನು ಹೊಂದಬೇಕು ಎಂದು ತೀವ್ರವಾದ ಆಕಾಂಕ್ಷೆಯನ್ನು ಹೊಂದಿರುವುದೊಂದೆ ಅಲ್ಲಾ, ಆ ಪ್ರಯತ್ನದಲ್ಲಿ ಲೀನವಾಗಿರಬೇಕೆಂದು ತಿಳಿದುಕೊಳ್ಳಬೇಕು. ಪತ್ರೀಜಿಯವರು ಕೂಡಾ ಇದೇ ಕೊನೆಯ ಜನ್ಮವಾಗಿಸಿಕೊಳ್ಳಬೇಕು ಎಂದು ಹೇಳುತ್ತಾರೆ.

ಶಿರಡಿ ಬಾಬಾ ಅವರು ಕೂಡಾ ಆತ್ಮಸಾಕ್ಷಾತ್ಕಾರವನ್ನು ಹೊಂದಬೇಕೆಂದರೆ? ಮುಕ್ತಿ ಹೊಂದಬೇಕು ಎನ್ನುವ ತೀವ್ರವಾದ ಕೋರಿಕೆಯಿರಬೇಕು ಎಂದಿದ್ದಾರೆ. ಅಂದರೆ ಯಾರಾದರೆ ತಾನು ಬದ್ಧನೆಂದು, ಅಂದರೆ ಬಂಧನದಲ್ಲಿ ಇರುವೆನೆಂದು ಗ್ರಹಿಸಿ, ಬಂಧನಗಳಿಂದ ಹೊರಗೆ ಬರಲು ದೃಢ ನಿಶ್ಚಯವುಳ್ಳವಾಗಿ ಅಂದರೆ (ಕೃತ) ತೀವ್ರವಾದ ನಿಶ್ಚಯವನ್ನು ಮಾಡಿದವನಾಗಿರಬೇಕು.

ಇನ್ನೂ "ಇತರೆ ಸುಖಗಳನ್ನು ಲಕ್ಷಿಸದೇ, ತೀವ್ರವಾಗಿ ಶ್ರಮಿಸಿ ಅಂದರೆ, ಚೆನ್ನಾಗಿ ಕಷ್ಟಪಟ್ಟು, ಆತ್ಮಸಾಕ್ಷಾತ್ಕಾರವನ್ನೇ ಹೊಂದಲು ಪ್ರಯತ್ನಪಡುವವರು ಆಧ್ಯಾತ್ಮಿಕ ಜೀವನಕ್ಕೆ ಅರ್ಹನು" ಎಂದು ಬಾಬಾರವರು ಹೇಳಿದ್ದಾರೆ.

ಅಂತಹವರನ್ನು "ಉತ್ತಮ ಪುರುಷನು" ಎಂದು ಬುದ್ಧನು ಬೋಧಿಸಿದ್ದಾನೆ.

ನಾನು ಅದಕ್ಕೇ ಹೇಳಿದೆ 350 ಜನ್ಮಗಳು ದಾಟದಿದ್ದರೆ ನೀವು ಭೀಮವರಂಗೆ ಬರಲಾರಿರಿ. ಈ 'ZOOM' ನಲ್ಲಿ ನಿರಂತರವಾಗಿ ಪಾಲ್ಗೊಳ್ಳುವುದಿಲ್ಲ. ನಿಮ್ಮಲ್ಲಿ ಮುಮುಕ್ಷತ್ವ ಲಕ್ಷಣಗಳು ಇರುವುದರಿಂದ, ಕ್ರಮ ತಪ್ಪದೆ, ಪ್ರತೀ ತಿಂಗಳು, ಪ್ರತಿದಿನವೂ ಆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೀರಿ.

ನಿಮ್ಮೆಲ್ಲರಿಗೂ ಗೊತ್ತು ಯಾವುದೋ ವಿಧದಲ್ಲಿ ಈ ಜನ್ಮವನ್ನು ದಾಟಿದರೂ, ಮತ್ತೆ ಇನ್ನೊಂದು ಜನ್ಮವು ತಪ್ಪುವುದಿಲ್ಲ. ಮತ್ತೇ ಸಮಸ್ಯೆಗಳು, ತೊಂದರೆಗಳು ತಪ್ಪುವುದಿಲ್ಲ. ಆದ್ದರಿಂದ ಇಷ್ಟು ಶ್ರದ್ಧೆ ತೋರಿಸುತ್ತಿದ್ದೀರಿ.

ಆದರೆ ಏನು ಮಾಡುತ್ತೀರಿ? ಕೆಲಸದ ಒತ್ತಡ, ಜವಾಬ್ದಾರಿಗಳಿಂದ ಎಷ್ಟೋ ಜನಗಳು ಹೈರಾಣ ಆಗುತ್ತಿರುತ್ತಾರೆ. ಎಲ್ಲಾ ತಿಳಿದರೂ, ಇದರಲ್ಲಿ ಬಂದರೂ ಕೂಡಾ ಅಂದುಕೊಂಡಿದ್ದನ್ನು ಮಾಡಲಾರದ ಪರಿಸ್ಥಿತಿಯಲ್ಲಿ ಎಷ್ಟೋ ಜನರಿದ್ದಾರೆ. ಹಾಗಾದರೆ ಯಾರಿಗೆ ಸಾಧ್ಯವಾಗುತ್ತದೆ ಅಂದರೆ? ಬುದ್ಧನು ಹೇಳಿದಂತೆ ಆ ಮೋಕ್ಷದ ಮಹತ್ವವನ್ನು ತಿಳಿದವನಿಗೆ. ಬುದ್ಧನು ಹೇಳಿದ್ದಾರಲ್ಲಾ? "ನಿರ್ವಾಣ ತತ್ವ ವಿಜ್ಞಾನವನ್ನು ತಿಳಿದವನು" ಎಂದು.

ಅಂದರೆ ನಿರ್ವಾಣವು ಸಾಮಾನ್ಯವಾದ ವಿಷಯವಲ್ಲ. ಅದಕ್ಕೆ ಬುದ್ಧನು ಅವರನ್ನು ಉತ್ತಮ ಪುರುಷನು ಅನ್ನುತ್ತಾರೆ. ಅಂದರೆ ಮಾನವರಲ್ಲಿ ಉತ್ತಮರು ಎಂದು ಹೇಳಿದ್ದಾರೆ. ಅಂದರೆ ಆ ಹಂತಕ್ಕೆ ಬರುವುದು ಅಂದರೆ ಸಾಮಾನ್ಯವಲ್ಲ ಎಂದು ತಿಳಿಯಬೇಕು.

ಅಚಿದರೆ ಎಷ್ಟೋ ತೊಂದರೆಗಳು ಇದ್ದರೂ ಭೀಮಾವರಂಗೆ ಬರುತ್ತಿದ್ದಾರೆ. ಅಂದರೆ ಬುದ್ಧನು ಹೇಳಿದಂತೆ **"ನಿರ್ವಾಣ ತತ್ವ ವಿಜ್ಞಾನವನ್ನು ತಿಳಿದವನು"** ಆಗಿರಬೇಕು.

ಅಂದರೆ ಮೋಕ್ಷದ ಪ್ರಾಮುಖ್ಯತೆ ತಿಳಿದುಕೊಂಡಿದ್ದರೇನೆ ಇಷ್ಟು ಪಟ್ಟುಬಿಡದೆ ಬರಬಲ್ಲರು.

ಬುದ್ಧನು ಹೇಳಿರುವುದು ಸಾಮಾನ್ಯ ವಿಷಯಗಳಲ್ಲ. ನಾವು ಕೂಡಾ ಪುರುಷರಲ್ಲಿ ಉತ್ತಮ ಪುರುಷರು ಆಗಬೇಕು. ಆ ಲಕ್ಷಣಗಳನ್ನು ಸಂಪಾದಿಸಿಕೊಳ್ಳಬೇಕು. ಒಂದು

ವೇಳೆ ಅವಲಕ್ಷಣಗಳು ಏನಾದರೂ ಇದ್ದರೆ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅಂತಹವರು ಏನಾದರೂ ಸಾಧಿಸಬಲ್ಲರು. ಭಗವದ್ಗೀತೆಯಲ್ಲಿ ಕೂಡಾ ಇಂತಹ ಪ್ರಯತ್ನವನ್ನು ಮಾಡಿದವರು. ಈ ಜನ್ಮದಲ್ಲಿ ಅಲ್ಲದಿದ್ದರೂ, ಒಂದು, ಎರಡು ಜನ್ಮಗಳಲ್ಲಿ ಖಂಡಿತವಾಗಿ ಸಾಧಿಸುತ್ತಾರೆ ಎಂದು ಬೋಧಿಸಲಾಗಿದೆ.

ಮೊದಲಿಗೆ ಯಾವ ಪ್ರಯತ್ನವೂ ಮಾಡದಿದ್ದರೆ ಬಹಳ ಜನ್ಮಗಳು ಹಿಡಿಯುತ್ತವೆ. ಈ ಪ್ರಯತ್ನವನ್ನು ಮಾಡಿದರೆ ಕಡಿಮೆ ಜನ್ಮಗಳಲ್ಲಿ ಸಾಧಿಸಬಲ್ಲರು. ಆದ್ದರಿಂದ ಆ ನಿರ್ವಾಣವನ್ನು, ಮೋಕ್ಷವನ್ನು ಹೊಂದಬೇಕೆಂದರೆ ಅದರ ಪ್ರಾಮುಖ್ಯತೆಯನ್ನು ತಿಳಿದಿರಬೇಕು. ಅದು ಸ್ವಲ್ಪ ಅನುಭವಪೂರ್ವಕವಾಗಿ ತಿಳಿದರೆ ಆಕಾಂಕ್ಷೆ ಇನ್ನೂ ಹೆಚ್ಚಾಗಿರುತ್ತದೆ.

## (3) ಸಂಸಾರ ಬಂಧನಗಳಿಂದ ಹೊರಬಂದವನು :

ಹಾಗೆಯೇ ಬುದ್ಧನು "ಭವ ಬಂಧನಗಳಿಂದ ಹೊರ ಬಂದವನು" ಅಂದರೆ ಸಂಸಾರ ಬಂಧನಗಳಿಂದ ಹೊರಬಂದವನು ಎಂದು ತಿಳಿಯಬೇಕು. ಅಂದರೆ ಸಂಸಾರವನ್ನು ಬಿಟ್ಟು ಹಿಮಾಲಯಕ್ಕೆ, ಅರಣ್ಯಗಳಿಗೆ ಹೋದವನು ಅಲ್ಲ.

ತುಂಬಾ ಜನರು ಹಾಗೆ ಅಂದುಕೊಳ್ಳುತ್ತಾರೆ. ಆದರೆ ಸಂಸಾರದ ಮೇಲಿನ ಮಮಕಾರವನ್ನು ಬಿಟ್ಟವನು ಎಂದು ತಿಳಿದುಕೊಳ್ಳಬೇಕು. ತುಂಬಾ ಜನರು ಹೆಂಡತಿಯನ್ನು ಬಿಟ್ಟು, ಗಂಡನನ್ನು ಬಿಟ್ಟು ಹೊರಟು ಹೋಗುವುದು ಎಂದುಕೊಂಡಿದ್ದಾರೆ. ಆದರೆ ಅವರ ಮೇಲೆ ಇರುವ ಮಮಕಾರ ಬಿಡಬೇಕು. ಹಾಗೆಯೇ ಓದುವ ವಿದ್ಯೆಯನ್ನು ಬಿಡುವುದು ಅಲ್ಲ, ಉದ್ಯೋಗವನ್ನು ಬಿಟ್ಟು ಬಿಡುವುದು ಅಲ್ಲ, ಸಂಪಾದನೆಯನ್ನು ಬಿಟ್ಟು ಬಿಡುವುದು ಅಲ್ಲ. ಎಲ್ಲವೂ ಇರಬೇಕು ಆದರೆ ಅವುಗಳ ಮೇಲಿನ ಮಮಕಾರವನ್ನು ಬಿಡಬೇಕು. ಅಂದರೆ ತಾವರೆ ಹೂವಿನ ಮೇಲಿನ ನೀರಿನ ಹನಿಯ ಹಾಗೆ ಜೀವಿಸಬೇಕು. ನೀವು ಗಮನಿಸಿದರೆ ಆ ನೀರಿನ ಹನಿ ತಾವರೆ ಹೂವಿನ ಜೊತೆಗೇ ಇರುತ್ತದೆ. ಆದರೆ ಅದಕ್ಕೆ ಅಂಟುವುದಿಲ್ಲ.

ಹಾಗೆಯೇ ಸಂಸಾರದಲ್ಲಿ ಹೆಂಡತಿಯ ಜೊತೆ ಗಂಡ ಇರುತ್ತಾನೆ. ಗಂಡನ ಜೊತೆ ಹೆಂಡತಿ ಇರುತ್ತಾಳೆ. ಮಕ್ಕಳೊಂದಿಗೆ ಇರುತ್ತಾರೆ. ಎಲ್ಲರ ಅವಶ್ಯಕತೆಗಳನ್ನು ಕೂಡಾ ನೋಡುತ್ತಾರೆ. ಆದರೆ ಅವರಿಗೆ ಏನಾದರೂ ಆದರೆ ದುಃಖಿಸುವುದಿಲ್ಲ, ಅಳುವುದಿಲ್ಲ. ಹೀಗಾಗೋಯ್ತುಲ್ಲಾ ನಮ್ಮವರಿಗೆ ಎಂದು ದುಃಖಪಡುವುದಿಲ್ಲ. ಆದರೆ ಬೇಕಾದದ್ದನ್ನು ಒದಗಿಸುತ್ತಾರೆ. ಅವಶ್ಯಕವಾದ ಸೇವೆಯನ್ನು ಮಾಡುತ್ತಾರೆ.

ನೋಡಿ, ವಯಸ್ಸಿಗೆ ಬಂದ ಮಕ್ಕಳು ಅವರ ಜೀವನವನ್ನು ಅವರು ನಿರ್ಣಯಿಸಿಕೊಳ್ಳಲಾರರೇ? ಅವರಿಗೆ ಏನು ಬೇಕೋ ಅವರಿಗೆ ತಿಳಿಯದೇ? ಏನು ಓದಬೇಕೋ ಅವರಿಗೆ ತಿಳಿಯದೇ? ಯಾವಾಗ ಮದುವೆ ಮಾಡಿಕೊಳ್ಳಬೇಕೋ ತಿಳಿಯದೇ? ಆದರೆ ತಂದೆ–ತಾಯಿಯರಿಗೆ ಅವರ ಮೇಲೆ ಮಮಕಾರ ಹೋಗುವುದಿಲ್ಲ.

ಆದ್ದರಿಂದ ತುಂಬಾ ಜನರು ನಮ್ಮವನು ಮದುವೆ ಮಾಡಿಕೊ ಎಂದರೆ ಮಾಡಿಕೊಳ್ಳುತ್ತಿಲ್ಲ ಎನ್ನುತ್ತಾರೆ. ಇನ್ನೂ ಕೆಲವರು ತಮಗೆ ಹೇಳದಂತೆ ಮದುವೆ ಮಾಡಿಕೊಂಡರೆಂದು ದುಃಖಪಡುತ್ತಾರೆ. ಮೊತ್ತದಲ್ಲಿ ಬಾಧೆ ತಪ್ಪುವುದಿಲ್ಲ. ಹೀಗೆ ಯಾರು ದುಃಖಿಸುತ್ತಾರೆ ಎಂದರೆ ಮಮಕಾರ ಇದ್ದವರು.

ಬುದ್ಧನು ಹೇಳಿದಂತೆ ಅವರು ಸಂಸಾರ ಬಂಧನದಲ್ಲಿ ಹೊರಬಂದಿರುವುದಿಲ್ಲ. ಅವರು ಅಜ್ಞಾನದಲ್ಲಿ ಇದ್ದಾರೆ. ಅದಕ್ಕೆ ಶಂಕರಾಚಾರ್ಯರವರು ಏನೆಂದಿದ್ದಾರೆ. ಅಂದರೆ?

ಮಾತಾ ನಾಸ್ತಿ, ಪಿತಾ ನಾಸ್ತಿ,
ನಾಸ್ತಿ ಬಂಧು ಸಹೋದರಃ
ಅರ್ಥಂ ನಾಸ್ತಿ, ಗೃಹಂ ನಾಸ್ತಿ,
ತಸ್ಮಾತ್ ಜಾಗ್ರತ ಜಾಗ್ರತ ॥

**ತಾತ್ಪರ್ಯ :** ತಾಯಿ, ತಂದೆ, ಬಂಧುಗಳು, ಅಣ್ಣತಮ್ಮಂದಿರು, ಧನ, ಮನೆ ಇವೆಲ್ಲವೂ ಮಿಥ್ಯವೇ. ಅಂದರೆ ಮಾಯೆ! ಇವೆಲ್ಲವೂ ನಿಜವಾಗಿಯೂ ಇಲ್ಲ. ಆದ್ದರಿಂದ ಓ ಮನುಷ್ಯರೇ, ಜಾಗ್ರತೆಯಾಗಿ ಇರಿ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಮಿಥ್ಯವೇ ಎಂದರೆ ಮಾಯೆ. ಇಲ್ಲದ್ದನ್ನು ಇರುವಂತೆ ಕಾಣಿಸುತ್ತವೆ. ಇಲ್ಲದ್ದನ್ನು ಇವೆ ಎಂದುಕೊಳ್ಳುತ್ತಿರುತ್ತಾರೆ. ತಾಯಿಯಾಗಲಿ, ತಂದೆಯಾಗಲಿ, ಬಂಧುಗಳಾಗಲಿ, ಸಹೋದರನಾಗಲಿ, ಹಣವಾಗಲಿ, ಮನೆಯಾಗಲಿ ಇವೆಲ್ಲವೂ ಇವೆಯೆಂದು ಅಂದುಕೊಳ್ಳುತ್ತಾರೆ. ಆದರೆ ಯಾವುವು ಇಲ್ಲ.

ಇಲ್ಲದಿರುವುದರ ಮೇಲೆ ಮಮಕಾರವನ್ನು ಹೆಚ್ಚಿಸಿಕೊಳ್ಳುತ್ತಿರುವೆ. ಮಮಕಾರದಿಂದ ಮಾಡಬಾರದ ಕೆಲಸಗಳನ್ನು ಮಾಡುತ್ತಿರುವೆ, ಅಧರ್ಮವಾಗಿ ವ್ಯವಹರಿಸುತ್ತಿರುವೆ, ಸೃಷ್ಟಿಯ ವಿರುದ್ಧವಾಗಿ ಕೆಲಸಗಳನ್ನು ಮಾಡುತ್ತಿರುವೆ, ಅವುಗಳ ಫಲಿತವಾಗಿ ಕಷ್ಟಗಳನ್ನು ತಂದುಕೊಳ್ಳುತ್ತಿರುವೆ. ಕಷ್ಟ ಬಂದಿದೆ. ಕಷ್ಟ ಬಂದಿದೆ ಎಂದು ಬಾಧೆ ಪಡುತ್ತೀಯಾ.

ದೇವರು ನನಗೆ ಎಷ್ಟು ಕಷ್ಟ ಕೊಡುತ್ತಿದ್ದಾನೆ? ಎಂದು ದೇವರನ್ನು ನಿಂದಿಸುತ್ತಿರುವೆ. ಇವೆಲ್ಲವುಗಳನ್ನು ಇವೆಯೆಂದು ಯಾರು ಅಂದುಕೋ ಎಂದರು? ಅವುಗಳಿಗಾಗಿ ಮಾಡಬಾರದ ಕೆಲಸಗಳನ್ನು ಯಾರು ಮಾಡು ಎಂದರು? ಕಷ್ಟಗಳನ್ನು ಯಾರು ತಂದುಕೋ ಎಂದರು? ಯಾರು ಬಾಧೆಪಡು ಎಂದರು?

ದೇವರು ಏನೋ ಮಾಡಿಬಿಟ್ಟನೆಂದು ದೇವರನ್ನು ನಿಂದಿಸುತ್ತೀಯಾ ಏಕೆ? ಎಷ್ಟು ಹೇಳಿದರೂ ನಿನಗೆ ಅರ್ಥವಾಗುವುದಿಲ್ಲವಲ್ಲಾ? ಈ ಶರೀರವು ಬಿಟ್ಟ ಮೇಲೆ ಅಂದರೆ ಸತ್ತ ಮೇಲೆ ಆ ಸಹಾಯಕರು ಬರುತ್ತಾರೆ. ನಿನ್ನನ್ನು ಮೇಲಿನ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಆಗ ತಿಳಿಯುತ್ತದೆ. ಏನಿದು ನನಗೆ ಎಷ್ಟೋ ಜನಗಳು ಇದ್ದಾರೆ ಎಂದುಕೊಂಡೆ. ಒಬ್ಬರಾದರೂ ನನ್ನ ಜೊತೆಗೆ ಬರುತ್ತಿಲ್ಲ, ಎಂತಹ ಆಶ್ಚರ್ಯ? ಎಲ್ಲರೊಂದಿಗೆ ಮಾತನಾಡಿದೆ, ಎಲ್ಲರೊಂದಿಗೆ ಬೆರೆತು ತಿರುಗಾಡಿದೆ, ಹೆಂಡತಿಯ ಜೊತೆ, ಗಂಡನ ಜೊತೆ ಕೂಡಿ ಸಂಸಾರ ಮಾಡಿದೆ. ಈಗ ಯಾರು ಇಲ್ಲವಲ್ಲಾ? ಎಂದು ಆಶ್ಚರ್ಯಪಡುತ್ತಾರೆ.

ಯಾವ ಮಗನಿಗಾಗಿ ಆದರೆ ಹಂಬಲಿಸುತ್ತಿರೋ? ದುಃಖಪಟ್ಟಿರೋ! ಯಾವ ಹಣಕ್ಕಾಗಿ ಅಧರ್ಮವಾಗಿ ವ್ಯವಹರಿಸಿದಿರೋ! ಪಾಪಗಳನ್ನು ಮಾಡಿದಿರೋ! ಯಾವ ಬಂಧುಗಳಿಗಾಗಿ ನೀವು ಮಾಡಬೇಕಾದ ಕೆಲಸಗಳನ್ನು ತ್ಯಜಿಸಿದಿರೋ! ಈಗ ಅವರೆಲ್ಲಾ ಎಲ್ಲಿ? ಅದಕ್ಕೆ ದೊಡ್ಡವರು ಒಂದು ಕಥೆಯನ್ನು ಹೇಳುತ್ತಾರೆ.

ಸತ್ತ ವ್ಯಕ್ತಿಯನ್ನು ಯಮಧೂತರು ಇಬ್ಬರು ಇಕ್ಕೆಲಗಳಲ್ಲಿ ಹಿಡಿದುಕೊಂಡು ಹೋಗುತ್ತಾರಂತೆ. ಈತನು ಏನು ಹೇಳುತ್ತಾನೆ ಎಂದರೆ? ಏನ್ರೀ ಒಂದು ಸಾರಿ ನಿಲ್ಲಿರಿ ಎನ್ನುತ್ತಾನೆ. ಆಗ ಅವರು ನಾವು ನಿಲ್ಲಬಾರದಯ್ಯಾ ಹೋಗಿಬಿಡುವುದೇ ಎಂದರು. ಅವನು ಮತ್ತೆ ಬೇಡಿಕೊಂಡನು, ಒಂದೇ ಒಂದು ಬಾರಿ ಎಂದು. ಹಾಗೇ ತಿರುಗಿ ಕೇಳಿದ ಮೇಲೆ ಅವರು ಸರಿ ಆಗಲಿ ಎಂದು ನಿಂತರು. ಆಗ ಅವನು ಹಿಂದೆ ತಿರುಗಿ ನೋಡಿದನು. ಹಿಂದೆ ತಿರುಗಿ ನೋಡಿದರೆ ಯಾರು ಇವನಿಗೋಸ್ಕರ ಬರುತ್ತಿಲ್ಲ. ಆಗ ಆ ಸಹಾಯಕರೊಡನೆ ಸರಿ ನಡೆಯಿರಿ ಎಂದನು. ಆಗ ಅವರು ಕೇಳಿದರು ಯಾಕಯ್ಯಾ ಇದುವರೆಗೆ ನಮ್ಮನ್ನು ಸಾಯಿಸಿದೆಯಲ್ಲಾ. ಈ ಮಾತ್ರಕ್ಕೆನಾ ಎಂದು.

ಇಲ್ಲಾ ಇಲ್ಲಾ ನಾನಿರುವಾಗ ಎಷ್ಟೋ ಜನರಿಗಾಗಿ ನಾನು ಕಷ್ಟಪಟ್ಟೆನು, ಎಷ್ಟೋ ಪಾಪಗಳನ್ನು ಮಾಡಿದೆನು. ತಪ್ಪುಗಳನ್ನು ಮಾಡಿದೆನು. ಈ ಸಮಯದಲ್ಲಿ ಅವರು ಯಾರಾದರೂ ನನ್ನ ಸಹಾಯಕ್ಕಾಗಿ ಬರುತ್ತಾರೆನೋ ಎಂದು ನೋಡಿದೆನು. ಯಾರೂ ಬರುತ್ತಿಲ್ಲಾ. ಈಗ ಅರ್ಥವಾಯ್ತು ಅನಾವಶ್ಯಕವಾಗಿ ಅವರಿಗಾಗಿ ಪಾಪಗಳನ್ನು

ಮಾಡಿದೆನು. ತೀರಾ ನೋಡಿದರೆ ಅವರು ಯಾರೂ ಬರುತ್ತಿಲ್ಲಾ. ಆದರೆ ಪಾಪಗಳು ಬರುತ್ತಿವೆ. ಯಾವುದಾದರೆ ನನ್ನದು ಎಂದುಕೊಂಡೆನೋ ಅವೆಲ್ಲಾ ಮಿಥ್ಯ, ಮಾಯೆ ಎಂದು ನನಗೆ ಅರ್ಥವಾಯಿತು. ಅವಶ್ಯಕವಿಲ್ಲದ ಕರ್ಮಗಳನ್ನು ಗಂಟು ಕಟ್ಟಿಕೊಂಡೆನೆಂದು ಅರ್ಥವಾಯಿತು ಎಂದನು.

ಆದ್ದರಿಂದ ಪಾಪಗಳನ್ನು ಮಾಡಬೇಡಿ, ಕರ್ಮಗಳನ್ನು ಹೆಚ್ಚಿಸಿಕೊಂಡು, ಜನ್ಮಗಳನ್ನು ಹೆಚ್ಚಿಸಿಕೊಳ್ಳಬೇಡಿ, ಕಷ್ಟಗಳನ್ನು ತಂದುಕೊಳ್ಳಬೇಡಿ, ಎಚ್ಚರವಾಗಿರಿ ಎನ್ನುತ್ತಾರೆ ಶಂಕರಾಚಾರ್ಯರು. ಇದನ್ನು ಅರ್ಥಮಾಡಿಕೊಂಡವನು ಅದೃಷ್ಟವಂತನು. ಉತ್ತಮ ಜ್ಞಾನಿ. ಅರ್ಥವಾಗದವನು ಅಜ್ಞಾನಿ, ಅವನಿಗೆ ಇನ್ನೂ ಹೆಚ್ಚಿನ ಜನ್ಮಗಳು ಹಿಡಿಯುತ್ತವೆ.

ಅರ್ಥಮಾಡಿಕೊಂಡವನು ಅದೃಷ್ಟವಂತನು, ಅಂತಹವರೇ ನೀವೆಲ್ಲಾ. ಅದಕ್ಕೆ ನೀವು ಭೀಮಾವರಂ ಬಿಡುವುದಿಲ್ಲ. ಎಲ್ಲಿ ತರಗತಿಗಳು ನಡೆದರೂ ಅದನ್ನು ತಪ್ಪಿಸುವುದಿಲ್ಲ. ಎಷ್ಟು ತೀವ್ರವಾದ ಸಾಧನೆ ಮಾಡಿದರೆ ಆಗ ನೀವು ಮಾಯೆಯಿಂದ ಹೊರಬರುತ್ತೀರಿ. ಮಾಯೆ ಇರುವವರಿಗೆ, ಅಷ್ಟು ಕಾಲವು, ಇವೆಲ್ಲವೂ ಇರುವಂತವೆ ಎಂದುಕೊಳ್ಳುತ್ತಾರೆ.

ಅದೇನ್ರೀ ಇಲ್ಲ ಎನ್ನುತ್ತಾರೆ. ಎಲ್ಲರೂ ಇದ್ದಾರೆ. ನನಗೆ ಎಲ್ಲಾವು ಇವೆ, ನನಗೆ ನಾನು ನನ್ನ ಕೈಯ್ಯಾರೇ ಕಟ್ಟಿದ ಮನೆ ಇದೆ, ಎಷ್ಟು ಕೋಟಿ ಖರ್ಚು ಮಾಡಿದ್ದೇನೆ ಅಂದುಕೊಳ್ಳುತ್ತಾರೆ. ಹೀಗೆ ಮಾತಾಡುತ್ತಾರೆ. ಅದೇನೋ ಅವನ ಮನೆ ಎಂದುಕೊಳ್ಳುತ್ತಾ, ಬಂದಿರುವ ಎಲ್ಲರನ್ನೂ ಕರೆದುಕೊಂಡು ತೋರಿಸುತ್ತಾನೆ. ಆದ್ದರಿಂದ ಆಧ್ಯಾತ್ಮಿಕವಾಗಿ ಬೆಳೆಯಬೇಕು. ಜ್ಞಾನವನ್ನು ಪಡೆಯಬೇಕು. ಅಂದರೆ ಮೊದಲು ಸಂಸಾರ ಬಂಧನದಿಂದ ಹೊರಬರಬೇಕು.

ಯಾವುದು ಮುಖ್ಯವೋ ಅರ್ಥ ಮಾಡಿಕೊಂಡರೆ ಅದನ್ನು ಆಧರಿಸಿ ಎಲ್ಲಾ ತನ್ನಷ್ಟಕ್ಕೆ ತಾನೇ ಅವೇ ಬರುತ್ತವೆ. ಆ ಸಂಸಾರ ಬಂಧನದಿಂದ ಯಾರಾದರೆ ಹೊರಬರುತ್ತಾರೋ. ಅವನು ಉತ್ತಮ ಪುರುಷನು ಎಂದಿದ್ದಾರೆ ಬುದ್ಧ ಭಗವಾನರು. ನೆನಪಿಟ್ಟುಕೊಳ್ಳಿ, ಯಾರಾದರೇ ಮಮಕಾರವನ್ನು ಬಿಡುತ್ತಾರೋ ಅವನು ಉತ್ತಮ ಪುರುಷನು. ಬುದ್ಧನು ಹೇಳಿದ್ದು, ಶಂಕರಾಚಾರ್ಯರು ಹೇಳಿದ್ದು ಒಂದೇ! ಎಂತಹ ಉತ್ತಮರು ಅವರು, ಸುಮ್ಮನೇ ಹೇಳುತ್ತಾರೆಯೇ?

ಯಾರಾದರೂ ಉತ್ತಮ ಪುರುಷನು ಅಂದರೆ ತುಂಬಾ ಉತ್ತಮವಾದವನು, ತುಂಬಾ ಬುದ್ಧಿ ಬೆಳೆಸಿಕೊಂಡವನು, ಜ್ಞಾನವನ್ನು ಸಂಪಾದಿಸಿಕೊಂಡವರು ಎಂದು

ಹೇಳಿಸಿಕೊಳ್ಳಲು ನೋಡಬೇಕು. ಈ ಮಾರ್ಗದಲ್ಲಿ ಬಂದಾಗ ಯಾರಾದರೂ ಸರಿ. ಆ ವಿಧವಾಗಿ ಪ್ರಯತ್ನಿಸಬೇಕು. ನನಗೆ ಪತ್ರೀಜಿಯವರು ಪರಿಚಯವಾದಾಗ ಆ ಹಟವೇ ಇದ್ದಿತು.

ಅವರು ಯಾವುದಾದರೂ ಸಭೆ ನಡೆಯುತ್ತಿದ್ದರೆ ಹಿರಿಯ ಮಾಸ್ಟರ್‌ಗಳು ಎಂದು ಹೇಳಿ ಕೆಲವು ಜನರನ್ನು ವೇದಿಕೆ ಮೇಲೆ ಕರೆಯುತ್ತಿದ್ದರು. ಮೊದಲಲ್ಲಿ ಅಂದರೆ ಪ್ರಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ನನಗೆ ಏನು ಅನ್ನಿಸುತ್ತಿತ್ತು ಎಂದರೆ? ಎಷ್ಟು ಉತ್ತಮವಾಗಿ ಮಾತನಾಡಿದರು ಇವರು. ಎಂತಹ ಉತ್ತಮ ವಿಷಯಗಳನ್ನು ಹೇಳಿದರು ಇವರು? ಇವರನ್ನು ಹಿರಿಯರ ಮಾಸ್ಟರ್‌ಗಳು ಎಂದು ವೇದಿಕೆ ಮೇಲೆ ಹತ್ತಿಸಿದ್ದಾರೆಂದರೆ ನಾವೇನು ಕಡಿಮೆ ಎಂದು ಹೇಳಿ, ಅಂದುಕೊಳ್ಳುತ್ತಿದ್ದೆನು.

ನಾನು ಕೂಡಾ ಅವರ ದೃಷ್ಟಿಯಲ್ಲಿ ಹಿರಿಯ ಮಾಸ್ಟರ್ ಎನ್ನಿಸಿಕೊಳ್ಳಬೇಕು ಅನ್ನುವ ಛಲ ಏರ್ಪಟ್ಟಿತು. ಕೃಷಿ ಮಾಡಿದೆ, ಕಷ್ಟಪಟ್ಟೆ. ಸಾಧನೆ ಮಾಡಿದೆನು. ಪುಸ್ತಕಗಳನ್ನು ಚೆನ್ನಾಗಿ ಓದಿದೆನು, ಹೇಳುವುದನ್ನೂ ಚೆನ್ನಾಗಿ ಅಭ್ಯಾಸ ಮಾಡಿದೆನು. ಮೆಲ್ಲ ಮೆಲ್ಲಗೆ ನಾನು ಕೆಲವು ಸ್ಥಳಗಳಲ್ಲಿ ಹೇಳಿದ ತರಗತಿಗಳನ್ನು ಕೇಳಿದವರು, ಪತ್ರೀಜಿಯವರು ಆ ಊರಿಗೆ ಬಂದಾಗ ರಾಘವರಾವುರವರು ಬಂದಿದ್ದರು. ತುಂಬಾ ಚೆನ್ನಾಗಿ ಹೇಳಿದರು ಎಂದು ಹೇಳುತ್ತಿದ್ದರು. ಅವರಿಗೆ ಹಾಗೆ ಅಲ್ಲಲ್ಲಿ ಹೇಳುತ್ತಿದ್ದರು.

ನೋಡಿ ಅನ್ನವು ಹೇಗೆ ಇದೆಯೆಂದು ತಿಳಿಯಬೇಕೆಂದರೆ ಒಂದು ಹಿಡಿ ಹಿಡಿದುಕೊಂಡರೆ ಸರಿಹೋಗುತ್ತದೆ. ಹಾಗೆಯೇ ಒಂದು ಪಲ್ಲೆಯೋ, ಒಂದು ಉಪ್ಪಿನ ಕಾಯಿಯೋ, ಸಾಂಬಾರೋ ರುಚಿ ತಿಳಿಯಬೇಕೆಂದರೆ ಸ್ವಲ್ಪವೇ ಬಾಯಲ್ಲಿ ಹಾಕಿಕೊಂಡರೆ ತಿಳಿಯುತ್ತದೆ. ಹಾಗೆಯೇ ಪತ್ರೀಜಿಯವರು ಕೂಡಾ ಎಲ್ಲರ ಮಾತುಗಳಿಂದ ತಿಳಿದು, ಪ್ರವರ್ತನೆಯಿಂದ ತಿಳಿದುಕೊಂಡರು. ಅವರು ಮೆಲ್ಲಮೆಲ್ಲಗೆ ನನ್ನನ್ನು ವೇದಿಕೆ ಮೇಲೆ ಕರೆಯಲು ಪ್ರಾರಂಭಿಸಿದರು, ಹಾಗೆಯೇ ಮೆಲ್ಲಗೆ ಅವರ ದೃಷ್ಟಿಯಲ್ಲಿ ಬಿದ್ದೆನು.

ತದನಂತರ ಪುಸ್ತಕಗಳನ್ನು ಬರೆಯುವುದು, ಭೀಮಾವರಂನಲ್ಲಿ 3 ದಿನಗಳ ತರಗತಿಗಳನ್ನು ನಿರ್ವಹಿಸುವುದು, ಆ ತರಗತಿಗಳು ಬಹಳ ಯಶಸ್ವಿಯಾಗಿ ನಡೆಯುವುದು, ಅದರಲ್ಲಿ ತುಂಬಾ ಮಂದಿ ಮಾಸ್ಟರ್‌ಗಳಾಗಿ ಬೆಳೆಯುವುದು. ಇವೆಲ್ಲವೂ ನೋಡಿ ಅವರ ದೃಷ್ಟಿಯಲ್ಲಿ ಒಬ್ಬ ಮುಖ್ಯವಾದ ವ್ಯಕ್ತಿಯಾಗಿ ಹೆಸರು ಗಳಿಸುವುದು ನಡೆದಿತ್ತು. ಹೀಗೆ ಉತ್ತಮನಾಗಿ ಬೆಳೆಯಬೇಕು ಎಂದರೆ ನಾವು ಏನು ಮಾಡಬೇಕೋ ಬುದ್ಧನು ಹೇಳಿದ್ದಾನೆ.

ಅಷ್ಟೇ ಅಲ್ಲಾ ಈ ಸಂಸಾರ ಬಂಧನಗಳಿಂದ ಹೊರಬರಬೇಕೆಂದು ಬುದ್ಧನು ಹೇಳಿದುದಲ್ಲದೇ, ಶಂಕರಾಚಾರ್ಯರು ಕೂಡಾ ಭಜಗೋವಿಂದಂನಲ್ಲಿ ಹೇಳಿದ್ದಾರೆ. ಅಂದರೆ, ಹೆಂಡತಿಯ ಮೇಲೆ, ಗಂಡನ ಮೇಲೆ, ಮಕ್ಕಳ ಮೇಲೆ ಮಮಕಾರವು ಇರಬಾರದು. ಅದಕ್ಕಾಗಿ ಏನು ಮಾಡಬೇಕು? ಎನ್ನುವುದನ್ನು ಶಂಕರಾಚಾರ್ಯರು ಹೇಳಿದ್ದಾರೆ. ಅವರು ಏನೆಂದಿದ್ದಾರೆ ಅಂದರೆ?

ಕಾತೇ ಕಾಂತಾ ಕಸ್ತೇ ಪುತ್ರಃ
ಸಂಸಾರೋ ಯಮತಿವ ವಿಚಿತ್ರಃ ।
ಕಸ್ಯ ತ್ವಂ ಕಃ ಕುತ ಆಯಾತಃ
ತತ್ತ್ವಂ ಚಿಂತಯ ತದಿಹಾ ಭ್ರಾತಃ ॥

ಓ ಸಹೋದರನೇ ಯಾರು ನಿನ್ನ ಹೆಂಡತಿ, ಯಾರು ನಿನ್ನ ಗಂಡ? ಯಾರು ನಿನ್ನ ಪುತ್ರ. ಈ ಸಂಸಾರವು ಅತ್ಯಂತ ವಿಚಿತ್ರವಾದದ್ದು. ಇದೆಲ್ಲವೂ ಮಾಯೆ... ಇದ್ದಂತೆ ಇರುತ್ತದೆ. ಆದರೆ ಆಮೇಲೆ ಏನು ಇರುವುದಿಲ್ಲ, ವಿಚಿತ್ರವೆಂದರೆ ಅದೇ. ಇಷ್ಟಕ್ಕೂ ನೀನು ಯಾರಿಗೆ ಸಂಬಂಧಿಸಿದವನು? ಆಲೋಚಿಸು. ನೀನು ಎಲ್ಲಿಂದ ಇಲ್ಲಿಗೆ ಬಂದಿದ್ದೀಯಾ? ಈ ತತ್ವವನ್ನು ವಿಚಾರಣೆ ಮಾಡಿದರೆ, ಅಂದರೆ ಆತ್ಮ ವಿಚಾರಣೆ ಮಾಡಿದರೆ ನಿನ್ನ ಭ್ರಾಂತಿ ಮೋಹಗಳೆಲ್ಲಾವು ನಾಶವಾಗುತ್ತವೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಅಂದರೆ ನಾವು ಆಲೋಚಿಸಬೇಕು. ಈ ಭವ ಬಂಧನಗಳಿಂದ ಅಂದರೆ ಈ ಸಂಸಾರ ಬಂಧನದಿಂದ ಹೊರಬರಬೇಕು ಅಂದರೆ, ಮಮಕಾರವನ್ನು ಬಿಡಬೇಕು. ಅಂದರೆ ಇವುಗಳನ್ನು ವಿಚಾರಣೆ ಮಾಡಬೇಕು. ಯಾರು ನಿನ್ನ ಹೆಂಡತಿ? ಯಾರು ನಿನ್ನ ಗಂಡ? ಯಾರು ನಿನ್ನ ಮಕ್ಕಳು? ಆಲೋಚಿಸು! ಎಲ್ಲರೂ ಆತ್ಮಗಳೇ. ಆತ್ಮರಾದವರು ಎಲ್ಲರೂ ವಿಧವಿಧವಾದ ಲೋಕಗಳಿಂದ ಬಂದವರು? ಏತಕ್ಕೆ ಬಂದಿದ್ದಾರೆ? ಏನು ಮಾಡಲು ಬಂದಿದ್ದಾರೆ? ಇವೆಲ್ಲವುಗಳ ಬಗ್ಗೆ ವಿಚಾರಣೆ ಮಾಡಬೇಕು ಎಂದಿದ್ದಾರೆ.

ಅವನ್ನೇ ನಾವು ಯಾವಾಗಲೂ ಮಾತನಾಡಿಕೊಳ್ಳುತ್ತಾ ಇರುತ್ತೇವೆ. ಏಕೆಂದರೆ ಎಷ್ಟು ಸಾರಿ ಹೇಳಿಕೊಂಡರೂ ನಮ್ಮಲ್ಲಿ ಇರುವ ಆ ಮಮಕಾರವು ಹೋಗುತ್ತಿಲ್ಲ. ಅದಕ್ಕೆ ಪದೇ ಪದೇ ನೆನಪು ಮಾಡಿಕೊಳ್ಳುತ್ತೇವೆ. ನಿನಗೆ ಮಗನು ಹುಟ್ಟಿದ್ದಾನೆ ಎಂದುಕೊಳ್ಳುತ್ತೀಯಾ. ಅವನು ಅದಕ್ಕಿಂತ ಮುಂಚಿನ ಜನ್ಮದಲ್ಲಿ ಒಬ್ಬ ಮುದುಕನಾಗಿ ಶರೀರವನ್ನು ತ್ಯಜಿಸಿದ್ದಾನೆ. ಅವನು ಅದಕ್ಕಿಂತ ಮುಂಚಿತ ಸೋಮಾರಿಯಾಗಿ ಎಷ್ಟೋ ಜನರಿಗೆ ನೋವನ್ನು ಕೊಟ್ಟಿರುತ್ತಾನೆ, ಅಳಿಸಿರುತ್ತಾನೆ.

ಅಳಿಸಿ, ಅಳಿಸಿ, ಬಂದಿದ್ದಾನೆ. ಸತ್ತ ನಂತರ ಅವನ ಆತ್ಮ ಹೊರಗೆ ಬರುತ್ತದೆ. ಬಂದು ಮೇಲಿನ ಲೋಕದಲ್ಲಿ ಕೆಲವು ದಿವಸಗಳು ಇದ್ದು ಮತ್ತೆ ಜನ್ಮ ತೆಗೆದುಕೊಳ್ಳಲು

ನಿನ್ನ ಗರ್ಭದಲ್ಲಿ ತೂರುತ್ತಾನೆ. ಇಷ್ಟಕ್ಕೂ ಅವನು ಯಾರು? ಇದಕ್ಕಿಂತಲೂ ಮುಂಚೆ ಎಷ್ಟೋ ಜನಗಳನ್ನು ನೋಯಿಸಿರುವವನೇ ನಿನ್ನ ಗರ್ಭದಲ್ಲಿ ಹೊಕ್ಕಿರುತ್ತಾನೆ. ಅವನನ್ನು ನೀನು ನನ್ನ ಮಗ, ನನ್ನ ಮಗಳು ಎಂದುಕೊಳ್ಳುತ್ತಿರುವೆ. ಅವರ ಮೇಲೆ ಮಮಕಾರವನ್ನು ಬೆಳೆಸಿಕೊಳ್ಳುತ್ತಿರುವೆ.

ಪತ್ರಿ ಮೇಡಂರವರು ಒಂದು ಬಾರಿ ಒಂದು ವಿಷಯವನ್ನು ಹೇಳಿದರು. ಯಾವಾಗ ಎಂದರೆ, ನಮ್ಮ ಮೇಡಂರವರಿಗೆ (ಅಗ್ನಿ ದುರಂತ) ಅಗ್ನಿ ಅಪಘಾತ ಆಗಿದ್ದಾಗ ಆಸ್ಪತ್ರೆಯಲ್ಲಿ ಇದ್ದರು. ಪತ್ರಿಯವರು ಏನು ಹೇಳಿದರೆಂದರೆ? ಪತ್ರಿ ಮೇಡಂರವರನ್ನ ಕರೆದುಕೊಂಡು ಹೋಗಿ ಎಂದರು. ಆಗ ಅವರು ಗುಣಪಡಿಸುತ್ತಿದ್ದರು, ಆಗ ಅವರು ಪಿರಮಿಡ್‌ನ್ನು ತೆಗೆದುಕೊಂಡು ಬಂದು ಮೇಡಂರವರ ಹಾಸಿಗೆ ಮೇಲೆ ಇಟ್ಟು ಧ್ಯಾನವನ್ನು ಮಾಡಿಸುತ್ತಿದ್ದರು.

ಪತ್ರಿ ಮೇಡಂ ರವರನ್ನು ನಾನೇ ಕಾರಿನಲ್ಲಿ ಹೋಗಿ, ಕಾರಿನಲ್ಲಿ ಕರೆದುಕೊಂಡು ಬರುತ್ತಿದ್ದೆ. ಆಗ ಅವರು ಒಂದು ವಿಷಯವನ್ನು ಹೇಳಿದರು. ಒಂದು ಕುಟುಂಬದಲ್ಲಿ ಅವರ ಮಗನಿಗೆ ಯಾವಾಗಲೂ ವಿಪರೀತವಾದ ಮೈಕೈ ನೋವಿತ್ತು. ನವೆ ಉಂಟಾಗುತ್ತಿತ್ತು. ಅವನಿಗೆ ಕೊಬ್ಬರಿ ಎಣ್ಣೆ ಸವರಿದರೆ ಚೆನ್ನಾಗಿರುತ್ತಿದ್ದ. ಸವರುವುದು ಬಿಟ್ಟು ಬಿಟ್ಟರೆ ನೆಲದ ಮೇಲೆ ಉರುಳುತ್ತಿದ್ದನಂತೆ. ಪುನಃ ಎಣ್ಣೆ ಸವರುತ್ತಿದ್ದರು. ಹಾಗೆಯೇ ನಿರಂತರವಾಗಿ ಸವರುತ್ತಿದ್ದರಂತೆ.

ಎಷ್ಟೋ ವೈದ್ಯರಿಗೆ ತೋರಿಸಿದರು ಕಡಿಮೆ ಆಗಲಿಲ್ಲ. ಇವನಿಗೆ ಈ ರೋಗ ಏಕೆ ಬಂದಿದಿಯೋ ಅವರಿಗೆ ಅರ್ಥವಾಗಲಿಲ್ಲ. ನಂತರ ಕೆಲವು ಕಾಲದ ನಂತರ ಮೇಡಂರವರಿಗೆ ತಿಳಿಯಿತಂತೆ. ಆ ಹುಡುಗನು ಹಿಂದಿನ ಜನ್ಮದಲ್ಲಿ ಇವರಿಗೆ ಶತೃವಂತೆ. ಇವರ ಮೇಲೆ ಸೇಡು ತೀರಿಸಿಕೊಳ್ಳಲು ಇವರ ಮಗನಾಗಿ ಹುಟ್ಟಿ ಈ ವಿಧವಾಗಿ ಸೇಡನ್ನು ತೀರಿಸಿಕೊಳ್ಳುತ್ತಿದ್ದನಂತೆ. ಇಷ್ಟಕ್ಕೂ ಆ ಹುಡುಗನಿಗೆ ಯಾವ ರೋಗವು ಇಲ್ಲವಂತೆ. ಅವರನ್ನು ಹಾಗೆ ಅಳಿಸಲು ಅವನು ಆ ನಾಟಕವನ್ನು ಮಾಡುತ್ತಿದ್ದನಂತೆ. ಅವನಿಗೆ ಬುದ್ಧಿ ಹೇಳಿದ ಮೇಲೆ ನಿಧಾನವಾಗಿ ಸರಿ ಹೋದನಂತೆ.

ಆದ್ದರಿಂದ ನನ್ನ ಮಕ್ಕಳು, ನನ್ನ ಮಕ್ಕಳು ಎಂದುಕೊಳ್ಳುತ್ತಾರೆ. ಆದರೆ ಶತೃಗಳೂ ಕೂಡ ಮಕ್ಕಳಾಗಿ ಬರಬಹುದೆಂದು ತಿಳಿದುಕೊಳ್ಳಬೇಕು. ಕೆಲವರು ಬೇಕೆಂತಲೇ ಆಸ್ತಿಗಳನ್ನು ನಾಶ ಮಾಡುತ್ತಾರೆ ಕೂಡಾ. ಆದ್ದರಿಂದ ಮಮಕಾರವನ್ನು ತೊರೆದುಬಿಡಿ.

ಎಲ್ಲರೂ ಕೆಲವು ಕೋರಿಕೆಗಳಿಂದ ಪಾಠಗಳನ್ನು ಕಲಿತುಕೊಳ್ಳಲು ಬಂದಂತಹ ಆತ್ಮಗಳೇ. ಆದ್ದರಿಂದ ನನ್ನ ಮಗ, ನನ್ನ ಮಗಳು ಅಂದುಕೊಂಡರೆ ನೀವು ಕಷ್ಟಗಳನ್ನು

ತಂದುಕೊಂಡಂತೆಯೇ. ಅದಕ್ಕೆ ಶಂಕರಾಚಾರ್ಯರು ಏನೆಂದಿದ್ದಾರೆ ಎಂದರೆ ಮೊದಲಿಗೆ ನೀನು ಎಲ್ಲಿಂದ ಬಂದೆ? ಅವನು ಎಲ್ಲಿಂದ ಬಂದಿದ್ದಾನೆ? ಮೊದಲಿಗೆ ಈ ಸಂಸಾರವೇ ಅತಿ ವಿಚಿತ್ರ ಎಂದದ್ದು. ಆದ್ದರಿಂದ ಈ ತತ್ವದ ಬಗ್ಗೆ ವಿಚಾರಣೆ ಮಾಡು ಎಂದಿದ್ದಾರೆ.

ಅದಕ್ಕೆ ನೋಡಿ ಕೆಲವು ಪತಿ–ಪತ್ನಿಯರು ಯಾವಾಗಲೂ ಜಗಳವಾಡಿಕೊಂಡೆ ಇರುತ್ತಾರೆ. ಎಷ್ಟು ಹೇಳಿದರೂ, ಎಷ್ಟು ಚೆನ್ನಾಗಿದ್ದರೂ ಅವರಲ್ಲಿ ಬದಲಾವಣೆ ಬರದು. ನಾನು ಎಷ್ಟು ಒಳ್ಳೆಯವನಾದರೂ, ಏಕೆ ಇವನು ಹೀಗೆ ಇದ್ದಾನೆ? ಹೀಗೆ ಇದ್ದಾಳೆ? ಎಂದು ಎಷ್ಟೋ ಬಾಧೆ ಪಡುತ್ತಾ ಇರುತ್ತಾರೆ, ಅವರಿಗೆ ಇವರಿಗೆ ಹೇಳುತ್ತಾ ಇರುತ್ತಾರೆ.

ಹಾಗೆಯೇ ಕೆಲವು ಜನರು ಹಿಂದೆ ಸ್ನೇಹವನ್ನು ಮಾಡಿ, ಉಪಕಾರವನ್ನು ಪಡೆದುಕೊಂಡವರು ಕೂಡಾ ಇದ್ದಾರೆ. ಅವರು ಎಷ್ಟೋ ಅನ್ಯೋನ್ಯವಾಗಿ ಇದ್ದಾರೆ. ಹೀಗೆ ವಿವಿಧ ಜೀವನಗಳು ಇರುತ್ತವೆ. ಆದ್ದರಿಂದ ಇವೆಲ್ಲವನ್ನೂ ತಿಳಿದುಕೊಳ್ಳಬೇಕು. ಏನು ತಿಳಿಯದೆ ಈಕೆ ನನ್ನ ಹೆಂಡತಿ, ಈತ ನನ್ನ ಗಂಡ, ಇವನು ನನ್ನ ಮಗ ಹೀಗೆ ಅಂದುಕೊಂಡರೆ ಸಾರಿನಲ್ಲಿ ಕಾಲಿಟ್ಟಂತೆಯೇ. ಆದುದರಿಂದ ಶಂಕರಾಚಾರ್ಯರು ಏನು ಹೇಳಿದ್ದಾರೆ ಎಂದರೆ ತುಂಬಾ ವಿಚಿತ್ರವಾದದ್ದು ಈ ಸಂಸಾರವು ಎಂದಿದ್ದಾರೆ.

ಅದಕ್ಕೆ ಬುದ್ಧನು ಈ ವಿಚಿತ್ರವಾದ ಸಂಸಾರ ಬಂಧನದಿಂದ ಹೊರ ಬಂದವನೇ ಉತ್ತಮ ಪುರುಷನು ಎಂದಿದ್ದಾರೆ. ಶಂಕರಾಚಾರ್ಯರು ಕೂಡಾ ತತ್ವ ವಿಚಾರಣೆ ಎಂದರೆ ಆತ್ಮ ವಿಚಾರಣೆ ಮಾಡಿ ಎಂದಿದ್ದಾರೆ. ಆಗ ನಿನ್ನ ಭ್ರಾಂತಿ, ಮೋಹಗಳೆಲ್ಲಾ ನಾಶವಾಗುತ್ತವೆ ಎಂದು ಹೇಳಿದರು.

ಆದ್ದರಿಂದ ಹಿರಿಯರು, ಹಿಂದಿನ ಜನ್ಮಗಳೆಲ್ಲಾ ನೋಡಿಕೊಂಡವರಿಗೆ ಎಲ್ಲವೂ ತಿಳಿಯುತ್ತವೆ. ಆದರೆ ನಮಗೇನು ತಿಳಿಯದು ಆದ್ದರಿಂದ ಸುಮ್ಮನೆ ಕೆಲಸಕ್ಕೆ ಬಾರದೆಲ್ಲಕ್ಕೂ ದುಃಖಪಡುತ್ತಿರುತ್ತೇವೆ. ಅಗತ್ಯವಿಲ್ಲದ ಮಮಕಾರಗಳನ್ನು ಬೆಳೆಸಿಕೊಳ್ಳುತ್ತೇವೆ. ಆದ್ದರಿಂದ ವಿಚಾರಣೆ ಮಾಡಿ ಈ ಭ್ರಾಂತಿ, ಮೋಹಗಳು ಅಂದರೆ, ನನ್ನ ಮಗ, ನನ್ನ ಮಗಳು, ನನ್ನ ಹೆಂಡತಿ, ನನ್ನ ಗಂಡ ಇವೆಲ್ಲವನ್ನೂ ಬಿಟ್ಟುಬಿಡು, ಧ್ಯಾನವನ್ನು ಮಾಡಿದರೆ ಇವೆಲ್ಲವೂ ತನ್ನಷ್ಟಕ್ಕೆ ತಾನೇ ಹೋಗುತ್ತವೆ ಎಂದು ತಿಳಿದುಕೊಳ್ಳಬಹುದು.

ಆಗ ನೀನು ಈ ಸಂಸಾರ ಬಂಧನಗಳಿಂದ ಹೊರ ಬರುತ್ತೀಯಾ. ಈ ವಿಧವಾದ ಆಲೋಚನೆ ಮಾಡುವವನು ಮಮಕಾರವನ್ನು ಬಿಡುತ್ತಾನೋ ಅವನೇ ಉತ್ತಮ ಪುರುಷನು. ಆದ್ದರಿಂದ ಅವರ ಜೊತೆ ಕೆಲವು ಅನುಭವಗಳು, ಪಾಠಗಳನ್ನು ಕಲಿಯುತ್ತಾರೆ.

ಯಾವುದೋ ಶಾರೀರಿಕ ಬಂಧ ಇರುವುದರಿಂದ ಅವರಿಗೆ ಯಾವುದರ ಅಗತ್ಯ ಬಂದರೆ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ನೋಡಿಕೊಳ್ಳಬೇಕು ಕೂಡಾ, ಅವರ

ಅವಶ್ಯಕತೆಗಳನ್ನು ಪೂರೈಸಬೇಕು. ನಿನ್ನ ತಂದೆ, ತಾಯಿಗಳು ನಿನ್ನನ್ನು ಹೇಗೆ ಬೆಳೆಸಿದರೋ, ನೀನು ಕೂಡಾ ಅವರನ್ನು ಬೆಳೆಸಬೇಕು. ರೆಕ್ಕೆಗಳು ಬಂದ ಮೇಲೆ ಪಕ್ಷಿಗಳು ತಮ್ಮ ಮರಿಗಳನ್ನು ಹೇಗೆ ಹೊರಗೆ ಕಳುಹಿಸುತ್ತವೆಯೋ! ನೀವು ಕೂಡಾ ಅವರಿಗೆ ಸ್ವತಂತ್ರ ನೀಡಬೇಕು. ಅವರ ಜೀವನವು ಚೆನ್ನಾಗಿರಬಹುದು, ಇರದೇ ಇರಬಹುದು. ಅವರು ಮಾಡಿದ ಕರ್ಮಗಳ ಪರಕಾರ ಜೀವನವಿರುತ್ತದೆ. ಅವರ ಹಣೆಬರಹವನ್ನು ನೀವು ಯಾರು ಬದಲಾಯಿಸಲಾರಿರಿ.

ಇನ್ನೊಂದು ವಿಷಯ, ಎಷ್ಟೋ ಪಾಪಗಳನ್ನು ಮಾಡಿದ್ದಾನೆ, ಎಷ್ಟೋ ಜನರನ್ನು ಮೋಸಗೊಳಿಸಿದ್ದಾನೆ. ಅಧರ್ಮವಾಗಿ ಸಂಪಾದನೆ ಮಾಡಿದ್ದಾನೆ. ಅವನು ಮತ್ತೆ ಜನ್ಮವನ್ನು ಪಡೆದ ಮೇಲೆ, ಅವನಿಗೆ ಏನು ಮಾಡಬೇಕೆಂದರೂ ಕೂಡಿ ಬರುವುದಿಲ್ಲ. ಹೊಡೆತ ಬೀಳುತ್ತದೆ. ಹೊಡೆತ ತಿಂದವನು ಎಂದು ಪುನಃ ಇನ್ನೊಂದು 5 ಲಕ್ಷಗಳೋ, 10 ಲಕ್ಷಗಳೋ ಕೊಟ್ಟು ಬಾಬು ಈ ಬಾರಿ ಜಾಗ್ರತೆಯಾಗಿ ಇಟ್ಟುಕೋ ಎಂದರೆ, ಅವನ ನೆತ್ತಿಯ ಮೇಲೆ ಶನಿಯು ಕುಳಿತಿಕೊಂಡಿದ್ದರೆ ಅವನೇನು ಬೆಳವಣಿಗೆ ಹೊಂದುತ್ತಾನೆ?

ನೀವು ಬಾಧೆಪಟ್ಟರೆ ನೀವೇನು ಮಾಡಬಲ್ಲಿರಿ. ಇನ್ನೂ ಸಾಲ ಮಾಡಿ ಇನ್ನೊಂದು ಹತ್ತು ಲಕ್ಷಗಳನ್ನು ಕೊಟ್ಟರೆ ಅವು ಹೋಗುತ್ತವೆ. ಅಂತಹವರು ಎಷ್ಟು ಜನರಿದ್ದಾರೆ. ಆದ್ದರಿಂದ ಅವನ ಜೀವನವನ್ನು ಅವನು ನೋಡಿಕೊಳ್ಳಲು ಬಿಟ್ಟುಬಿಡಿ. ನೀವು ಯಾರೂ ಅವನನ್ನು ಸುಧಾರಿಸಲಾರಿರಿ. ಅವನ ಕರ್ಮಗಳೇ ಅವನನ್ನು ಉತ್ತಮಗೊಳಿಸುತ್ತವೆ. ಕೆಲವು ಜನರು ಹಿಂದೆ ಮಾಡಿಕೊಳ್ಳದೇ ಇರಬಹುದು. ಆದರೆ ಈಗಲಾದರೂ ಮಾಡಿಕೊಳ್ಳಬೇಕು.

ಆದ್ದರಿಂದ ಗುರುತಿಟ್ಟುಕೊಳ್ಳಿ ಉತ್ತಮರು ಹೇಳಿದೆಲ್ಲವೂ ಉತ್ತಮವಾದ ವಿಚಾರಗಳು. ಜೀವನವನ್ನು ಅಳೆದು ತೂಗಿ ನಮಗೆ ಹೇಳಿದ್ದಾರೆ. ಸ್ವಲ್ಪ ಜಾಗ್ರತೆಯಾಗಿ ಅವನ್ನು ಅರ್ಥ ಮಾಡಿಕೊಂಡು ಆಚರಿಸಬೇಕು. ಆಗಲೇ ಜೀವನ ಆನಂದಮಯವಾಗಿರುತ್ತದೆ. ಇಲ್ಲದಿದ್ದರೆ ಯಾವಾಗಲೂ ದುಃಖಿಸುತ್ತಾ ಇರುತ್ತಾರೆ. ನನ್ನ ಜೀವನ ಏಕೆ ಹೀಗಾಗಿದೆ ಎಂದು ದುಃಖಿಸುತ್ತಾರೆ.

ಆದ್ದರಿಂದ ಅತಿಯಾದ ಮಮಕಾರ ಕೆಲಸಕ್ಕೆ ಬಾರದು. ಈ ಮಮಕಾರವು ಇದ್ದರೆ ದೇಹ ತ್ಯಜಿಸಿದ ನಂತರ ಭೂಮಿಯನ್ನು ಬಿಟ್ಟು ಹೋಗಲಾರದೆ ಪ್ರೇತಾತ್ಮಗಳಾಗುತ್ತಾರೆ. ಹೋಗಲಿ ನಿಜವಾಗಿಯೂ ಅವರೊಂದಿಗೆ ನಮಗೆ ಏನಾದರೂ ಸಂಬಂಧವಿದೆಯಾ? ಅವರೂ ಆತ್ಮಗಳೇ. ಅವರು ಎಲ್ಲಿಂದ ಬಂದಿರುವರೋ ನಮಗೆ ತಿಳಿಯದು. ನಾವೂ

ಆತ್ಮಗಳೇ. ನಾವು ಎಲ್ಲಿಂದ ಬಂದಿರುವೆವೋ ನಮಗೇ ಕೂಡಾ ತಿಳಿಯದು. ಪುನಃ ಯಾರ ದಾರಿಗೆ ಅವರು ಹೋಗಬೇಕಾದ್ದೇ! ಆದರೆ ಮಮಕಾರದಿಂದ ಎಷ್ಟೋ ನಷ್ಟವನ್ನು ಹೊಂದುತ್ತೇವೆ. ಆದ್ದರಿಂದ ಸಂಸಾರ ಬಂಧನಗಳಿಂದ ಹೊರ ಬೀಳಬೇಕು.

ಸಂಸಾರ ಬಂಧನಗಳಿಂದ ಹೊರಬರಬೇಕು ಎನ್ನುವುದರ ವಿಚಾರದ ಮೇಲೆ ಶಂಕರಾಚಾರ್ಯರು ಹೇಳಿದ ವಿಷಯವನ್ನು ತಿಳಿಯೋಣ.

ಕಾತೆ ಕಾಂತಾ ಧನಗತ ಚಿಂತಾ
ವಾತುಲ ಕೀಂ ತವ ನಾಸ್ತಿ ನಿಯಂತಾ
ತ್ರಿಜಗತಿ ಸಜ್ಜನ ಸಂಗತಿರೇಕಾ
ಭವತಿ ಭವಾರ್ಣವ ತರಣೇ ನೌಕ

**ತಾತ್ಪರ್ಯ :** ಓಯ್ ನಿನ್ನ ಹೆಂಡತಿ ಯಾರು? ನಿನಗೆ ಯಾವಾಗಲೂ ಹಣದ ಚಿಂತೆನಾ? ಬೇರೆ ಚಿಂತೆ ಇಲ್ಲವೇ? ನಿನ್ನನ್ನು ಸನ್ಮಾರ್ಗದಲ್ಲಿ ನಡೆಸುವವರು ಯಾರು ಇಲ್ಲವೇ?

ನೀನು ಮೂರು ಲೋಕಗಳಲ್ಲಿ ಹುಡುಕಿದರೂ ಕೂಡಾ ಸಾಗರದಂತಹ ಸಂಸಾರ ಬಂಧನದಿಂದ ದಾಟಿಸಿರುವವರು ಸಜ್ಜನ ಸಂಗದಿಂದ ಮಾತ್ರವೇ. ಬೇರೇನು ಇಲ್ಲವೆಂದು ತಿಳಿದುಕೋ! ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಆಲೋಚನೆ ಮಾಡಿ! ಶಂಕರಾಚಾರ್ಯರು ಏನು ಹೇಳಿದ್ದಾರೆ ಎಂದರೆ? ಸಂಸಾರವೆಂಬ ಸಾಗರದಲ್ಲಿ ಸಿಲುಕಿದ್ದೀಯಾ. ಏನು ಮಾಡಬೇಕೋ? ಯಾವ ಕಡೆ ಹೋಗಬೇಕು? ಎಂದು ದಿಕ್ಕು ತೋಚುತ್ತಿಲ್ಲ. ಸಮುದ್ರದಲ್ಲಿರುವವನಂತೆ ಯಾವ ದಿಕ್ಕಿನಲ್ಲಿ ಇದ್ದಾನೋ ತಿಳಿಯದ ಪರಿಸ್ಥಿತಿಯಲ್ಲಿ ಇದ್ದಾನೆ.

ಆದ್ದರಿಂದ ಹೆಂಡತಿ ಅನ್ನುತ್ತೀಯಾ, ಗಂಡನೆನ್ನುತ್ತೀಯಾ ಅಸಲಿಗೆ ಯಾರು ನಿನ್ನ ಹೆಂಡತಿ? ಯಾರು ನಿನ್ನ ಗಂಡ? ಮೊದಲು ಅದರ ಬಗ್ಗೆ ಆಲೋಚಿಸು. ಆತನು ಆತ್ಮನೇ ನೀನು ಆತ್ಮನೇ, ಎಲ್ಲಿಂದ ಬಂದಿದ್ದಿರಾ? ಮೇಲಿನ ಲೋಕಗಳಿಂದ ಬಂದಿದ್ದಿರಾ. ಯಾತಕ್ಕಾಗಿ ಬಂದಿದ್ದೀರಿ? ಅವರ ಪ್ರಣಾಳಿಕೆಗಳು ಬೇರೆ. ನಿನ್ನ ಪ್ರಣಾಳಿಕೆ ಬೇರೆ. ಯಾರಾದರೂ ಸರಿಯೇ ಆತ್ಮಗಳೇ. ಆತ್ಮದ ಲಕ್ಷ್ಯವೆಂದರೆ ತನ್ನ ಗಮ್ಯವನ್ನು ಸೇರುವುದು. ಅದಕ್ಕೋಸ್ಕರವೇ ಈ ದೇಹವನ್ನು ತೆಗೆದುಕೊಂಡು ಬರುತ್ತಾರೆ.

ಆದ್ದರಿಂದ ಅದರ ಬಗ್ಗೆ ಆಲೋಚಿಸು? ಅಷ್ಟೇ. ಆಗಲಿ ಹಣದ ಕುರಿತು ಭೋಗಗಳ ಬಗ್ಗೆ, ಸಂಪಾದನೆ ಕುರಿತು ಆಲೋಚನೇ ಆಗಲಿ ಇನ್ನೊಂದು ಆಲೋಚನೆ ಇಲ್ಲವೇ ನಿನಗೆ?

ಲೋಕದಲ್ಲಿ ಸಂಪಾದನೆ ಮಾಡುವುದು, ಮಜಾ ಮಾಡುವುದು, ಅಂದರೆ ಗಳಿಕೆ, ಮಜಾ ಉಡಾಯಿಸುವುದು ಬಿಟ್ಟರೆ ನಿನ್ನನ್ನು ಸರಿಯಾದ ಮಾರ್ಗದಲ್ಲಿ ನಡೆಸುವವರು ಯಾರು ಇಲ್ಲವೇ? ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಅವರು ಇನ್ನೂ ಏನೆಂದಿದ್ದಾರೆ ಎಂದರೆ? ನೀನು ಈ ಸಂಸಾರ ಸಾಗರದಲ್ಲಿ ಸಿಲುಕಿ ದುಃಖದಲ್ಲಿ ಮುಳಗಿ ಹೋಗಿದ್ದೀಯ. ಮತ್ತೆ ಈ ಸಂಸಾರ ಸಾಗರದಿಂದ ಹೊರಬರಬೇಕು ಎಂದರೆ ಮೂರು ಲೋಕಗಳಲ್ಲಿ ಹುಡುಕಿದರೂ ಕೂಡಾ ಈ ಸಾಗರವನ್ನು ದಾಟಿಸುವಂತಹುದು ಸಜ್ಜನರ ಸಂಗವೇ ಎಂದಿದ್ದಾರೆ.

ಸಜ್ಜನ ಎಂದರೆ ಸತ್ ಜನ. ಸತ್ಯವನ್ನು ಕುರಿತು ಹೇಳಿರುವವರ ಸಾಂಗತ್ಯ. ಸತ್ಯವೆಂದರೆ ಆತ್ಮ. ಆತ್ಮಜ್ಞಾನವನ್ನು ಬೊಧಿಸುವವರ ಸಾಂಗತ್ಯದ ಹೊರತು ಇನ್ನೊಂದು ನೌಕೆ ಇಲ್ಲವೆಂದು ಹೇಳಿದ್ದಾರೆ. ಆತನು ಈ ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ. ಸಾಗರವನ್ನು ದಾಟಬೇಕೆಂದರೆ ಹಡಗು ಬೇಕು. ಎಂತಹ ಹಡಗು? ಸಜ್ಜನರ ಸಾಂಗತ್ಯ ಅಂದರೆ ಸತ್ಯವನ್ನು ಕುರಿತು ಬೋಧಿಸುವಂತಹವರು. ಅಂದರೆ ಆತ್ಮವನ್ನು ಕುರಿತು, ಆತ್ಮಜ್ಞಾನವನ್ನು ಕುರಿತು ಬೋಧಿಸುವವರು ಅಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲವೆಂದಿದ್ದಾರೆ.

ಕೆಲವರು ರೊಗಗಳಿಂದ ಮುಕ್ತಿ ಹೊಂದುವ ಮಾರ್ಗಗಳನ್ನು ತಿಳಿಸುತ್ತಾರೆ. ಅವರು ಸಜ್ಜನರು ಹೇಗೆ ಆಗುತ್ತಾರೆ? ಮತ್ತೆ ಕೆಲವರು ಮನಸ್ಸಿನ ಕೋರಿಕೆಗಳನ್ನು ನೆರವೇರಿಸಿಕೊಳ್ಳಲು ಸಂಕಲ್ಪಗಳನ್ನು ಮಾಡಲು ತಿಳಿಸುತ್ತಾರೆ. ಮನಸ್ಸು ಮಾತ್ರ ಸತ್ಯವಲ್ಲವಲ್ಲಾ?

ಆದ್ದರಿಂದ ಈ ಸಂಸಾರ ಸಾಗರದಿಂದ, ಸಜ್ಜನ ಸಾಂಗತ್ಯ ಮಾತ್ರವೇ ದಾಟಿಸಬಹುದು. ಸತ್ಯವನ್ನು ಕುರಿತು ಅಂದರೆ ಆತ್ಮಜ್ಞಾನ ಬೋಧಿಸುವವರು ಮಾತ್ರವೇ ದಾಟಿಸಬಲ್ಲರೆಂದು ತಿಳಿದುಕೊಳ್ಳಬೇಕು.

ಮತ್ತೆ ಬುದ್ಧನು ಹೇಳಿದಂತೆ ಉತ್ತಮ ಪುರುಷನು ಆಗಬೇಕೆಂದರೆ, ಈ ಸಂಸಾರ ಬಂಧನದಿಂದ ಹೊರಗೆ ಬರಬೇಕು. ಶಂಕರಾಚಾರ್ಯರು ಏನು ಮಾಡಬೇಕೆಂದು ಹೇಳಿದ್ದಾರೆ. ಈ ವಿಷಯವೆಂದರೆ, **"ತ್ರಿಜಗತಿ ಸಜ್ಜನ ಸಂಗತಿ ರೇಖಾ ಭವತಿ ಭವಾರ್ಜುನ ತರುಣೇ ನೌಕ"** ಎಂದು ಪತ್ರೀಜಿಯವರು ತುಂಬಾ ಸಾರಿ ಹೇಳಿದ್ದಾರೆ. ಈಗ ನಾವೆಲ್ಲರೂ ಕೂಡಾ ಅದೇ ಕೆಲಸವನ್ನು ಮಾಡುತ್ತಿದ್ದೇವೆ. ತುಂಬಾ ಶ್ರದ್ಧೆಯನ್ನು ವಹಿಸುತ್ತೇವೆ. ಯಾಕೆ ದಾಟುವುದಿಲ್ಲ, ದಾಟೇ ದಾಟುತ್ತೇವೆ.

ಏಕೆ ಶ್ರದ್ಧೆ ಎನ್ನುತ್ತಿದ್ದೇನೆ ಎಂದರೆ? ಮೂರು, ಮೂರುವರೆಗೆ ಎದ್ದು, ಸ್ನಾನವನ್ನು ಮಾಡಿ, ಧ್ಯಾನಕ್ಕೆ ಕುಳಿತುಕೊಳ್ಳುವುದು ಎಂದರೆ ಸಾಮಾನ್ಯ ವಿಷಯವಲ್ಲ, ಹೇಳಿದ ಎಲ್ಲವನ್ನೂ ಬರೆದುಕೊಳ್ಳಿತ್ತೀರಾ. ಪುನಃ ಪುನಃ ಓದಿಕೊಳ್ಳುತ್ತೀರಿ. ಅವುಗಳನ್ನು ಆಚರಿಸುವ ಪ್ರಯತ್ನವನ್ನು ಮಾಡುತ್ತಿದ್ದೀರಿ.

ಬುದ್ಧನು ಉತ್ತಮ ಪುರುಷನ ಕುರಿತು ಹೀಗೆ ಹೇಳಿದ್ದಾರೆ. ಯೋಗಿ ವೇಮನು ಏನು ಹೇಳಿದ್ದಾರೆ ಎಂದರೆ?

ಉಪ್ಪು ಕಪ್ಪುರಂಬು ನೊಕ್ಕ ಪೋಲಿಕ ನುಂಡು

ಚೂಡ ಚೂಡ ರುಚುಲು ಜಾಡ ವೇರು

ಪುರುಷಲಂದು ಪುಣ್ಯ ಪುರುಷಲು ವೇರೆಯಾ

ವಿಶ್ವಧಾಭಿರಾಮಾ ವಿನುರ ವೇಮ

ವೇಮನರವರು ಏನು ಹೇಳಿದ್ದಾರೆಂದರೆ! ಉಪ್ಪು, ಕರ್ಪೂರವು ನೋಡಲು ಒಂದೇ ವಿಧವಾಗಿ ಇರುತ್ತವೆ. ಆದರೆ ಅದನ್ನು ರುಚಿ ನೋಡಿದರೆ, ತುಂಬಾ ವ್ಯತ್ಯಾಸವಿರುತ್ತವೆ. ಹಾಗೆಯೇ ಮಾನವರೆಲ್ಲರೂ ಒಂದೇ ತರಹ ಕಾಣಿಸುತ್ತಾರೆ. ಆದರೆ ಅವರ ಬುದ್ಧಿ, ಜ್ಞಾನ ನೋಡಿದರೆ ಎಷ್ಟೋ ವ್ಯತ್ಯಾಸವಿರುತ್ತದೆ. ಮೇಲೆ ನೋಡಲು ಎಲ್ಲರೂ ಒಂದೇ ತರಹ ಕಾಣಿಸುತ್ತಾರೆ. ಆದರೆ ಅವರಲ್ಲಿ ಪುಣ್ಯ ಪುರುಷರು ಬೇರೆಯಾಗಿ ಇರುತ್ತಾರೆ ಎಂದು ವೇಮನನು ಹೇಳಿದ್ದಾರೆ.

ಹಾಗೆಯೇ, ಬುದ್ಧನು ಪುರುಷರಲ್ಲಿ ಉತ್ತಮ ಪುರುಷನನ್ನು ಕುರಿತು ಹೇಳಿದ್ದಾರೆ.

ನನಗೆ 2002 ನವೆಂಬರ್‌ನಲ್ಲಿ ಪತ್ರೀಜಿಯವರ ಪರಿಚಯವಾಯಿತು. ಆ ವರ್ಷದ ಡಿಸೆಂಬರ್ ಕೊನೆಯಲ್ಲಿ ವಿಜಯವಾಡದಲ್ಲಿ ಯಜ್ಞವನ್ನು ಇಟ್ಟಿದ್ದರು.

ಡಿಸೆಂಬರ್‌ನಲ್ಲಿ ನಾನು ನಮ್ಮ ಮನೆಯ ಮೇಲೆ ಪಿರಮಿಡ್ ನಿರ್ಮಿಸಿದೆ. ಆ ಯಜ್ಞದಲ್ಲಿ ಪತ್ರೀಜಿಯವರನ್ನು ಪಿರಮಿಡ್ ಪ್ರವೇಶವನ್ನು ನೆರವೇರಿಸಲು ಆಹ್ವಾನಿಸಿದೆನು. ಯಜ್ಞವು ಆದ ನಂತರ ಬಂದು ಪಿರಮಿಡ್ ಪ್ರವೇಶವನ್ನು ನೆರವೇರಿಸಿದರು. ಮೇಲಿನ ಛಾವಣಿಯಲ್ಲಿ ಅವರು ತರಗತಿಗಳನ್ನು ನಡೆಸಲು ಅನುವು ಮಾಡಿಕೊಟ್ಟೆ. ಆಗ ಅವರು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ವೇಮನರು ಹೇಳಿದ ಈ ಮೇಲಿನ ಪದ್ಯವನ್ನು ಹಾಡಿದರು. ಅವರು ನನ್ನನ್ನು ಉದ್ದೇಶಿಸಿ ವೇಮನರ ಪದ್ಯವನ್ನು ಹೇಳಿದರು ಎಂದು ನನಗೆ ಅರ್ಥವಾಯಿತು.

ಆ ಮಾತುಗಳಿಗೆ ಪ್ರಭಾವಿತನಾಗಿ ಇನ್ನೂ ಕಷ್ಟಪಟ್ಟೆನು. ನನ್ನ ಪ್ರತ್ಯೇಕತೆ ಏನೆಂದು ತೋರಿಸಬೇಕೆಂದು ಇನ್ನೂ ಹೆಚ್ಚಿನ ಕೃಷಿ ಮಾಡಿದೆ. ಅವರು ಹೇಳಿದ ಒಂದು ಮಾತು ನನ್ನಲ್ಲಿ ಎಷ್ಟೋ ಬದಲಾವಣೆ ತಂದಿತು. ನನ್ನಲ್ಲಿ ಪ್ರತ್ಯೇಕತೆ ಇಲ್ಲದಿದ್ದರೆ ಏಕೆ ಹೇಳುತ್ತಾರೆ? ನನ್ನಲ್ಲಿ ಏನೋ ಇದೆ, ಅದನ್ನು ನಾನು ತೋರಿಸಬೇಕು ಎಂದು ಇನ್ನು ಹೆಚ್ಚು ಶ್ರಮವಹಿಸಿದೆ.

ನಾನು ಸುಮಾರು 20 ವರ್ಷಗಳಿಂದ ಮಾಡುತ್ತಿರುವ ಕೆಲಸ ಎಲ್ಲರಿಗೂ ತಿಳಿಯದು. ಆದರೆ ಏನು ಹೇಳಿದರೆಂದರೆ ನೀವು ಕಾರಣ ಜನ್ಮರು ಎಂದೂ. ಇದೆಲ್ಲವೂ ಪುರ್ವಜನ್ಮದ ಸುಕೃತವೆಂದು ಒಂದು ಪ್ರಮಾಣಪತ್ರ ಕೊಡುತ್ತಾರೆ. ನಮಗೆ ಆ ಸುಕೃತಗಳು ಇಲ್ಲ. ಅದಕ್ಕೆ ನಾವು ಹೀಗೆ ಇದ್ದೇವೆ ಎಂದುಕೊಳ್ಳುತ್ತಾರೆ.

ಮತ್ತೆ 20 ವರ್ಷಗಳಿಂದ ವ್ಯಾಪಾರಗಳನ್ನು ತ್ಯಜಿಸಿ ಸಂಸಾರವನ್ನು ದೂರವಾಗಿ ಇಟ್ಟು, ನನ್ನ ಪದವಿಗಳಿಗೆಲ್ಲಾ ನಿವೃತ್ತಿ ನೀಡಿ, ಎಲ್ಲಾ ವ್ಯವಹಾರಗಳನ್ನು ಬಿಟ್ಟು, ಪೂರ್ತಿಯಾಗಿ ಇದರ ಮೇಲೆಯೇ ದೃಷ್ಟಿ ಇಟ್ಟು, ಸಮಯವನ್ನು ವ್ಯಯ ಮಾಡದೆ, ಕಷ್ಟಪಟ್ಟು ಕೃಷಿ ಮಾಡಿದರೆ ಬೆಳೆಯುವುದಿಲ್ಲವೇ? ಹೇಳಿರಿ? ನನಗೆ ಪೂರ್ವಜನ್ಮದ ಸಂಸ್ಕಾರವಿಲ್ಲವೆಂದು, ನನಗೆ ಎಲ್ಲಿ ಸಮಯವಿದೆ? ಎಂದು ನೀವು ನಿರ್ಲಕ್ಷ್ಯ ಮಾಡಿದರೆ ಹೇಗೆ ಬೆಳೆಯುತ್ತೀರಾ? ಹಾಗೆಯೇ ಇದ್ದುಬಿಡುತ್ತೀರಿ.

ಅವರೊಂದಿಗೆ ನಾವು ಎಲ್ಲಿ ಹೋಲಿಸಿಕೊಳ್ಳಬಲ್ಲೆವು? ಎಂದುಕೊಂಡು ಪ್ರಯತ್ನವೇ ಮಾಡುವುದಿಲ್ಲ. "ಯದ್ಭಾವಂ ತದ್ಭಾವತಿ" ಎಂದು ಹಾಗೇ ಉಳಿದುಕೊಳ್ಳುತ್ತಾರೆ. ಆದರೆ ನೀವು ಕೂಡಾ ಈಗ ಶ್ರಮವಹಿಸಿ ಮಾಡಿದರೆ ಏಕೆ ಆಗುವುದಿಲ್ಲ?

ಯಾರಾದರೂ ಉತ್ತಮ ಪಿರಮಿಡ್ ಮಾಸ್ಟರ್ ಆಗಬೇಕು ಎಂದರೆ 18 ಸೂತ್ರಗಳನ್ನು ಪಾಲಿಸಬೇಕು. ಅಷ್ಟೇ ಆಗಲಿ ಧ್ಯಾನವನ್ನು ಮಾಡುವವರು ಪಿರಮಿಡ್ ಮಾಸ್ಟರ್ ಅಲ್ಲ. ಆದರಲ್ಲಿ ಮೊದಲನೆಯದು ಸರಿಯಾದ ಧ್ಯಾನವನ್ನು ಮಾಡುವುದು ಸರಿಯಾದ ಧ್ಯಾನವನ್ನು ಮಾಡಿಸುವುದು. ಸರಿಯಾದ ಧ್ಯಾನವೆಂದರೆ "ಶ್ವಾಸದ ಮೇಲೆ ಗಮನ" ಪತ್ರೀಜಿಯವರು ಹೇಳಿದ್ದು, ಬುದ್ಧನು ಹೇಳಿದ್ದೂ ಅದೇ!

ಈಗ ತುಂಬಾ ಜನರು ಸಂಗೀತವನ್ನು ಇಟ್ಟುಕೊಂಡು ಮಾಡುತ್ತಿದ್ದಾರೆ. ಕೆಲವರು ಮಾರ್ಗದರ್ಶನ ಮಾಡುತ್ತಿದ್ದಾರೆ. "ಶ್ವಾಸದ ಮೇಲೆ ಗಮನ"ವನ್ನು ಮಾಡುವವರು ಕಡಿಮೆ ಆಗಿದ್ದಾರೆ. ಪತ್ರೀಜಿಯವರು ಸರಿಯಾದ ಧ್ಯಾನವೆಂದು ಏಕೆ ಹೇಳಿದ್ದಾರೆ? ಧ್ಯಾನಗಳು ಎಷ್ಟೋ ಇವೆ ಆದ್ದರಿಂದ.

ಸರಿಯಾಗದ ಧ್ಯಾನವನ್ನು ಬಿಟ್ಟು, ಸರಿಯಾದ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡುವವರು ಉತ್ತಮರಾಗುತ್ತಾರೆ. ಪ್ರತಿ ವಿಷಯವನ್ನು ಆಳವಾಗಿ ಅಧ್ಯಯನ ಮಾಡುವ ಶಕ್ತಿ ಅವರಿಗೆ ಬರುತ್ತದೆ.

ಈಗ ನಮ್ಮ ಮೇಡಂರವರು ಸಮಯ ಸಿಕ್ಕರೆ ಸಾಕು ಗಂಟೆ ಗಂಟೆಗಳ ಕಾಲ ಹಾಗೆಯೇ ಕುಳಿತು ಬಿಡುತ್ತಾರೆ. ಧ್ಯಾನ ಮಾಡಿದರೆ ಹಾಗೆ ಮಾಡಬೇಕು. ಏಕೆ ಬೆಳೆಯಲಾರರು? ನಿಮ್ಮಲ್ಲಿ ಕೆಲವು ಮಾರ್ಪಾಡುಗಳು ಬರುವವರೆಗೆ ಕೃಷಿ ಮಾಡಿರಿ. ಕೇಳಿದ್ದು ಆಚರಿಸಬೇಕು ಎಂದರೆ ಬುದ್ಧಿ ಚೆನ್ನಾಗಿ ವಿಕಸಿಸಬೇಕು. ನಿಮ್ಮ ಬುದ್ಧಿಯು ವಿಕಸಿಸದಿದ್ದರೆ ಎಷ್ಟು ಹೇಳಿದರೂ ಕೇಳುತ್ತೀರಿ ಆಗಲಿ ಬದಲಾವಣೆಗಳು ಬಾರವು.

ಆದ್ದರಿಂದ ನಮಗೆ ಪುನರ್ಜನ್ಮ ಸುಕೃತವು ಇಲ್ಲದಿದ್ದರೂ! ಈ ಜನ್ಮದಲ್ಲಿ ವಿಶೇಷವಾಗಿ ಕೃಷಿ ಮಾಡಿದರೆ ಭವಿಷ್ಯತ್ತಿನಲ್ಲಿ ಸುಕೃತವನ್ನು ತಯಾರು ಮಾಡಿಕೊಳ್ಳಬಹುದು. ಗುರುತಿಟ್ಟುಕೊಳ್ಳಿ. ಪೂರ್ವಜನ್ಮದ ಸುಕೃತವೇ ಅಲ್ಲಾ, ಈ ಜನ್ಮದ ಸುಕೃತವೂ ಕೂಡಾ ಇರುತ್ತದೆ. ಇದಕ್ಕಿಂತಲೂ ಹಿಂದಿನ ಜನ್ಮದಲ್ಲಿದ್ದ ಶರೀರದಿಂದ ಕೃಷಿ ಮಾಡಿದ್ದೀರಿ. ಅದು ಕೂಡಾ ಬಂದಿದೆ. ಹಾಗೆಯೇ ಈ ಶರೀರಿದಿಂದ ಕೃಷಿ ಮಾಡಿದರೆ ಅದು ಈ ಜನ್ಮದಲ್ಲಿ ಕೂಡಾ ಉಪಯೋಗವಾಗುತ್ತದೆ. ಮರುಜನ್ಮಕ್ಕೆ ಕೂಡಾ ಉಪಯೋಗವಾಗುತ್ತದೆ.

ಒಂದು ವಿಷಯವನ್ನು ಗುರುತಿಟ್ಟುಕೊಳ್ಳಿ. ನೀವು ಯಾವುದೇ ಕೆಲಸವನ್ನು ಮಾಡುತ್ತಿದ್ದಾಗ ನಿಮ್ಮೊಳಗೆ ತಿಳಿಯದ ಆನಂದವು ನಿಮಗೆ ಉಂಟಾಗುತ್ತದೆಯೋ! ಆ ಕೆಲಸಗಳೇ ನಿಮ್ಮ ಜೀವನದ ಪ್ರಣಾಳಿಕೆಯಲ್ಲಿ ನೀವು ಆಯ್ಕೆ ಮಾಡಿಕೊಂಡಿರುವವು. ಆದರೆ ಯಾವ ಕೆಲಸವನ್ನು ಮಾಡುವಾಗ ನಿಮ್ಮ ಅಂತರಂಗದಲ್ಲಿ ನೋವು ಉಂಟಾಗುತ್ತಾ ಇರುತ್ತದೆಯೋ ಅದು ಯೋಜನೆಗೆ ವಿರುದ್ಧವಾಗಿ ನೀವು ಆಯ್ಕೆ ಮಾಡಿಕೊಂಡದ್ದು ಎಂದು ತಿಳಿಯಬೇಕು.

ಇದನ್ನು ನಿಮ್ಮ ಅಂತರಂಗವನ್ನು ನೀವು ಗಮನಿಸಿಕೊಂಡರೆ ನಿಮಗೆ ಅರ್ಥವಾಗುತ್ತದೆ. ಯಾವ ಕೆಲಸಗಳನ್ನು ಮಾಡುವಾಗ ನಿಮಗೆ ಆನಂದವನ್ನುಂಟು ಮಾಡುತ್ತದೆಯೋ! ಆ ತರಹದ ಕೆಲಸಗಳನ್ನು ಮಾಡಲು ಮೊದಲ ಆದ್ಯತೆ ಕೊಡಿ. ಆಗ ನಿಮ್ಮ ಜೀವನ ಎಷ್ಟೋ ಉನ್ನತವಾಗಿರುತ್ತದೆ.

ಯಾವ ಕೆಲಸಗಳನ್ನು ಮಾಡುವಾಗ ನಿಮ್ಮಲ್ಲಿ, ಬಾಧೆ, ವ್ಯಥೆ ಉಂಟಾಗುವುದೋ! ಆ ಕೆಲಸಗಳನ್ನು ಬಿಟ್ಟುಬಿಡಿ. ನಿಮ್ಮ ಜೀವನವು ಏಕೆ ಯಶಸ್ಸನ್ನು ಹೊಂದುವುದಿಲ್ಲ? ಆದ್ದರಿಂದ ನಿಮ್ಮ ಅಂತರಂಗವನ್ನು ಗಮನಿಸಿಕೊಳ್ಳುತ್ತಾ ಇರಬೇಕು. ಇದು ತೀವ್ರವಾದ ಧ್ಯಾನ ಸಾಧನೆ ಮಾಡಿದಾಗ ಇನ್ನೂ ಸ್ಪಷ್ಟವಾಗಿ ತಿಳಿಯುತ್ತವೆ.

ಬುದ್ಧನು ಹೇಳಿದಂತೆ ಪ್ರತಿಯೊಬ್ಬರೂ ಕೂಡಾ ಉತ್ತಮ ಪುರುಷನಾಗಿ ಬೆಳೆಯಬೇಕು. ಹೇಗೋ ಬದುಕುವುದಲ್ಲ, ಎಲ್ಲರೂ ಬದುಕುತ್ತಾರೆ, ಆದರೆ ಮಾನವರಲ್ಲಿ ಉತ್ತಮವಾದವನಾಗಿ ಬೆಳೆಯಬೇಕು.

ಬುದ್ಧನು ಭವ ಬಂಧನಗಳು ಅಂದರೆ ಸಂಸಾರ ಬಂಧನಗಳಿಂದ ಹೊರಬಂದವನು ಎಂದಿದ್ದಾರೆ. ತುಂಬಾ ಜನರು ಈ ಸಂಸಾರ ಬಂಧನದಲ್ಲಿ ಇದ್ದವರೇ! ಯಾವಾಗಲೂ ನನ್ನ ಮಗ, ಮಗಳು, ಮೊಮ್ಮಗ ಎನ್ನುವುದನ್ನು ಬಿಟ್ಟರೆ ಬೇರೇನು ಇರುವುದಿಲ್ಲ. ಎಷ್ಟೋತ್ತೂ ಅವರ ಶಿಕ್ಷಣ, ಅವರ ಉದ್ಯೋಗಗಳು, ಅವರ ಮದುವೆಗಳು, ಅವರ ಮಕ್ಕಳು ಅಷ್ಟೇ ಬೇರೊಂದು ಆಲೋಚನೆಯೇ ಇರುವುದಿಲ್ಲ.

ನಾನು ಆತ್ಮನು, ಆತ್ಮಕ್ಕಾಗಿ, ಆತ್ಮಲಾಭಕ್ಕಾಗಿ, ಆತ್ಮದ ಉನ್ನತಿಗಾಗಿ, ಆತ್ಮಜ್ಞಾನಕ್ಕಾಗಿ ಆಲೋಚಿಸುವುದಿಲ್ಲ. ಕಷ್ಟ ಪಡುವುದಿಲ್ಲ. ಆತ್ಮಕ್ಕೆ ಲಭಿಸುವ ಧ್ಯಾನವನ್ನು ಮಾಡುವುದಿಲ್ಲ. ಧ್ಯಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ. ಹೀಗೆ ಜೀವನವೆಲ್ಲಾ ಕಳೆಯುತ್ತಾರೆ. ಅದರ ಅರ್ಥವೆಂದರೆ, ಭವ ಬಂಧನಗಳಲ್ಲಿ ಸಿಲುಕಿದಂತೆಯೇ! ಅಂತಹವರನ್ನು ಉತ್ತಮ ಪುರುಷರೆಂದು ಹೇಳುವುದಿಲ್ಲ. ಸಂಸಾರದಲ್ಲಿರುವ ಮೇಲಿನ ಮಮಕಾರವನ್ನು ಬಿಟ್ಟು ಆತ್ಮಕ್ಕಾಗಿ ಕೃಷಿ ಮಾಡುವವನೇ ಉತ್ತಮ ಪುರುಷನು ಎಂದು ಬುದ್ಧನು ಹೇಳಿದ್ದಾನೆ.

ಈ ಭವ ಬಂಧನಗಳಲ್ಲಿ ಸಿಲುಕಬಾರದು ಎಂದು ಶಂಕರಾಚಾರ್ಯರು ಕೂಡಾ ಹೇಳಿದ್ದಾರೆ. ಶಂಕರಾಚಾರ್ಯರು ಎಂತಹ ಶ್ರೇಷ್ಠರು. ಅಂತಹವರು ಶಂಕರಾಚಾರ್ಯರು ಹೇಳಿದರೂ ಅರ್ಥ ಮಾಡಿಕೊಳ್ಳದೆ ಇದ್ದರೆ ಇವರನ್ನು ಏನೆನ್ನಬೇಕು? ಜನ್ಮ ವ್ಯರ್ಥವಾಗಬಾರದೆಂದು ಅವರು ಹೇಳಿದ್ದಾರೆ. ಜನ್ಮವನ್ನು ಸದ್ವಿನಿಯೋಗ ಮಾಡಿಕೊಳ್ಳಿರೆಂದು ಅವರು ಹೇಳುವುದು.

ಮತ್ತೆ, ಶ್ರೇಷ್ಠರ ಫೋಟೋವಿಟ್ಟು, ನನಗೆ ಈ ಕಷ್ಟ ಬಂದಿದೆ. ನನಗೆ ಈ ಸಮಸ್ಯೆ ಬಂದಿದೆ. ನಮ್ಮ ಮಗಳ ಪರಿಸ್ಥಿತಿ ಹೀಗಿದೆ. ನಮ್ಮ ಮಗನಿಗೆ ಮದುವೆ ಆಗಿಲ್ಲ. ಉದ್ಯೋಗ ಬರಲಿಲ್ಲ ಎಂದು ಕೇಳುತ್ತಾರೆ. ಇನ್ನೂ ನಮ್ಮ ಮೊಮ್ಮಗಳು ಹೀಗೆ ಇದ್ದಾಳೆ. ಏನು ಮಾಡು ಅಂತೀರಾ? ಹೀಗೆ ಫೋಟೊಗಳಿಗೆ ಪೂಜೆ ಮಾಡಿ. ನೈವೇದ್ಯಗಳನ್ನು ಇಟ್ಟು, ಈ ಕಷ್ಟದಿಂದ ನನ್ನನ್ನು ಯಾವುದೋ ರೀತಿಯಿಂದ ಕಾಪಾಡು ಸ್ವಾಮಿ ಎಂದು ಹರಕೆಗಳನ್ನು ಹೊರುತ್ತಾರೆ.

ಆದರೆ ಉತ್ತಮರು ಹೇಳಿದ್ದನ್ನು ಆಚರಿಸದೆ, ಅರ್ಥ ಮಾಡಿಕೊಳ್ಳದೆ, ಅದೇ ಮೂಢತ್ವದಿಂದ ಬಾಧೆಯಿಂದಲೇ ಇರುತ್ತಾರೆ. ಹಣವಿರುತ್ತದೆ, ಎಲ್ಲಾ ಸೌಕರ್ಯಗಳೂ

ಇರುತ್ತವೆ. ಆದರೆ ನೋವು, ದುಃಖ, ಅಶಾಂತಿ ಹೋಗುವುದಿಲ್ಲ, ಅದು ಜೀವನ. ಮಲಗಿದರೆ ನಿದ್ರೆಬಾರದು ಏಕೆಂದರೆ ಉತ್ತಮರು ಹೇಳಿದ್ದು ಒಂದು, ಇವರು ಮಾಡುವುದು ಮತ್ತೊಂದು.

ಶಂಕರಾಚಾರ್ಯರು ಏನು ಹೇಳಿದ್ದಾರೆ ಎಂದರೆ?
ಕಸ್ತ್ವಂ ಕೋಹಂ ಕುತ ಆಯತಃ
ಕಾ ಮೇ ಜನನೀ ಕೋ ಮೇ ತಾತಃ
ಇತಿ ಪರಿಭಾವಾಯ ಸರ್ವಮಸಾರಮ್
ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಂ

ಎಂದಿದ್ದಾರೆ. ಇದರ ಅರ್ಥ ಏನೆಂದರೆ, ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ತಂದೆ ಯಾರು? ನಿಸ್ಸಾರ ಹೀನವಾದ ಕನಸಿನಂತಹ ಈ ವಿಶ್ವವನ್ನು, ಈ ವಿಧವಾದ ವಿಚಾರಣೆಯ ಮೂಲಕ ಬಿಟ್ಟುಬಿಡಬೇಕು ಎಂದಿದ್ದಾರೆ. ಈ ವಿಶ್ವದಲ್ಲಿ ಇರುವವೆಲ್ಲವೂ ಕೂಡಾ ಸಾರಹೀನವಾದವು. ಅಂದರೆ ಅವುಗಳಲ್ಲಿ ಏನು ಇಲ್ಲ ಎಂದಿದ್ದಾರೆ.

ನೀವು ಗಮನಿಸಿ ಒಂದೊಂದು ಸಾರಿ ನಿಂಬೆಕಾಯಿಗಳನ್ನು ಕೊಳ್ಳುತ್ತಾ ಇರುತ್ತೀರಿ. ಅವುಗಳಲ್ಲಿ ಕೆಲವನ್ನು ಹಿಂಡಿದರೆ ಸಾಕಷ್ಟು ರಸ ಬರುತ್ತದೆ. ಆದರೆ ಕೆಲವು ಒಣಗಿ ಹೋಗಿರುತ್ತವೆ. ಮೇಲಕ್ಕೆ ನೋಡಲು ತುಂಬಾ ಚೆನ್ನಾಗಿದ್ದರೂ ಅವನ್ನು ಎಷ್ಟು ಹಿಂಡಿದರೂ ಯಾವ ರಸವೂ ಇರುವುದಿಲ್ಲ. ಅಂತಹವುಗಳನ್ನು (ರಸ) ಸಾರವಿಲ್ಲದವು ಎನ್ನುತ್ತಾರೆ, ಅವುಗಳನ್ನು ಬಿಸಾಡುತ್ತಾರೆ ಕೂಡಾ!

ಶಂಕರಾಚಾರ್ಯರವರು ಈ ವಿಶ್ವವೂ ಕೂಡಾ ಸಾರಹೀನವಾದದ್ದು. ಅಂದರೆ ಈ ವಿಶ್ವದಲ್ಲಿ ಇರುವವೆಲ್ಲವೂ ನಿನಗೇನು ಉಪಯೋಗವಾಗುವುದಿಲ್ಲ ಎಂದಿದ್ದಾರೆ. ಈ ವಿಶ್ವದಲ್ಲಿ ಐಶ್ವರ್ಯ, ಹಣ, ಸಂಪಾದನೆ, ಎಷ್ಟೋ ವಿಧವಾದ ಸುಖ-ಭೋಗಗಳು, ಕಾರುಗಳು, ವಿಮಾನಗಳು, ಮೊಬೈಲುಗಳು ಅಂತಹವು ಎಷ್ಟೋ ಇವೆ. ಅವುಗಳ ಜೊತೆಗೆ ಹೆಂಡತಿ, ಗಂಡ, ತಂದೆ, ತಾಯಿ, ಮಗ, ಮಗಳು, ಬಂಧುಗಳು ಹೀಗೆ ಎಷ್ಟೋ ಜನರಿದ್ದಾರೆ. ಇವರೆಲ್ಲರಿಗೂ, ಇವೆಲ್ಲವಕ್ಕೂ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಅವುಗಳಿಗೋಸ್ಕರ ಜೀವಿಸುತ್ತಿದ್ದಾರೆ. ಅವುಗಳೇ ಉತ್ತಮವಾದವು ಎಂದುಕೊಳ್ಳುತ್ತಿದ್ದಾರೆ. ಅವುಗಳನ್ನು ಹೊಂದಿದರೆ ಜೀವನವು ಧನ್ಯವೆಂದುಕೊಳ್ಳುತ್ತಾರೆ. ಅದೃಷ್ಟವೆಂದುಕೊಳ್ಳುತ್ತಾರೆ. ಅವುಗಳನ್ನೆಲ್ಲಾ ಜೀವನದಾದ್ಯಂತ ಜೋಡಿಸಿಕೊಂಡು ಎಲ್ಲರಿಗಿಂತಲೂ ತಾನೇ ಅದೃಷ್ಟವಂತನೆಂದು ಭಾವಿಸುತ್ತಿರುತ್ತಾರೆ. ಆದರೆ ಇವೆಲ್ಲವೂ

ಸಾರಹೀನವಾದವುಗಳು, ಎಂದರೆ ಉಪಯೋಗವಿಲ್ಲದವು ಎಂದು ಭಜಗೋವಿಂದಂನಲ್ಲಿ ಶಂಕರಾಚಾರ್ಯರು ಹೇಳಿದ್ದಾರೆ.

ಶಂಕರಾಚಾರ್ಯರು ವಿಶ್ವವೇ ಸಾರಹೀನವಾದದ್ದು ಎಂದಿದ್ದಾರೆ. ಅಂದರೆ ವಿಶ್ವದಲ್ಲಿರುವ ಎಲ್ಲವೂ ಸಾರಹೀನವಾದವುಗಳು ಅಲ್ಲದೇ?

ಅಂತಹವುಗಳನ್ನು ಹಿಡಿದುಕೊಂಡು ಸಂತೋಷಿಸುತ್ತಿದ್ದೇವೆ. ಉತ್ತಮರೆಂದು ಕೊಳ್ಳುತ್ತೇವೆ. ಗರ್ವಪಡುತ್ತೇವೆ, ಅಹಂಕಾರದಿಂದಿರುತ್ತೇವೆ, ಅವುಗಳಿಗೋಸ್ಕರ ತಪ್ಪುಗಳನ್ನು ಮಾಡುತ್ತೇವೆ ಪಾಪಗಳನ್ನು ಮಾಡುತ್ತಿದ್ದೇವೆ, ಎಷ್ಟು ವಿಚಿತ್ರವಲ್ಲವೇ? ಆಲೋಚಿಸಿರಿ.

ಪುನಃ ನೀವು ಕೇಳಬಹುದು, ಇವುಗಳನ್ನೆಲ್ಲಾ ಚೆನ್ನಾಗಿ ಸಂತೋಷದಿಂದ ಅನುಭವಿಸುತ್ತಿದ್ದೇವೆ, ಆನಂದಿಸುತ್ತಿದ್ದೇವೆ, ಸುಖಪಡುತ್ತಿದ್ದೇವೆ. ಸಾರಹೀನವಾದವುಗಳು ಎನ್ನುತ್ತಿದ್ದೀರೇನು? ಎಂದು ಕೇಳಬಹುದು. ಮತ್ತೆ ಇದು ಯಾರಿಗೆ ತಿಳಿಯುತ್ತದೆ? ಅಂದರೆ ಜ್ಞಾನವಿದ್ದವರಿಗೆ ತಿಳಿಯುತ್ತದೆ. ಜ್ಞಾನವೆಂದರೆ, ನಾನು ಆತ್ಮ ಎನ್ನುವ ಅವಗಾಹನೆ ಇದ್ದವರು.

ನೀನು ಆತ್ಮ ಎಂದು ಅರ್ಥ ಮಾಡಿಕೊಂಡಾಗ, ನೀನು ದೇಹವಲ್ಲ ಎಂದು ಅರ್ಥ ಮಾಡಿಕೊಂಡಾಗ, ನಿಶ್ಚಯವಾಗಿ ಈ ವಿಶ್ವದಲ್ಲಿ ಇರುವವರೆಲ್ಲಾ ಕೂಡಾ ಸಾರಹೀನವಾದವುಗಳೇ, ಉಪಯೋಗವಿಲ್ಲದವು ಎಂದು ತಿಳಿಯುತ್ತದೆ. ಏಕೆಂದರೆ, ನೀನು ದೇಹವೆಂದುಕೊಂಡರೆ, ಇವೆಲ್ಲವೂ ತುಂಬಾ ಅವಶ್ಯಕವೆನ್ನಿಸುತ್ತವೆ. ಆದರೆ ನೀನು ಆತ್ಮವಾದಾಗ ಇವೆಲ್ಲವೂ ನಿನಗೆ ಉಪಯೋಗಪಡುವುದಿಲ್ಲ.. ಏಕೆಂದರೆ? ಆತ್ಮಕ್ಕೆ ಯಾವುವು ಉಪಯೋಗವಲ್ಲವೋ! ಅವೆಲ್ಲವೂ ಸಾರಹೀನವಾದವುಗಳೇ ಎಂದು ಶಂಕರಾಚಾರ್ಯರು ಈ ವಿಷಯವನ್ನು ಎಷ್ಟು ಉತ್ತಮವಾಗಿ ಹೇಳಿದ್ದಾರೋ!

ನನಗೆ ಪತ್ರೀಜಿಯವರು ಮೊದಲಲ್ಲಿ ನೀನು ದೇಹವಲ್ಲವೆಂದರು. ನನಗೆ ಮತಿ ಇಲ್ಲದಂತೆ ಆಯಿತು. ಇವರೇನು ಹೀಗೆ ಹೇಳುತ್ತಾರೆ? ಮತ್ತೆ, ನಾನು ಯಾರು ಎಂದೆನು? ನೀನು ಆತ್ಮನು ಎಂದರು. ಅದಕ್ಕಿಂತಲೂ ಮುಂಚೆ ಆತ್ಮವೆನ್ನುವುದನ್ನು ನಾನು ಕೇಳಿರಲಿಲ್ಲ.

ನಾನು 53 ವರ್ಷಗಳವರೆಗೆ ಯಾವುದನ್ನು ಕೇಳಲಿಲ್ಲವೊ! ಅದೇ ನಾನು ಎಂದರು ಅವರು. ಮತಿಭ್ರಮಣೆ ಆಯಿತು! ನಂತರ ಪುಸ್ತಕಗಳನ್ನು ಓದಿ, ಉಪನಿಷತ್ತುಗಳನ್ನು ಓದಿ, ಭಗವದ್ಗೀತೆ, ಪುರಾಣಗಳನ್ನೆಲ್ಲಾ ಓದಿದ ನಂತರ, ಇನ್ನೂ ಎಷ್ಟೋ ಉತ್ತಮ ವ್ಯಕ್ತಿಗಳ ಸಂದೇಶಗಳನ್ನು ಕೇಳಿದ ನಂತರ ಪತ್ರೀಜಿಯವರು ಹೇಳಿದ್ದು ಸತ್ಯವೆಂದು ಅರ್ಥವಾಯಿತು.

ಅಲ್ಲಿಯವರೆಗೆ ನಾನು ಈ ದೇಹವೆನ್ನುವ ಭಾವದೊಂದಿಗೆ ರಾತ್ರಿ–ಹಗಲು ಕಷ್ಟಪಟ್ಟು, ಲಕ್ಷಗಳು, ಕೋಟಿಗಟ್ಟಲೆ ಸಂಪಾದಿಸಿದೆ. ಯಾವುದನ್ನು ಉತ್ತಮವೆಂದು ಭಾವಿಸಿದೆನೋ! ಇವುಗಳನ್ನು ನೋಡಿ ಸಂತೋಷಪಡುತ್ತಿದ್ದೆನೋ ಅವು ಯಾವುವು ನಿನಗೆ ಉಪಯೋಗವಾಗುವುದಿಲ್ಲ ಮಗು ಎಂದರು.

ಈ ವಿಷಯವು 22 ವರ್ಷಗಳ ಕೆಳಗೆ ಪತ್ರೀಜಿಯವರು ಹೇಳಿದ್ದಾರೆ. ಅವರು ಹೇಳಿದ ಸಂದೇಶವು ನನ್ನ ಜೀವನವನ್ನೇ ಬದಲಾಯಿಸಿತು, ಬೇರೆ ರೀತಿಯಾಗಿ ಆಲೋಚಿಸಿದನು, ಮತ್ತೆ ನಾನು ಆತ್ಮವಾದರೆ ಇಷ್ಟು ಕೋಟಿಗಳನ್ನು ಸಂಪಾದಿಸಿದೆನು, ಇಷ್ಟು ಸಂಪಾದನೆಯನ್ನು ಇಟ್ಟುಕೊಂಡಿದ್ದೇನೆ, ಎಷ್ಟೋ ಭೂಮಿ ಇದೆ, ಎಷ್ಟೋ ಕಟ್ಟಡಗಳಿವೆ, ಎಷ್ಟೋ ಆಸ್ತಿಗಳಿವೆ, ಸಂಪಾದನೆ ಇದೆ, ಬಂಗಾರ ಇದೆ ಎಲ್ಲವೂ ಇದ್ದಾವೆ.

ಇವುಗಳು ಏನಾದರೂ ನನಗೆ ಅಂದರೆ ಆತ್ಮಕ್ಕೆ ಉಪಯೋಗವಾಗುತ್ತವೆಯೇ? ಎಂದು ಆಲೋಚಿಸಿದೆ. ಆಗ ಏನು ಉಪಯೋಗವಾಗುವುದಿಲ್ಲ ಎಂದು ಅರ್ಥವಾಯಿತು. ಸಂಪತ್ತುಗಳೇ ಅಲ್ಲ, ಮಕ್ಕಳು ಇದ್ದಾರೆ, ಮೊಮ್ಮಕ್ಕಳು ಇದ್ದಾರೆ, ಅವರನ್ನು ನೊಡಿ ಸಂತೋಷಪಡುತ್ತಿದ್ದೆ. ಆಗ ಇನ್ನೂ ಈ ಹೆಂಡತಿ, ಬಂಧುಗಳು ಇವರೆಲ್ಲರೂ ನನಗೆ ಅಂದರೆ, ಆತ್ಮಕ್ಕೆ ಏನಾದರೂ ಉಪಯೋಗನಾ? ಎಂದು ಆಲೋಚಿಸಿದೆ. ನನ್ನವರು ಅಂದುಕೊಳ್ಳುತ್ತಾ ಅವರಿಗಾಗಿ ಅಧರ್ಮವಾಗಿ ಸಂಪಾದನೆ ಮಾಡುತ್ತಿದ್ದೆ, ಎಷ್ಟೋ ಸುಳ್ಳುಗಳನ್ನು ಹೇಳುತ್ತಿದ್ದೆ. ಲಂಚಗಳನ್ನು ಕೊಡುತ್ತಿದ್ದೆ. ಹೀಗೆ ಸಂಪಾದನೆ ಮಾಡಿದೆ. ಆದರೆ ಇವು ಉಪಯೋಗವಿಲ್ಲವೆಂದು ತಿಳಿಯಿತು.

ಆಗ ಅನ್ನಿಸಿತು. ಹೀಗೆ ಪಾಪದಿಂದ ಸಂಪಾದಿಸಿದ ಹಣದಿಂದ ಅವರೆಲ್ಲರೂ ಸುಖಪಡುತ್ತಾರೆ, ಒಳ್ಳೆಯ ಭೋಗಗಳನ್ನು ಅನುಭವಿಸುತ್ತಾರೆ. ಆದರೆ ಅವರ ಸುಖಕ್ಕಾಗಿ ನಾನು ಪಾಪವನ್ನು ಮಾಡಿದೆ, ನಾನು ಮಾತ್ರ ಈ ಪಾಪದ ಫಲಿತವನ್ನು ಅನುಭವಿಸಬೇಕು ಎಂದು ಅರ್ಥವಾಯಿತು.

ನಾನೇ ಅಲ್ಲಾ, ನನ್ನವರು ಅಂದುಕೊಂಡವರೆಲ್ಲಾ ಆತ್ಮಗಳೇ. ಅವರ ಪ್ರಣಾಳಿಕೆಗಳಂತೆ ಅವರು ಬಂದಿದ್ದಾರೆ. ನನ್ನ ಪ್ರಣಾಳಿಕೆಯಂತೆ ನಾನು ಬಂದಿದ್ದೇನೆ. ಮೊದಲಿಗೆ ಅವರಿಗೆ ನನಗೂ ಯಾವ ಸಂಬಂಧವೂ ಇಲ್ಲವೆಂದು ಅರ್ಥವಾಯಿತು.

ಅದೇ ಶಂಕರಾಚಾರ್ಯರು ಕೇಳಿದರು. ಯಾರು ನಿನ್ನ ಹೆಂಡತಿ? ಯಾರು ನಿನ್ನ ಮಗ? ಯಾರು ನಿನ್ನ ಮಗಳು? ವಿಚಾರಣೆ ಮಾಡೆಂದು ಹೇಳಿದರು. ನೋಡಿದರೆ ಅವರಿಗೆ ನನಗೆ ಯಾವ ಸಂಬಂಧವೂ ಇಲ್ಲವೆಂದು ಅರ್ಥವಾಯಿತು.

ಈ ಧ್ಯಾನ ಮಾರ್ಗದಲ್ಲಿ ಬಂದ ಮೇಲೆ ವಾಲ್ಮೀಕಿ ಕಥೆಯನ್ನು ತಿಳಿದುಕೊಂಡೆನು. ಪಾಪಗಳನ್ನು ಮಾಡಿ, ಹತ್ಯೆಗಳನ್ನು ಮಾಡಿ, ದರೋಡೆಗಳನ್ನು ಮಾಡಿ, ಸಂಪಾದನೆ ಮಾಡಿದ ವಾಲ್ಮೀಕಿ ಒಂದು ಬಾರಿ ನಾರದನು ಬಂದು ಏಕೆ ಇಷ್ಟು ಪಾಪಗಳನ್ನು ಮಾಡುತ್ತಿದ್ದೀಯಾ ಎಂದು ಕೇಳಿದನು. ನನ್ನ ಹೆಂಡತಿಯನ್ನು ಪೋಷಿಸಲು ಎಂದನು ವಾಲ್ಮೀಕಿ. ಆಗ ನಾರದನು ನಿನ್ನ ಹೆಂಡತಿಗಾಗಿ ಇಷ್ಟು ಪಾಪಗಳನ್ನು ಮಾಡುತ್ತಿದ್ದೀಯಾ ಅಲ್ಲ? ನಿನ್ನ ಪಾಪಗಳಲ್ಲಿ ಭಾಗಿ ಆಗುತ್ತಾಳಾ ಎಂದು ಕೇಳು ಹೋಗಿ ಎಂದನು. ವಾಲ್ಮೀಕಿಯು ಕೇಳಿದರೆ, ನಿನ್ನ ಪಾಪಗಳಲ್ಲಿ ನನಗೆ ಸಂಬಂಧವಿಲ್ಲವೆಂದಳು. ಆಗ ವಾಲ್ಮೀಕಿ ನಾರದನ ಕಾಲಿಗೆ ಬಿದ್ದನು. ನಾರದನು ಪಾಪಗಳನ್ನು ಬಿಟ್ಟು ಧ್ಯಾನವನ್ನು ಮಾಡು ಎಂದು ಹೇಳಿದನು. ಆ ವಿಧವಾಗಿ ಅನುಸರಿಸಿ ಉತ್ತಮ ಮಹರ್ಷಿಯಾದನು. ವಾಲ್ಮೀಕಿ, ಆತನು ರಾಮಾಯಣವನ್ನೇ ಬರೆಯುವಂತಾದನು.

ಆಗ ನನ್ನ ಮಕ್ಕಳಿಗೆ ಹೇಳಿದೆ, ಈ ರೀತಿಯ ವ್ಯಾಪಾರವನ್ನು ನಾನು ಮಾಡಲಾರೆ. ನೀವು ಬೇಕಾದರೆ ಮಾಡಿಕೊಳ್ಳಿ ಎಂದು ಹೇಳಿದೆ. ಅವರ ಆಸ್ತಿಗಳನ್ನು ಅವರಿಗೆ ಹಂಚಿ, ನಮ್ಮವನ್ನು ನಾವು ಉಳಿಸಿಕೊಂಡೆವು, ಆಗಿನಿಂದ, ಪೂರ್ತಿಯಾಗಿ ಈ ಜ್ಞಾನ ಮಾರ್ಗದಲ್ಲಿಯೇ ನಾವು ಜೀವಿಸುತ್ತಿದ್ದೇವೆ.

ಆತ್ಮನಾದ ನನಗೆ ಧನ, ಸಂಪತ್ತು, ಈ ವಿಶ್ವದಲ್ಲಿ ಇರುವಂತಹವು. ಈ ಕಣ್ಣಿಗೆ ಕಾಣಿಸುವ ಯಾವುವು ನನಗೆ ಲಾಭವಿಲ್ಲ, ಜ್ಞಾನವೇ ನನಗೆ ಲಾಭ ಎಂದು ತಿಳಿಯಿತು. ಆಗಿನಿಂದ ನಾನು ಮೇಡಂ ಇಬ್ಬರೂ ಈ ಜ್ಞಾನ ಸಂಪಾದನೆಯಲ್ಲಿ ಇದ್ದೇವೆ.

ಒಂದೆರಡು ವರ್ಷಗಳು ಕಳೆದವು. ನಂತರ ನನಗೆ ಅನ್ನಿಸಿತು. ನಮ್ಮ ಹಿರಿಯರು 60 ವರ್ಷಗಳ ಒಳಗೇ ಶರೀರವನ್ನು ತ್ಯಜಿಸಿದರು. ನನಗೆ ಈಗಾಗಲೇ 53 ವರ್ಷವಾಗಿದೆ. ಅಷ್ಟರವರೆಗೆ ಆತ್ಮನಾದ ನಾನು ಏನೂ ಸಂಪಾದನೆ ಮಾಡಿಕೊಂಡಿಲ್ಲ. ಎಷ್ಟು ಜೀವನ ವ್ಯರ್ಥ ಆಗಿಹೋಯಿತು. ಈಗ ಹೇಗೆ ಎಂದು ಆಲೋಚಿಸಿದೆ. ಪತ್ರೀಜಿಯವರನ್ನು ಕೇಳಿದೆ ನಿಮ್ಮ ಪರಿಚಯ ನನಗೆ 10 ವರ್ಷಗಳ ಕೆಳಗೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಹೇಳಿದೆ.

ಆಣ ಪತ್ರೀಜಿಯವರು ಆಗಿದ್ದು ಆಗಿ ಹೋಗಿದೆ. ಈಗಿನಿಂದನಾದರೂ ಜಾಗ್ರತೆಯಾಗಿರು ಎಂದರು. ಆ ಮಾತಿಗೆ ಈ ಜ್ಞಾನ ಸಂಪಾದನೆ ಕೂಡಾ ರಾತ್ರಿ ಹಗಲು ಕಷ್ಟಪಟ್ಟು ಸಂಪಾದನೆ ಮಾಡಬೇಕು ಎಂದು ನಿರ್ಣಯಿಸಿದೆ. ಆದ್ದರಿಂದ ಯಾವ ದಿನವನ್ನು ವ್ಯರ್ಥ ಮಾಡುತ್ತಿರಲಿಲ್ಲ.

ಭೀಮಾವರಂನಲ್ಲಿ 3 ದಿನಗಳ ತರಗತಿಗಳನ್ನು ಪ್ರಾರಂಭಿಸುವುದಲ್ಲದೆ, ಎಲ್ಲಾ ಊರುಗಳನ್ನು ತಿರುಗಿ ಈ ಜ್ಞಾನವನ್ನು ಬೋಧಿಸುತ್ತಿದ್ದೆ. ಏಕೆ ಜ್ಞಾನವನ್ನೇ ನಾನು ಬೋಧಿಸುತ್ತಿದ್ದೇನೆ ಎಂದರೆ ಆತ್ಮನಾದ ನನಗೆ ಜ್ಞಾನವಷ್ಟೇ ಲಭಿಸುತ್ತದೆ. ಆದ್ದರಿಂದ ಪತ್ರೀಜಿಯವರು ಇನ್ನೊಂದು ಸಂದರ್ಭದಲ್ಲಿ ಏನು ಹೇಳಿದರೆಂದರೆ? ಹಂಚಿದ್ದು ಬೆಳೆಯುತ್ತದೆ ಎಂದರು. ಓ ಈ ಸಿದ್ಧಾಂತ ಕೂಡಾ ಇದೆಯಾ? ಎಂದು ಈ ಜ್ಞಾನವನ್ನು ಹಂಚಿದರೆ ಎಷ್ಟೋ ಬೆಳೆಸಿಕೊಳ್ಳಬಹುದು ಎಂದು ಅರ್ಥವಾಯಿತು.

ಆದ್ದರಿಂದ ಜ್ಞಾನ ಸಂಪಾದನೆ ಮೇಲೆ ಆಗಿನಿಂದ ದೃಷ್ಟಿ ಇಟ್ಟಿದ್ದೇನೆ. ನಾನು ನಮ್ಮ ಮೇಡಂ ಇಬ್ಬರೂ ಜ್ಞಾನ ಸಂಪಾದನೆ ಮೇಲೆ ದೃಷ್ಟಿ ಇಟ್ಟೆವು.

ನಾನು ಜ್ಞಾನವನ್ನು ಹಂಚಿದಷ್ಟೂ ನಮ್ಮ ಜ್ಞಾನವು ಕೂಡಾ ಹೆಚ್ಚುತ್ತದೆ ಎನ್ನುವುದು ತಿಳಿದುಕೊಂಡೆವು.

ಅಷ್ಟೇ ಅಲ್ಲದೆ, ಪತ್ರೀಜಿಯವರು ಕೂಡಾ ಜ್ಞಾನವನ್ನೇ ಹಂಚುತ್ತಾ ತುಂಬಾ ದೊಡ್ಡವರಾದರು. ಪತ್ರೀಜಿಯವರು ಕೊನೆಯ ಉಸಿರುರುವವರೆಗೂ ತಿರುಗಾಡಿದರು. ನಮ್ಮ ನಿರ್ಣಯವೂ ಕೂಡಾ ಅದೇ. ಅದಕ್ಕಾಗಿ ನಿರಂತರವಾಗಿ ತಿರುಗುತ್ತಿದ್ದೇವೆ. ಈ ಜ್ಞಾನ ದಾನವು ಅತ್ಯಂತ ಶ್ರೇಷ್ಠವಾದದ್ದು, ಆದ್ದರಿಂದ ಪ್ರಕೃತಿಯ ಸಹಕಾರವೂ ನಮಗೆ ಲಭಿಸುತ್ತದೆ. ಈ ವಯಸ್ಸಿನಲ್ಲಿ ಕೂಡಾ ನಾವು ತಿರುಗಾಡುತ್ತಿದ್ದೇವೆ. ನಮ್ಮ ಮೇಡಂ ಬೆಂಕಿ ಅಪಘಾತ ಆದರೂ ಕೂಡಾ ತಿರುಗಾಡಬಲ್ಲವರಾಗಿದ್ದಾರೆ. ಅಂದರೆ ಪ್ರಕೃತಿಯ ಸಹಕಾರವೇ.

ಆದ್ದರಿಂದ ಈ ಪ್ರಪಂಚದಲ್ಲಿ ಇರುವವೆಲ್ಲಾ ಸಾರಹೀನವಾದವು. ಕನಸಿಗೆ ಸಮಾನವು ಎಂದು ಅರ್ಥಮಾಡಿಕೊಂಡು ಆತ್ಮಕ್ಕೆ ಲಭಿಸುವ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಬುದ್ಧನು ಸಂಸಾರ ಬಂಧನಗಳಿಂದ ಹೊರಗೆ ಬರಬೇಕು ಎಂದಿದ್ದಾರೆ. ಆದಿಶಂಕರಾಚಾರ್ಯರು ಕೂಡಾ ಎಷ್ಟೋ ಸಂದೇಶಗಳಲ್ಲಿ ಈ ವಿಷಯದ ಮೇಲೆ ಭಜಗೋವಿಂದಂನಲ್ಲಿ ವಿವರಿಸಲಾಗಿದೆ. ಅವರು ಏನೆಂದಿದ್ದಾರೆ ಅಂದರೆ?

ಕಸ್ತ್ವಂ ಕೋಹಂ ಕುತ ಆಯತಃ
ಕಾ ಮೇ ಜನನೀ ಕೋ ಮೇ ತತಃ
ಇತಿ ಪರಿಭಾವಾಯ ಸರ್ವಮಾಸಾರಮ್
ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಂ ॥

**ತಾತ್ಪರ್ಯ :** ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ತಂದೆ ಯಾರು? ಸಾರಹೀನವಾದ ಕನಸಿಗೆ ಸಮಾನವಾದ ಈ ವಿಶ್ವದಲ್ಲಿ ಈ ವಿಧವಾದ ವಿಚಾರಣೆಯ ಮೂಲಕ ತ್ಯಜಿಸಿಬಿಡಬೇಕು. ಈ ವಿಶ್ವವೇ ಸಾರಹೀನವಾದದ್ದು ಎಂದಿದ್ದಾರೆ. ಸ್ವಪ್ನ ತುಲ್ಯವೆಂದರೆ ಕನಸಿನ ತರಹ ಎಂದಿದ್ದಾರೆ ಶಂಕರಾಚಾರ್ಯರವರು.

ಇಂತಹ ವಿಶ್ವದಲ್ಲಿ ಇರುವವೆಲ್ಲಾ ಕೂಡಾ ಸ್ವಪ್ನ ತುಲ್ಯದ ತರಹ ಸಾರಹೀನವು. ಅದರಲ್ಲಿ ಏನೂ ಇಲ್ಲ. ವಿಶ್ವದಲ್ಲಿ ಇರುವವೆಲ್ಲಾ ಅಂತಹುದೇ ಅಲ್ಲವೇ? ಅದನ್ನೇ ತಿಳಿದುಕೊಳ್ಳಬೇಕಾಗಿದೆ. ನೋಡು ನೀನು ಇದ್ದೀಯಾ. ಇನ್ನೂ ಎಷ್ಟೋ ಜನರಿದ್ದಾರೆ. ಇನ್ನೂ ಎಷ್ಟೋ ಇವೆ, ಎಷ್ಟೋ ವಿಧಗಳಿವೆ, ಎಷ್ಟೋ ವಿಧವಾದ ಜೀವರಾಶಿಗಳಿವೆ. ಹೀಗೆ ನೋಡಿದರೆ ಅನಂತವಾಗಿ ಕಾಣಿಸುತ್ತವೆ.

ಇಂತಹ ವಿಶ್ವದಲ್ಲಿರುವ ನೀನು ಒಂದು ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ನಾನು ಯಾರು? ನೀನು ಯಾರು? ಮೊದಲು ಈ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ರಮಣ ಮಹರ್ಷಿಗಳು ಅವರ ಹತ್ತಿರ ಯಾರು ಯಾವ ಕೋರಿಕೆಯಿಂದ ಹೋದರೂ ಮೊದಲು ನೀನು ಯಾರೋ ತಿಳಿದುಕೋ ಎನ್ನುತ್ತಾರೆ, ಯಾವ ಸಮಸ್ಯೆಯಿಂದ ಹೋದರೂ, ಯಾರು ಹೋದರೂ ಅದೇ ಪ್ರಶ್ನೆಯನ್ನೇ ಕೇಳುತ್ತಾ, ಇದ್ದರಂತೆ. ಕೆಲವರು. ಅಂದುಕೊಳ್ಳುತ್ತಿದ್ದರಂತೆ ಏನೋ ಹೇಳುತ್ತಾರೆಂದು ಹೋದರೆ ನೀನು ಯಾರೋ ತಿಳಿದುಕೋ ಅನ್ನುತ್ತಾರಲ್ಲಾ? ಅದಕ್ಕಾಗಿ ಅಲ್ಲಿಗೆ ಹೋಗುವುದು ಏಕೆಂದು ಅಂದುಕೊಳ್ಳುವವರಂತೆ.

ಹಾಗೇ ಹೇಳುತ್ತಾರೆ ಆದರೆ, ನೀನು ಯಾರು ಎನ್ನುವುದರೊಳಗೆ ಪರಿಷ್ಕಾರವು ಇದೆ ಎಂದು ಅರ್ಥ ಮಾಡಿಕೊಳ್ಳುವುದಿಲ್ಲ. ಕಡತಾಲ್ ಯಜ್ಞದಲ್ಲಿ ಪತ್ರೀಜಿಯವರನ್ನು ಕೆಲವರು ವೇದಿಕೆ ಮೇಲೆ ಸಂದರ್ಶನ ಮಾಡಿದರು.

ಅವರುಗಳೆಲ್ಲಾ ಎಷ್ಟೋ ಪ್ರಶ್ನೆಗಳನ್ನು ಬರೆದುಕೊಂಡು ಬರುತ್ತಿದ್ದರು. ಅವರು ವಿಧವಿಧವಾದ ಪ್ರಶ್ನೆಗಳನ್ನು ಕೇಳಿದರೆ, ಅವರು ಏನು ಹೇಳುತ್ತಿದ್ದರೆಂದರೆ? ಧ್ಯಾನವನ್ನು ಮಾಡಿರಿ ಎನ್ನುತ್ತಿದ್ದರು. ಯಾರು ಯಾವ ಪ್ರಶ್ನೆಯನ್ನು ಕೇಳಿದರೂ ಧ್ಯಾನವನ್ನು ಮಾಡಬೇಕು ಎಂದು ಹೇಳುತ್ತಿದ್ದರು. ನನ್ನ ಮಗ ಸರಿಯಾಗಿ ಓದುತ್ತಿಲ್ಲ, ನನ್ನ ಮಾತು ಕೇಳುತ್ತಿಲ್ಲ. ನನಗೆ ಸರಿಯಾಗಿ ನೆನಪಿರುವುದಿಲ್ಲ. ನನಗೆ ಶಾಂತಿ ಇಲ್ಲ. ಹೀಗೆ ಯಾವ ಸಮಸ್ಯೆಯನ್ನು ಅವರನ್ನು ಕೇಳಿದರೂ ಅವರು ಒಂದೇ ಉತ್ತರವನ್ನು ಹೇಳುತ್ತಿದ್ದರು. ಧ್ಯಾನವನ್ನು ಮಾಡು, ಧ್ಯಾನವನ್ನು ಮಾಡಿಸು ಎನ್ನುತ್ತಿದ್ದರು.

ಅದಕ್ಕಾಗಿ ಅವರ ಹತ್ತಿರ ಹೋಗುವುದು ಏಕೆ ಎಂದು ಅಂದುಕೊಂಡರೆ ಅವನಿಗಿಂತ ಮೂರ್ಖ ಯಾರು ಇರುವುದಿಲ್ಲ. ಎಲ್ಲವುದಕ್ಕೂ ಪರಿಷ್ಕಾರ ಧ್ಯಾನವೇ ಎನ್ನುವುದನ್ನು ವಿಚಾರಣೆ ಮಾಡಿ ಕೊನೆಗೆ ಯಾವ ಸಮಸ್ಯೆಯಾದರೂ ಪರಿಷ್ಕಾರ "ಧ್ಯಾನ"ವೇ ಎನ್ನುವ ಉತ್ತರ ಬರುತ್ತದೆ.

ಪತ್ರೀಜಿಯವರು ಒಂದು ಬಾರಿ ಏನು ಹೇಳಿದರೆಂದರೆ? ನಾನು 50,000 ಪುಸ್ತಕಗಳನ್ನು ಓದಿದ್ದೇನೆ. ಅವುಗಳನ್ನು ಒಂದು ಮಿಕ್ಸಿಯಲ್ಲಿ ತಿರುವಿದ್ದೇನೆ ಎಂದರು. ಹಾಗೆ ಮಾಡಿದಾಗ ಅದರಲ್ಲಿ ನನಗೆ 2 ಮಾತುಗಳು ಬಂದವು. ಏನೆಂದರೆ **"ಹಿಂಸಾ ಚೋಡೋ! ಹಂಸಾ ಪಕಡೋ!"** ಈ ಎರಡೇ ಬಂದವು. ಆಗ ಎಲ್ಲದಕ್ಕೂ ಪರಷ್ಕಾರವೆಂದರೆ ಈ ಎರಡೇ ಎಂದು ನನಗೆ ಅರ್ಥವಾಯಿತು ಎಂದರು. ಅವರು ಹೇಳಿದ ಸಂದೇಶಗಳ ಸಾರಾಂಶ ನೋಡಿದರೆ ಕೊನೆಗೆ ಈ ಎರಡು ಮಾತುಗಳು, ಹಿಂಸೆಯನ್ನು ತ್ಯಜಿಸಿ ಎಂದರೆ "ಮಾಂಸಾಹಾರವನ್ನು ತೆಗೆದುಕೊಳ್ಳಬೇಡ". ಹಂಸವನ್ನೇ ಹಿಡಿ ಎಂದರೆ "ಶ್ವಾಸದ ಮೇಲೆ ಗಮನ"ವನ್ನು ಇಡಿರಿ ಎಂದರು.

ಗುರ್ತಿಟ್ಟುಕೊಳ್ಳಿ. ಇಲ್ಲಿ ತುಂಬಾ ಜನರಿಗೆ ಅರ್ಥವಾಗುತ್ತಿಲ್ಲ. ಅವರು ಹಂಸ ಪಕಡೋ ಎಂದರು ಆದರೆ ಸಂಗೀತವನ್ನು ಹಿಡಿದುಕೋ ಎಂದು ಹೇಳಲಿಲ್ಲ.

ವಿಚಿತ್ರವೇನೆಂದರೆ? ಅವರು ಹೇಳಿದ ಹಂಸವನ್ನು ಅಂದರೆ ಶ್ವಾಸವನ್ನು ಬಿಟ್ಟು ಮಾರ್ಗದರ್ಶನ, ಸಂಗೀತವನ್ನು ಹಿಡಿದುಕೊಳ್ಳುತ್ತಿದ್ದಾರೆ.

ಅವರು ಇನ್ನೂ ಏನು ಹೇಳಿದ್ದಾರೆ ಎಂದರೆ? ನೀನು ಹಂಸವನ್ನು ಹಿಡಿದರೆ ಹಂಸವಾಗುತ್ತೀಯಾ ಎಂದರು. ರಾಮಕೃಷ್ಣ ಪರಮಹಂಸ, ಯೋಗಾನಂದ, ಪರಮಹಂಸರ ಹಾಗೆ ಶ್ರೇಷ್ಠನಾಗುತ್ತೀಯಾ ಎಂದರು.

ನಾನು ತರಗತಿಗಳಿಗೆ ಹೋಗುತ್ತಿದ್ದರೆ ಎಷ್ಟೋ ಪ್ರಶ್ನೆಗಳನ್ನು ಕೇಳುತ್ತಾರೆ. ಎಷ್ಟೋ ಸಮಸ್ಯೆಗಳು ಹೇಳುತ್ತಾರೆ. ಆಗ ನಾನು ಅವುಗಳಿಗೆ ಪರಿಷ್ಕಾರಗಳನ್ನು ಕುರಿತು ಆಲೋಚಿಸುತ್ತಿದ್ದೆನು. ಪರಿಷ್ಕಾರವು ಕೊನೆಗೆ ಈ ಎರಡು ಅಂಶಗಳ ಬಳಿಗೇ ಬರುತ್ತಿದ್ದವು. ನೀವು ಒಂದು ಸಾರಿ ಜೀವನದಶಾಸ್ತ್ರ, ಜೀವನ ಶಾಸ್ತ್ರ 2, ಜೀವನದ ಸೂಕ್ಷ್ಮತೆಗಳು, ಜೀವನದ ಸತ್ಯಗಳನ್ನು ಓದಿರಿ, ಇವೆಲ್ಲವೂ ಜೀವನದ ಸಮಸ್ಯೆಗಳ ಮೇಲೆಯೇ ಬರೆದಿದ್ದೇನೆ.

ನೀವು ಒಂದು ಸಮಸ್ಯೆಯನ್ನು ತೆಗೆದುಕೊಂಡರೆ? 4 ಅಂಶಗಳ ಮೇಲೆ ಅಧ್ಯಯನವನ್ನು ಮಾಡಬೇಕು. (1) ಸಮಸ್ಯೆ (2) ಸಮಸ್ಯೆಯಿಂದ ಬರುವ ನಷ್ಟಗಳು (3) ಆ ಸಮಸ್ಯೆಯು ಏಕೆ ಬಂದಿತು? ಅದಕ್ಕೆ ಕಾರಣವೇನು? (4) ಪರಿಷ್ಕಾರ.

ಸಮಸ್ಯೆ ಉತ್ಪತ್ತಿಯಾದಾಗ ಸಮಸ್ಯೆಯಿಂದ ಹೇಗೆ ಹೊರಬರಬೇಕು ಎನ್ನುವುದು ಅಲ್ಲ. ಈ 4 ಅಂಶಗಳನ್ನು ಆಲೋಚಿಸಿದಾಗ ನಿಶ್ಚಯವಾಗಿ ಸರಿಯಾದ ಪರಿಷ್ಕಾರವು ಲಭಿಸುತ್ತದೆ. ಸಮಸ್ಯೆಯಿಂದ ಹೊರಬರುತ್ತೀರ.

ನಾನು ಬಹಳಷ್ಟು ಆಧ್ಯಾತ್ಮಿಕ ಸಂಸ್ಥೆಗಳಲ್ಲಿ ಇರುವ ಗುರುಗಳನ್ನು, ಸ್ವಾಮೀಜಿಗಳನ್ನು ಗಮನಿಸಿದೆನು, ಅಷ್ಟೇ ಅಲ್ಲಾ, ಅವರು ಯಾರನ್ನು ಅನುಸರಿಸುತ್ತಾರೋ! ಆ ಗುರುಗಳದ್ದೋ ಅಥವಾ ಆ ದೇವರು ಫೋಟೋ ಹಿಂದೆ ಇಟ್ಟುಕೊಳ್ಳುತ್ತಾರೆ. ಅವರು ಸಮಸ್ಯೆಗಳಿಂದ, ಕಷ್ಟಗಳಿಂದ ಬರುವ ನಷ್ಟಗಳನ್ನು ಹೇಳುತ್ತಾರೆ, ಆದರೆ ಏಕೆ ಬರುತ್ತಿವೆಯೋ! ಕಾರಣವನ್ನು ಹೇಳುವುದಿಲ್ಲ.

ಅವರು ಹೇಳುವ ಪರಿಷ್ಕಾರವೆಂದರೆ ಅವರನ್ನು ಪ್ರಾರ್ಥಿಸು ನಿನ್ನ ಎಲ್ಲಾ ಕಷ್ಟಗಳು ಪರಿಹಾರವಾಗುತ್ತವೆ ಎನ್ನುತ್ತಾರೆ. ಹಾಗೆಯೇ ಕೃಷ್ಣನ ಗೊಂಬೆಯನ್ನು ಇಟ್ಟವರು ಕೃಷ್ಣನನ್ನು ಆರಾಧಿಸು ನಿನ್ನ ಸಮಸ್ಯೆಗಳೆಲ್ಲಾ ಹೋಗುತ್ತವೆ ಎನ್ನುತ್ತಾರೆ. ಹಾಗೆಯೇ ಯಾರನ್ನೋ ಒಬ್ಬರನ್ನು ಆಶ್ರಯಿಸು ಎನ್ನುತ್ತಾರೆ. ಆ ಗುರುವನ್ನು ಆಶ್ರಯಿಸು. ಆತನೇ ಎಲ್ಲವನ್ನೂ ನೋಡಿಕೊಳ್ಳುತ್ತಾನೆ ಎನ್ನುತ್ತಾರೆ. ಅಷ್ಟೇ ಆಗಲಿ ಯಾರೂ ಕಾರಣವನ್ನು ಕುರಿತು ಹೇಳುವುದಿಲ್ಲ.

ಆದರೆ ನೀವು ಕಾರಣವನ್ನು ತಿಳಿದುಕೊಂಡರೇನೆ ಪರಿಷ್ಕಾರವು ದೊರಕುತ್ತದೆ. ಹಾಗೆ ಪ್ರತಿಯೊಂದಕ್ಕೂ ನಾನು ಕಾರಣವನ್ನು ತಿಳಿದುಕೊಂಡೆನು. ಅವುಗಳೇ ನಿಮಗೆ ಪುಸ್ತಕಗಳಲ್ಲಿವೆ ಓದಿಕೊಳ್ಳಿರಿ.

ಅವುಗಳನ್ನೇ ನಾನು ಆ ಪುಸ್ತಕಗಳಲ್ಲಿ ಕೂಡಾ ಬರೆದಿದ್ದೇನೆ. ಏನಾದರೂ ಸರಿಯೇ ಕಷ್ಟಗಳು ಕರ್ಮಗಳಿಂದಲೇ ಬರುತ್ತವೆ. ಆ ಕರ್ಮಗಳು ಗತ ಜನ್ಮಗಳಲ್ಲಿ ಮಾಡಿಕೊಂಡವು ಇರಬಹುದು. ಅವುಗಳನ್ನು ಆರಿಸಿಕೊಂಡು ಬಂದಿದ್ದೀರಿ. ಇಲ್ಲಿ ಸೃಷ್ಟಿಯ ನಿಯಮದ ಜ್ಞಾನವು ಬೆಳೆದರೆ ನಿಮಗೆ ಅರ್ಥವಾಗುತ್ತದೆ. ನಿಯಮವೇನೆಂದರೆ, ಆರಿಸಿಕೊಂಡು ಬಂದ ಕರ್ಮಗಳು ಚಿಕ್ಕಂದಿನಲ್ಲಿಯೇ ಅನುಭವಿಸಬೇಕು ಎನ್ನುವ ಏರ್ಪಾಟು ಇಲ್ಲ ಸೃಷ್ಟಿಯಲ್ಲಿ.

ಸಹಜವಾಗಿ ಆರಿಸಿಕೊಂಡು ಬಂದ ಕರ್ಮಗಳು ಮುದಿತನದಲ್ಲಿ ಅನುಭವಿಸುವಂತಹ ಏರ್ಪಾಟು ಇದೆ. ಅದಕ್ಕೆ ಯೌವನದಲ್ಲಿ ಯಾರಿಗೂ ದೊಡ್ಡ ಕಷ್ಟಗಳು ಇರುವುದಿಲ್ಲ. ಅದಕ್ಕಾಗಿ ವೃದ್ಧಾಪ್ಯದಲ್ಲಿಯೇ ಹೆಚ್ಚಿನ ಕಷ್ಟಗಳು ಇರುತ್ತವೆ.

ಶಂಕರಾಚಾರ್ಯರವರು ನೀನು ಯಾರು? ನಾನು ಯಾರು? ಎಲ್ಲಿಂದ ಬಂದೆ? ನನ್ನ ತಾಯಿ ಯಾರು? ತಂದೆ ಯಾರು? ಎಂದಿದ್ದಾರೆ.

ನೀವು ಅಂದುಕೊಳ್ಳಬಹುದು ಶಂಕರಚಾರ್ಯರು ಹೀಗೆ ಹೇಳಿದರೇನು. ನನ್ನ ತಾಯಿ, ನನ್ನ ತಂದೆ ಯಾರೆಂದು ನನಗೆ ತಿಳಿಯದೇ? ತಿಳಿದಿದೆ. ಆದರೆ, ಅವರು ನಿನ್ನ ತಾಯಿ, ತಂದೆ ಅಂದುಕೊಳ್ಳುತ್ತೀಯಾ. ವಿಚಾರಣೆ ಮಾಡಿದರೆ ನಿನಗೇ ಅರ್ಥವಾಗುತ್ತದೆ.

ಅದು ನಿನಗೆ ಅರ್ಥವಾದಾಗ ಈ ಸಂಸಾರ ಬಂಧನದಿಂದ ನೀನು ಹೊರಗೆ ಬರುತ್ತೀಯಾ. ಇಲ್ಲದಿದ್ದರೆ ಈ ಸಂಸಾರ ಬಂಧನದಲ್ಲಿಯೇ ಇರುತ್ತೀಯ. ಆ ಬಂಧನದಲ್ಲಿ ಇದ್ದರೆ ಮಾಡಬಾರದ ಕೆಲಸಗಳನ್ನು ಮಾಡುತ್ತೀಯಾ. ತಪ್ಪುಗಳನ್ನು ಮಾಡುತ್ತೀಯಾ. ಪಾಪಗಳನ್ನು ಮಾಡುತ್ತೀಯಾ. ಅದರಿಂದ ಪುನಃ ಪುನಃ ಜನ್ಮಗಳನ್ನು ತೆಗೆದುಕೊಳ್ಳುತ್ತೀಯ. ಹೀಗೆ ನಿನ್ನ ಜೀವನಕ್ಕೆ ಅಂತ್ಯವು ಕಾಣಲಾರದು.

ಆದ್ದರಿಂದ ಶಂಕರಾಚಾರ್ಯರು ಏನು ಹೇಳಿದ್ದಾರೆ ಎಂದರೆ, ಈ ವಿಶ್ವದಲ್ಲಿ ಇರುವವೆಲ್ಲಾವು ಕೂಡಾ ಸಾರವಿಲ್ಲದವು. ಸ್ವಪ್ನ ಸಮಾನವಾದವು ಮಗು, ಸ್ವಪ್ನವೆಂದರೆ ಕನಸು ಇದ್ದಂತೆ ಎಂದು ತಿಳಿದುಕೊಳ್ಳಬೇಕು. ಕನಸು ಎಷ್ಟೋ? ಈಗ ನಡೆಯುತ್ತಿರುವುದು ಕೂಡಾ ಅಷ್ಟೇ. ಕನಸು ಇರುವವರೆಗೆ ನಿಜವೆಂದು ಅನಿಸುತ್ತದೆ. ಎಚ್ಚರವಾದಾಗ ಮಾಯವಾಗುತ್ತದೆ, ಆಗ ಅಂದುಕೊಳ್ಳುತ್ತೀಯಾ ಅಯ್ಯೋ ಕನಸೆಂದು.

ಆದ್ದರಿಂದ ಈಗಿರುವ ಜೀವನವು ಕೂಡಾ ಕನಸು ಎಂದು ತಿಳಿದುಕೊಳ್ಳಬೇಕು. ಅದು ಅರ್ಥವಾದರೆ, ಈ ವ್ಯಾಮೋಹಗಳು, ಅವುಗಳ ಮೇಲೆ ಇರುವ ಮಮಕಾರಗಳು ಬಿಟ್ಟು, ಸಂಸಾರ ಬಂಧನದಿಂದ ಹೊರ ಬರುತ್ತಾರೆ. ಅವರು ಉತ್ತಮ ಪುರುಷನು ಎಂದು ಬುದ್ಧನು ಹೇಳಿದ್ದಾನೆ.

ಪತ್ರಿಜಿಯವರು ಕನಸುಗಳ ಬಗೆಗೆ ತುಂಬಾ ಚೆನ್ನಾಗಿ ಹೇಳಿದ್ದಾರೆ. ಮೊದಲಿಗೆ ಈ ಕನಸುಗಳು ಎನ್ನುವ ಏರ್ಪಾಟು ಪ್ರಕೃತಿಯಲ್ಲಿ ಏಕೆ ಏರ್ಪಾಟು ಮಾಡಲಾಗಿದೆ? ಹಾಯಾಗಿ ನಿದ್ರೆ ಹೋದರೆ ಬಿಟ್ಟು ಹೋಗುವುದಕ್ಕೆ ಮಧ್ಯದಲ್ಲಿ ಕನಸುಗಳು ಬೀಳುತ್ತವೆ. ಈ ಕನಸುಗಳಿಂದ ಉಪಯೋಗವೇನು? ನೆನಪಿಟ್ಟುಕೊಳ್ಳಿ ಸೃಷ್ಟಿಕರ್ತ ಏನು ಮಾಡಿದರೂ ಕೂಡಾ ಅದಕ್ಕೆ ಒಂದು ಕಾರಣವಿದೆ.

ಕಾರಣವಿಲ್ಲದೆ ಏನು ನಡೆಯುವುದಿಲ್ಲ. ಮತ್ತೆ ಈ ಕನಸುಗಳಿಗೆ ಕಾರಣವೇನು ಎನ್ನುವುದನ್ನು ತಿಳಿದುಕೊಳ್ಳೋಣ. ಬುದ್ಧನು ಹೇಳಿದುದರಲ್ಲಿ ಇನ್ನೂ ಆಳವಾಗಿ ಹೋದರೆ ಇನ್ನೂ ಬಹಳಷ್ಟು ತಿಳಿದುಕೊಳ್ಳಬಹುದು.

ಶಂಕರಾಚಾರ್ಯರು ಹೇಳಿದ ಶ್ಲೋಕದ ಕುರಿತು ಹೇಳಿಕೊಳ್ಳೋಣ
ಕಸ್ತ್ವಂ ಕೋಹಂ ಕುತ ಆಯತಃ
ಕಾ ಮೇ ಜನನೀ ಕೋ ಮೇ ತತಃ

ಇತಿ ಪರಿಭಾವಾಯ ಸರ್ವಮಾಸಾರಮ್

ವಿಶ್ವಂ ತ್ಯಕ್ತ್ವಾ ಸ್ವಪ್ನ ವಿಚಾರಂ ॥

ಎಂದು ಹೇಳಿ ಆ ಭಜಗೋವಿಂದಂದಲ್ಲಿ ಇರುವಂತಹ ಶ್ಲೋಕ. ಇದರ ತಾತ್ಪರ್ಯವೇನೆಂದರೆ ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ನನ್ನ ತಂದೆ ಯಾರು? ಸಾರಹೀನವಾದ, ಸ್ವಪ್ನ ತುಲ್ಯವಾದ ಈ ವಿಶ್ವವನ್ನು ಈ ವಿಧವಾದ ವಿಚಾರಣೆ ಮೂಲಕ ತ್ಯಜಿಸಬೇಕು ಎಂದು ಇದರ ಅರ್ಥ.

ಈ ಸಂಸಾರ ಬಂಧನದಿಂದ ಏಕೆ ಹೊರಬರಬೇಕು? ಅಂದರೆ ವಿಚಾರಣೆ ಮಾಡಿರಿ ಎಂದಿದ್ದಾರೆ. ಯಾವುದರ ಕುರಿತು ವಿಚಾರ ಮಾಡಬೇಕು? ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ನನ್ನ ತಂದೆ ಯಾರು? ಈ ಪ್ರಶ್ನೆಗಳಿಗೆಲ್ಲಾ ಉತ್ತರಗಳನ್ನು ಸಂಪಾದಿಸಿಕೊಳ್ಳಬೇಕು.

ತಿಳಿದಿದೆಯೆಂದು ಸುಮ್ಮನೆ ಅನ್ನುತ್ತಾರೆ ಆದರೆ ಅರ್ಥವಾಗದು. ನೆನಪಿಟ್ಟುಕೊಳ್ಳಿ, ತಿಳಿಯುವುದು ಬೇರೆ, ಅರ್ಥ ಮಾಡಿಕೊಳ್ಳುವುದು ಬೇರೆ. ತಿಳಿದವನು ಹೇಳುತ್ತಾನೆ. ಅರ್ಥ ಮಾಡಿಕೊಂಡವನು ಆಚರಿಸುತ್ತಾನೆ. ನಿಮ್ಮೆಲ್ಲರಿಗೂ ತಿಳಿದಿದೆ, ಆದರೆ ಆಚರಿಸುತ್ತಿಲ್ಲ. ಅಂದರೆ ನಿಮಗೆ ಇನ್ನೂ ಅರ್ಥ ಆಗಿಲ್ಲವೆಂದು ಲೆಕ್ಕ. ಈ ವಿಚಾರಣೆ ಮಾಡುವವನಿಗೆ, ಏಕೆ ವಿಚಾರಣೆ ಮಾಡಬೇಕು? ಈ ಸಂಸಾರ ಬಂಧನದಿಂದ ಹೊರಗೆ ಬರಬೇಕು.

ಈ ಸಂಸಾರದ ಮೇಲೆ ಮಮಕಾರ ಹೋಗುವುದು ಏಕೆ? ಬುದ್ಧನು ಹೇಳಿದಂತೆ ಉತ್ತಮ ಪುರುಷರ ಸಾಲಿಗೆ ನಾವು ಸೇರಲು. ಯಾರು ಉತ್ತಮ ಪುರುಷನು? ಮೋಕ್ಷ ಸ್ಥಿತಿಯಲ್ಲಿ ಇರುವವನೇ ಉತ್ತಮ ಪುರುಷನು. ಯಾವುದಕ್ಕೋಸ್ಕರ ನಾವು ಇಷ್ಟು ಹಾತೊರೆಯುತ್ತಿದೆವೆಯೋ, ತಾಪತ್ರಯ ಪಡುತ್ತಿದ್ದೇವೆಯೋ ಅದನ್ನು ಹೊಂದಬೇಕು. ಅಂದರೆ ಉತ್ತಮ ಪುರುಷನು ಆಗಬೇಕು. ಅದರ ಒಂದು ಲಕ್ಷಣ ಏನೆಂದರೆ ಸಂಸಾರ ಬಂಧನದಿಂದ ಹೊರಬರಬೇಕು.

ಆದ್ದರಿಂದ ಈ ವಿಚಾರಣೆಯು ಅವಶ್ಯಕ. ನೀನು ಯಾರು? ನಿನ್ನ ಎದುರಿಗೆ ಇರುವವರು, ನಿನ್ನ ಕುಟುಂಬದಲ್ಲಿ ಇರುವವರು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ನನ್ನ ತಂದೆ ಯಾರು? ಈ ವಿಚಾರಣೆ ಮಾಡಬೇಕು ಏಕೆ? ಇವೆಲ್ಲವೂ ಸಾರಹೀನವಾದವುಗಳು. ಅಂದರೆ ಸಾರವಿಲ್ಲದವು. ಅಂದರೆ ಉಪಯೋಗವಿಲ್ಲದವು. ಇದು ಯಾರಿಗೆ ತಿಳಿಯುತ್ತದೆ? ನಾನು ದೇಹವಲ್ಲ, ನಾನು ಆತ್ಮನು ಎಂದವರಿಗೆ ತಿಳಿಯುತ್ತದೆ.

ಸಾರವಿಲ್ಲದ ಇವುಗಳನ್ನು ಹಿಡಿದುಕೊಂಡರೆ, ಆತ್ಮನಾದ ನೀನು ಎಷ್ಟೋ ನಷ್ಟ ಹೋಗುತ್ತೀಯಾ. ಮೋಕ್ಷದಿಂದ ದೂರ ಹೋಗುತ್ತೀಯ. ಸಾರವಿಲ್ಲದ, ರಸವಿಲ್ಲದ ಒಂದು ನಿಂಬೆಹಣ್ಣನ್ನು ಕೊಂಡರೆ ಹುಲ್ಲಿನಂತೆ ಇರುತ್ತದೆ. ರಸವು ಬರುವುದಿಲ್ಲ. ಯಾವುದಕ್ಕೂ ಉಪಯೋಗವಾಗಲಾರದು. ಹಾಗೆಯೇ ಈ ಸಾರಹೀನವಾದವುಗಳನ್ನು ಹಿಡಿದುಕೊಂಡರೆ ಈ ಜನ್ಮವು ವ್ಯರ್ಥವಾದಂತೆ. ಅಸಲು ಜನ್ಮವನ್ನು ಏಕೆ ತೆಗೆದುಕೊಂಡಿದ್ದೇವೆ?

ಅದಕ್ಕೆ ಶಂಕರಾಚಾರ್ಯರು ಅವು ಸಾರಹೀನವಾದವುಗಳು ಎಂದಿದ್ದಾರೆ. ಇನ್ನೂ ಏನು ಹೇಳಿದ್ದಾರೆ ಎಂದರೆ ಸ್ವಪ್ನ ತುಲ್ಯವಾದವುಗಳು ಕೂಡಾ ಎಂದಿದ್ದಾರೆ. ಸ್ವಪ್ನಗಳು ಎಂದರೆ ಕನಸುಗಳಿದ್ದಂತೆ ಎಂದಿದ್ದಾರೆ. ನೀವು ನೋಡಿ, ಕನಸು ಇದ್ದಷ್ಟು ಸಮಯ ನಿಜವೆಂದು ಅನ್ನಿಸುತ್ತದೆ. ನಡೆಯುತ್ತಿದೆ ಏನೋ ಅನ್ನಿಸುತ್ತದೆ. ಎಲ್ಲವನ್ನೂ ಅನುಭೂತಿ ಪಡೆಯುತ್ತಾ ಇರುತ್ತೇವೆ. ಆದರೆ ಎಚ್ಚರವಾದಾಗ ಅರ್ಥವಾಗುತ್ತದೆ ಅದು ಕನಸೆಂದು ನಿರುತ್ಸಾಹ ಪಡುತ್ತೇವೆ.

ಒಂದೊಂದು ಸಾರಿ ಒಳ್ಳೆಯ ಕನಸುಗಳು ಬಂದಾಗ ಬಾಧೆಪಡುತ್ತೇವೆ ಕೂಡಾ. ಈ ಸಂಸಾರ ಕೂಡಾ ಅಷ್ಟೇ ಎಂದಿದ್ದಾರೆ ಶಂಕರಾಚಾರ್ಯರವರು. ನೀನು ಇವರೆಲ್ಲರೂ ಒಳ್ಳೆಯವರು ಎಂದುಕೊಳ್ಳುತ್ತೀಯ. ನಿಜವೆಂದು ಅಂದುಕೊಳ್ಳುತ್ತೀಯಾ ನಿನ್ನವರು, ನಿನ್ನ ಬಂಧುಗಳು,, ನಿನ್ನ ಮಗ, ನಿನ್ನ ತಾಯಿ, ನಿನ್ನ ಧನ ಅಂದುಕೊಳ್ಳುತ್ತೀದ್ದಿಯಾ ಇವೆಲ್ಲವೂ ಸ್ವಪ್ನತುಲ್ಯ ಅಂದರೆ ಕನಸುಗಳು ಇದ್ದಂತೆ ಮಗು, ಕನಸು ಹೇಗೋ ಇದೂ ಹಾಗೆಯೇ ಎನ್ನುತ್ತಿದ್ದಾರೆ ಶಂಕರಾಚಾರ್ಯರು.

ನೀನು ತುಂಬಾ ದೊಡ್ಡ ಶ್ರೀಮಂತನಂತೆ ಕನಸು ಕಂಡೆ, ಎಷ್ಟೋ ಉಬ್ಬಿಹೋಗುತ್ತೀಯಾ, ಎಷ್ಟು ಅದೃಷ್ಟವೋ ಎಂದುಕೊಳ್ಳುತ್ತೀಯ, ಆ ಕನಸಿನಲ್ಲಿ ಆ ಹಣದೊಂದಿಗೆ ಮಹಡಿಗಳನ್ನು ಕಟ್ಟಿಸುತ್ತೀಯಾ, ನಿನ್ನ ಆಸೆಗಳನ್ನೆಲ್ಲಾ ತೀರಿಸಿಕೊಳ್ಳುತ್ತೀಯಾ, ಇನ್ನೂ ಹೆಚ್ಚು ಸಂತೋಷಪಡುತ್ತೀಯ. ಎಚ್ಚರವಾಗಿ ಬಿಡುತ್ತದೆ. ಏನೆನ್ನುತ್ತೀಯಾ? ಏನು ನನಗೆ ಹಣವಿಲ್ಲವೇ? ಮಹಡಿಗಳಿಲ್ಲವೇ? ಎಲ್ಲಾ ಸುಮ್ಮನೇನಾ? ಎಂದು ನಿರುತ್ಸಾಹ ಪಡುತ್ತೀಯಾ. ಈ ಸಂಸಾರವೂ ಕೂಡಾ ಹಾಗೆಯೇ! ಕನಸಿನಂತೆ ಎಂದು ನೆನಪಿಟ್ಟುಕೊಳ್ಳಬೇಕು.

ಅಷ್ಟೇ ಅಲ್ಲಾ, ಈ ವಿಶ್ವವೇ ಕನಸಿದ್ದಂತೆ ಎಂದಿದ್ದಾರೆ. ವಿಶ್ವವೇ ಸ್ವಪ್ನವಿದ್ದಂತೆ, ವಿಶ್ವದಲ್ಲಿ ಇರುವವೆಲ್ಲವೂ ಸ್ವಪ್ನವೇ ಅಲ್ಲವೇ? ಆಲೋಚಿಸಿ. ಆದ್ದರಿಂದ ಇವುಗಳನ್ನು ಸ್ವಲ್ಪ ವಿಚಾರಣೆ ಮೂಲಕ ಬಿಟ್ಟುಬಿಡು ಮಗು ಎನ್ನುತ್ತಿದ್ದಾರೆ ಶಂಕರಾಚಾರ್ಯರವರು.

ಮುಖ್ಯವಾಗಿ ಈ ಸಂಸಾರ ಬಂಧನದಲ್ಲಿ ಹೊರಬರಬೇಕೆಂದರೆ, ಸಂಸಾರನೇ ಒಂದು ಕನಸಿದ್ದಂತೆ ಎಂದು ಅರ್ಥ ಮಾಡಿಕೊಳ್ಳಬೇಕು.

ಬಹಳಷ್ಟು ಜನರು ಕೆಟ್ಟ ಕನಸುಗಳು ಬಂದರೆ ಬೇಸರಪಡುತ್ತಿರುತ್ತಾರೆ. ಒಳ್ಳೆಯ ಕನಸು ಬಂದರೆ ಸಂತೋಷಿಸ್ತಾರೆ. ಆದರೆ ಈ ಕನಸುಗಳು ಬೀಳುವ ವ್ಯವಸ್ಥೆಯು ಪ್ರಕೃತಿಯಲ್ಲಿಯೇ ಇದೆ. ಇದು ಸೃಷ್ಟಿಯಲ್ಲಿ ಸೃಷ್ಟಿಕರ್ತನು ಮಾಡಿದ ಏರ್ಪಾಟು. ಆತನು ವ್ಯವಸ್ಥೆ ಮಾಡದೇ ಹೋದರೆ ಯಾರಿಗೂ ಕನಸುಗಳು ಬರುವುದಿಲ್ಲ.

ಏಕೆ ಏರ್ಪಾಟು ಮಾಡಿದ್ದಾನೆ? ಮುಖ್ಯವಾಗಿ ಕನಸುಗಳಿಂದ 2 ವಿಧವಾದ ಜೀವನದ ಪಾಠಗಳನ್ನು ಕಲಿಯಲು. ಏಕೆಂದರೆ ಪ್ರಕೃತಿ ಏನು ಮಾಡಿದರೂ ಮಾನವರಿಗೆ ಉಪಕಾರವಾಗಲೆಂದು, ಲಾಭಕ್ಕಾಗಿ, ಅಭಿವೃದ್ಧಿ ಹೊಂದಲು, ಭಗವಂತನು ಏನು ಮಾಡಿಲ್ಲವೆನ್ನುತ್ತಾರೆ. ಆದರೆ ಆತನು ಮಾಡುವ ಉಪಕಾರಗಳು ನೋಡಿದರೆ ಆಶ್ಚರ್ಯ ಹೋಗುತ್ತೀರಿ.

ಪ್ರಕೃತಿ 2 ವಿಧಗಳ ಲಾಭಗಳನ್ನು ಕಲಿಸಲು ಈ ಏರ್ಪಾಟುಗಳು.

(1) ಹಸಿ ಸತ್ಯ (2) ಪರಮ ಸತ್ಯ ಎನ್ನುವ ಪಾಠಗಳನ್ನು ಕಲಿಯುವುದಕ್ಕಾಗಿ,

ನಿಮಗೆ ಅರ್ಥವಾಗಬೇಕು ಎಂದರೆ, ನಡೆಯುತ್ತಿರುವುದಲ್ಲಾ ಕನಸು ಇದ್ದಂತೆ ಎಂದು ಹೇಳುತ್ತಿದೆ ಪ್ರಕೃತಿ, ಅದೇ ಹಸಿ ಸತ್ಯ. ಅಂದರೆ ನೀವು ಕಂಡ ಕನಸು ಎಂತಹುದೋ, ಈ ನಡೆಯುತ್ತಿರುವ ಜೀವನ ಕೂಡಾ ಹೇಳುತ್ತಿದೆ. ಏನೆಂದರೆ "ಯ ದೃಶ್ಯಂ, ತನ್ನಶ್ಯಂ" ಅಂದರೆ ಯಾವುದು ಕಾಣುತ್ತಿದೆಯೋ, ಯಾವುದು ನೋಡುತ್ತಿದ್ದಿಯೋ ಅದೆಲ್ಲವೂ ನಶಿಸಿಹೋಗುವುದೇ ಎನ್ನುವುದು ಕೂಡಾ ಬೋಧಿಸುತ್ತದೆ ಪ್ರಕೃತಿ.

ನೀವು ಕಾಣುತ್ತಿರುವುದೆಲ್ಲ ನಡೆಯುವುದು, ಇರುವುದು, ಸರಿ ಎಂದುಕೊಳ್ಳುತ್ತೀಯ. ಆದರೆ ಯಾವುದು ನೋಡುತ್ತಿರುವೆಯೋ! ಎಲ್ಲಾ ನಶಿಸಿಹೋಗುವುದೇ, ಉಪನಿಷತ್ತಿನಲ್ಲಿಯೂ ಉತ್ತಮ ಸಂದೇಶವು "ಯ ದೃಶ್ಯಂ ತನ್ನಶ್ಯಂ" ಯಾವುದು ಕಾಣಿಸುತ್ತಿದೆಯೇ ಅದೆಲ್ಲಾ ನಶಿಸಿ ಹೋಗುವುದೇ ಎನ್ನುವ ವಿಷಯವನ್ನು ಬೋಧಿಸುತ್ತದೆ.

ಪ್ರಕೃತಿ ಕನಸುಗಳ ಮೂಲಕ ಇನ್ನೂ ಎಷ್ಟೋ ಲಾಭವನ್ನು ಕೂಡಾ ತಂದುಕೊಡುತ್ತದೆ. ಮಾನವರೆಲ್ಲಿ ಎಷ್ಟೋ ತೀರಲಾಗದ ಕೋರಿಕೆಗಳು ಇರುತ್ತವೆ. ಅವು ತೀರಲಾರದೆ ಎಷ್ಟೋ ನಿರುತ್ಸಾಹಪಡುತ್ತಾರೆ. ದೇವರನ್ನು ನಿಂದಿಸುತ್ತಾರೆ ಕೂಡಾ! ಆ

ಕೋರಿಕೆಗಳು ತೀರಲಿಲ್ಲವೆಂದು ದುಃಖಪಡುತ್ತಾರೆ. ಆದರೆ ಪ್ರಕೃತಿ ಏನು ಮಾಡುತ್ತದೆ ಎಂದರೆ ತೀರಲಾರದ ಕೋರಿಕೆಗಳನ್ನು ಕನಸುಗಳ ಮೂಲಕ ತೀರಿಸುತ್ತದೆ. ಒಂದು ನಡೆಯುವುದೆಲ್ಲಾ ಕನಸು ಇದ್ದಂತೆ, ದುಃಖಪಡುತ್ತಾರೆ. ನಮ್ಮ ಮಗನು ಸರಿಯಾಗಿ ಓದುತ್ತಿಲ್ಲ, ನಮ್ಮ ಮಗಳಿಗೆ ಇನ್ನೂ ಮದುವೆ ಆಗಿಲ್ಲ, ನಮಗೆ ವ್ಯಾಪಾರದಲ್ಲಿ ನಷ್ಟವಾಯಿತು! ನಾನು ಮಹಡಿ ಮನೆ ಕಟ್ಟದೆ ಹೋದೆನು.

ನೆನಪಿಟ್ಟುಕೊಳ್ಳಿ, ನಿಮ್ಮ ಮಗನು ಸರಿಯಾಗಿ ಓದದೇ ಇರುವುದು ಕನಸಿನಲ್ಲಿ, ಆ ವಿಷಯವು ತಿಳಿಯುತ್ತಿಲ್ಲ. ಸುಮ್ಮನೆ ದುಃಖಪಡುತ್ತೀರಿ. ನಮ್ಮ ಮಗಳಿಗೆ ಮದುವೆ ಆಗುತ್ತಿಲ್ಲ, ಎಲ್ಲಿ? ಕನಸಿನಲ್ಲಿ! ಕನಸಿನಲ್ಲಿ ಮದುವೆ ಆಗದಿದ್ದರೆ ನಿಮಗೇನು? ನಾನು ಮಹಡಿ ಕಟ್ಟದೇ ಹೋದೆನು, ನೆರೆಯವರು ಕಟ್ಟಿಬಿಟ್ಟರು. ಎಲ್ಲಿ? ಕನಸಿನಲ್ಲಿ. ಆದ್ದರಿಂದ ನಡೆಯುತ್ತಿರುವುದೆಲ್ಲಾ ಕನಸಿನಂತಹುದೇ ಎಂದು ತಿಳಿದವನು ಯಾವುದಕ್ಕೂ ದುಃಖಪಡುವುದಿಲ್ಲ.

"ಯ ದೃಶ್ಯಂ ತನ್ನಶ್ಯಂ" ಎನ್ನುವುದು ಪರಮ ಸತ್ಯವು. ಈ ಸತ್ಯವು ನಿರ್ವಿವಾದವಾದದ್ದು, ಇನ್ನೂ ಇದನ್ನು ಯಾರೂ ಬದಲಾಯಿಸಲಾರರು. ಯಾವುದು ಕಾಣುತ್ತಿದೆಯೋ ಅದು ನಶಿಸಿ ಹೋಗುವುದೇ ಇರುವಂತಹದಲ್ಲ. ಶಾಶ್ವತವಾದದಲ್ಲ. ಆ ಒಂದು ಮಾತಿನಲ್ಲಿ ಎಷ್ಟು ಅರ್ಥವಿದೆಯೋ ಗಮನಿಸಿರಿ.

ಅಷ್ಟೇ ಅಲ್ಲಾ, ಇನ್ನೊಂದೂ ಕೂಡಾ ನಮಗೆ ಪ್ರಕೃತಿಯು ಈ ಕನಸುಗಳ ಮೂಲಕ ಬೋಧಿಸುತ್ತದೆ. ನಿನ್ನ ತೀರದ ಕೋರಿಕೆಗಳನ್ನು ತೀರಿಸುತ್ತದೆ. ಅವನಿಗೆ ಕಾರು ಕೊಳ್ಳಬೇಕು ಎಂದಿರುತ್ತದೆ. ಒಬ್ಬ ಹೆಂಗಸಿಗೆ ಬಹಳಷ್ಟು ವಸ್ತುಗಳನ್ನು ಕೊಳ್ಳಬೇಕೆಂದಿರುತ್ತದೆ. ಏನು ಮಾಡುತ್ತಾರೆ? ಅವನಲ್ಲಿ ಹಣವಿಲ್ಲ ಕೊಳ್ಳಲಾಗದು, ಆಕೆಗೆ ಹಣವಿಲ್ಲ, ಆಕೆಯೂ ಕೊಳ್ಳಲಾರಳು. ಈಕೆಗೆ ವಜ್ರದ ಹಾರವನ್ನು ಧರಿಸಬೇಕೆಂದು ಇರುತ್ತದೆ. ಏನು ಮಾಡುತ್ತಾಳೆ? ಒಂದು ಉಂಗುರವನ್ನೇ ಕೊಂಡುಕೊಳ್ಳಲಾರದ ಸ್ಥಿತಿಯಲ್ಲಿದ್ದಾಳೆ. ವಜ್ರದ ಹಾರವ ಎಲ್ಲಿಂದ ಕೊಳ್ಳುತ್ತಾಳೆ? ಕೊಳ್ಳಲಾರಳು. ಅದಕ್ಕೇ ಭಗವಂತನು ಕನಸುಗಳ ಮೂಲಕ ತೀರಿಸುತ್ತಾನೆ.

ಬೇಕಾದರೆ ಪರೀಕ್ಷಿಸಿಕೊಳ್ಳಿ, ತೀರಲಾರದ ಕೋರಿಕೆಗಳೇ ಕನಸುಗಳ ರೂಪದಲ್ಲಿ ಬಂದು ನಿಮ್ಮ ಕೋರಿಕೆಗಳನ್ನು ತೀರಿಸುತ್ತಾ ಇರುತ್ತವೆ. ಆ ಕೋರಿಕೆಗಳು ತೀರುತ್ತಿರುವಾಗ, ಆ ಕಾರನ್ನು ಕೊಂಡು, ಕಾರಿನಲ್ಲಿ ತಿರುಗುತ್ತಿರುವಾಗ, ಆ ಕನಸು ಕಾಣುತ್ತಿರುವಾಗ ಎಚ್ಚರವಾದರೆ ಎಷ್ಟು ದುಃಖಪಡುತ್ತಾರೋ.

ಆ ಕನಸು ಹಾಗೇ ಇದ್ದುಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆಯೋ ಎಂದುಕೊಳ್ಳುತ್ತಾರೆ. ಈಕೆಯು ವಜ್ರದ ಹಾರವನ್ನು ಹಾಕಿಕೊಂಡು ತಿರುಗುತ್ತಿದ್ದರೆ, ಎಲ್ಲರೂ ನೋಡಿ

ಮೆಚ್ಚಿಕೊಳ್ಳುತ್ತಿದ್ದರೆ, ಈಕೆಯನ್ನೇ ನೋಡುತ್ತಿದ್ದರೆ, ಆ ಕನಸು ಹಾಗೆಯೇ ಇದ್ದುಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆಯೋ ಎನ್ನಿಸುತ್ತದೆ. ಆದರೆ ವಿಚಿತ್ರವೆಂದರೆ, ಎಚ್ಚರವಾಗಿಬಿಡುತ್ತದೆ. ಎಷ್ಟು ನಿರಾಶೆ ಹೊಂದುತ್ತಿರೋ! ಆಗ ಅಂದುಕೊಳ್ಳುತ್ತೀರಿ. ಕನಸು ನನಸಾಗಿದ್ದರೆ ಎಷ್ಟು ಚೆನ್ನಾಗಿರುತ್ತದೆ ಎಂದು.

ಕೆಲವರಿಗೆ ಒಂದೊಂದು ಬಾರಿ ಕನಸುಗಳು ನಿಜವಾಗುತ್ತದೆ. ಆಗ ಕನಸುಗಳು ನನಸಾದವು, ಕೋರಿಕೆಗಳು ತೀರಿದವು ಎನ್ನುತ್ತಾ ಹಾಡನ್ನು ಕೂಡಾ ಹಾಡಿಕೊಳ್ಳುತ್ತಾರೆ.

ಕೆಲವರಿಗೆ ಒಂದೊಂದು ಸಿನಿಮಾ ಹೀರೋಯಿನ್‌ನನ್ನು ಅನುಭವಿಸಿದರೆ ಸಾಕು ಎಂದುಕೊಳ್ಳುತ್ತಾರೆ. ಅದು ಬಲವಾದ ಕೋರಿಕೆ ಆಗಿದ್ದರೆ, ಯಾವುದೋ ಒಂದು ದಿನ ಆಕೆಯನ್ನು ಅನುಭವಿಸಿದಂತೆ ಕನಸು ಬೀಳುತ್ತದೆ.

ಹಾಗೆ ತೀರದ ಕೋರಿಕೆಗಳು ತೀರಿಸಿಕೊಳ್ಳುವುದು, ಹಣವನ್ನು ಸಂಪಾದನೆ ಮಾಡುವುದು ಇಂತಹವೂ ಕೂಡಾ ಕನಸಿನಲ್ಲಿ ನಿಜವಾದಂತೆ ಅನ್ನಿಸುತ್ತದೆ. ಅದು ಪ್ರಕೃತಿಯು ಮಾಡಿದ ಏರ್ಪಾಟು ತುಂಬಾ ಜನರು ಏನೆಂದುಕೊಳ್ಳುತ್ತಾರೆ ಎಂದರೆ? ಅದು ಕನಸು, ಈಗ ನಡೆಯುತ್ತಿರುವುದು ನಿಜವೆಂದುಕೊಳ್ಳುತ್ತಾರೆ.

ನೆನಪಿಟ್ಟುಕೊಳ್ಳಿ ಶಂಕರಾಚಾರ್ಯರವರು ಈಗ ನಡೆಯುತ್ತಿರುವುದು ಕೂಡಾ ಕನಸೇ ಎನ್ನುತ್ತಾರೆ. ನಿದ್ರೆಯಲ್ಲಿ ಬರುವ ಕನಸು ಹೇಗಿದೆಯೋ ಎಚ್ಚರದಲ್ಲಿಯೂ ನಡೆಯುತ್ತಿರುವುದೆಲ್ಲಾ ಕೂಡಾ ಅಂತಹುದೇ ಕನಸು. ಅದನ್ನೇ ಶಂಕರಾಚಾರ್ಯರು ಹೇಳಿದ್ದಾರೆ. ಈ ವಿಶ್ವವೆಲ್ಲವೂ ಸ್ವಪ್ನ ಸದೃಶ್ಯಂ ಎಂದಿದ್ದಾರೆ, ಕನಸು ಅಂತಹುದೇ ಎಂದಿದ್ದಾರೆ. ಸೃಷ್ಟಿಯು ಎಂತಹ ಶ್ರೇಷ್ಠವಾದದ್ದು?

ಇದೆಲ್ಲವೂ ಜ್ಞಾನವು ವೃದ್ಧಿಯಾದರೆ ಅರ್ಥವಾಗುತ್ತದೆ. ಅಜ್ಞಾನದಲ್ಲಿ ಅಂದರೆ ಏನೂ ಅರ್ಥವಾಗದು. ನೀವು ಗಮನಿಸಿ ತಪ್ಪು ಮಾಡಿದವರನ್ನು ಜೈಲಿನಲ್ಲಿಡುತ್ತಾರೆ, ಅಂದರೆ ಬಂಧನದಲ್ಲಿಡುತ್ತಾರೆ. ಆದರೆ ಇನ್ನೊಂದು ವಿಷಯ ನಿಮಗೆ ತಿಳಿಯದು, ಕರ್ಮಗಳನ್ನು ಮಾಡಿದವರೆಲ್ಲರೂ ಭೂಮಿ ಎನ್ನುವ ಜೈಲಲ್ಲಿ ಬಂಧಿಸಲ್ಪಡುತ್ತಾರೆ.

ಮಾನವರು ಏರ್ಪಾಟು ಮಾಡಿದ ಜೈಲು ಹೇಗೋ, ಭಗವಂತನು ಏರ್ಪಡಿಸಿದ ಈ ಭೂಮಿ ಎನ್ನುವ ಜೈಲು ಕೂಡಾ ಅಷ್ಟೇ! ಈ ಭೂಮಿ ಎನ್ನುವುದನ್ನು ಭಗವಂತನು ಏರ್ಪಾಡು ಮಾಡಿದ್ದಾನೆ. ಜೈಲು ಎನ್ನುವುದನ್ನು ಮಾನವನು ಏರ್ಪಾಡು ಮಾಡಿದ್ದಾನೆ. ಮಾನವನು ಏರ್ಪಾಡು ಮಾಡಿದ ಜೈಲಿನಲ್ಲಿ ಹೇಗೆ ಬಂಧಿತರಾಗಿ ನರಳುತ್ತಾ ಇರುತ್ತಾರೋ, ನೋವುಪಡುತ್ತಾ ಇರುತ್ತಾರೋ, ಭಗವಂತನು ಏರ್ಪಾಡು ಮಾಡಿದ ಈ ಭೂಮಿ ಎನ್ನುವ ಜೈಲಿನಲ್ಲಿ ಬಂಧಿಸಿ, ವಿಧವಿಧವಾದ ನೋವುಗಳನ್ನು ಅನುಭವಿಸುತ್ತಾ ಇರುತ್ತಾರೆ.

ಕಷ್ಟಗಳಿಂದ, ಸಮಸ್ಯೆಗಳಿಂದ, ತೊಂದರೆಗಳಿಂದ, ದುಃಖಪಡುತ್ತಿರುತ್ತಾರೆ. ತೊಂದರೆಗಳು ಬಂದವೆಂದುಕೊಳ್ಳುತ್ತಾರೆ. ಆದರೆ ಜೈಲಲ್ಲಿ ಪಡುವ ನೋವುಗಳು ಎಂದುಕೊಳ್ಳುವುದಿಲ್ಲ. ಜೈಲಲ್ಲಿ ಇದ್ದರೆ ಎಷ್ಟೋ ನೋವುಗಳೋ, ಈ ಭೂಮಿಯ ಮೇಲೆ ಇದ್ದರೂ ಕೂಡಾ ಅಷ್ಟೇ ನೋವುಗಳು ಜೈಲಲ್ಲಿ ಇದ್ದವನು ಜೈಲಿನಿಂದ ಹೇಗೆ ಹೊರಬರಬೇಕು ಅಂದುಕೊಳ್ಳುತ್ತಾನೆಯೋ ಈ ಭೂಮಿ ಮೇಲೆ ಇರುವವನು ಭೂಮಿಯಿಂದ ಹೊರಗೆ ಬರಬೇಕೆಂದು ಅಂದುಕೊಳ್ಳುವುದಿಲ್ಲ ವಿಚಿತ್ರವಲ್ಲವೇ. ಆದರೆ ಜ್ಞಾನಿಗಳು ಅಂದುಕೊಳ್ಳುತ್ತಾರೆ.

ಈ ಭೂಮಿ ಎನ್ನುವ ಜೈಲು ನನಗೇಕೆ? ಇನ್ನು ನಾನು ಈ ಜೈಲಿಗೆ ಬರಬಾರದು. ಈ ಜೈಲಿನಿಂದ ಶಾಶ್ವತವಾಗಿ ಹೊರಬರಬೇಕು. ಈ ಬಂಧನದಿಂದ ನಾನು ವಿಮುಖನಾಗಬೇಕು ಎಂದು ಜ್ಞಾನಿಯು ಅಂದುಕೊಳ್ಳುತ್ತಾನೆ. ಅಜ್ಞಾನಿಗೆ ಇವು ಯಾವುವು ತಿಳಿಯುವುದಿಲ್ಲ. ಏನೋ ಜೀವಿಸುತ್ತಾನೆ, ಏನೋ ಮಾಡುತ್ತಾನೆ, ಕರ್ಮಗಳನ್ನು ಮಾಡಿಬಿಡುತ್ತಾನೆ, ಪಾಪಗಳನ್ನು ಮಾಡುತ್ತಾನೆ, ಪುಣ್ಯಗಳನ್ನು ಮಾಡುತ್ತಾನೆ. ಪುನಃ ಪುನಃ ಭೂಮಿಗೆ ಬರುತ್ತಿರುತ್ತಾನೆ. ಪುನಃ ನೋವನ್ನು ಅನುಭವಿಸುತ್ತಿರುತ್ತಾನೆ.

ಬಂದ ಮೇಲೆ ಎಷ್ಟೋ ಬಾಧೆಗಳಿರುತ್ತವೆ. ಜನ್ಮ ದುಃಖ, ಜರಾ ದುಃಖ ಎಂದು, ಹೀಗೆ ಎಷ್ಟೋ ವಿಧವಾದ ಸಮಸ್ಯೆಗಳು, ತೊಂದರೆಗಳು ಇರುತ್ತವೆ.

ಏಕೆಂದರೆ ಈ ಸಂಸಾರವು ಒಂದು ಕನಸು ಇದ್ದಂತೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಇನ್ನೂ ಸ್ವಪ್ನ ಸದೃಶ್ಯಂ ಎಂದು ಹೇಳಿದ್ದಾರೆ. ಇದನ್ನು ಅರ್ಥ ಮಾಡಿಕೊಂಡರೆ, ನಿಮಗೆ ಸಂಸಾರದ ಮೇಲೆ ಮಮಕಾರವಿರುವುದಿಲ್ಲ. ಇಲ್ಲದಿದ್ದರೆ ಮಕ್ಕಳ ಮೇಲೆ, ಹೆಂಡತಿ, ಗಂಡನ ಮೇಲೆ, ಹಣದ ಮೇಲಿನ ಮವಕಾರವನ್ನು ಬಿಡಲಾರರು. ನಾನು, ನಾನು ಎಂದು ಅಳುತ್ತಾರೆ, ಅದಕ್ಕೆ ಹೇಳುತ್ತಾರೆ. ನಾನು ಎನ್ನುವುದು ಬಿಟ್ಟರೆ ಮಾತ್ರ ಮೋಕ್ಷವೆಂದು. ಅದು ನಿಮಗೆ ಅರ್ಥವಾಗುತ್ತಿಲ್ಲ.

ಈ 'ನಾನು' ನಾನೇ ಎನ್ನುವ ಸಬೂಬುಗಳನ್ನು ಹೇಳುತ್ತಾ ಬಹಳಷ್ಟು ಜನರು ಭೀಮವರಂಗೆ ಬರುವುದನ್ನು ನಿಲ್ಲಿಸುತ್ತಿದ್ದಾರೆ. ಕೇಳಿದರೆ ಬರಬೇಕೆಂದೇ ಇದ್ದೇರಿ. ಆದರೆ ಏನೋ ತೊಂದರೆಗಳು, ಇನ್ನು ಕೆಲವರು ಹತ್ತು ವರ್ಷಗಳಿಂದ ಭೀಮವರಂಗೆ ಬರಬೇಕೆಂದುಕೊಳ್ಳುತ್ತಿದ್ದಾರಂತೆ ಆದರೆ ಬರಲು ಆಗುತ್ತಿಲ್ಲ. ಅದಕ್ಕೆ ಸಂಸಾರ ಬಂಧಗಳನ್ನು ಬಿಟ್ಟವನೇ ಉತ್ತಮ ಪುರುಷನು ಎಂದು ಬುದ್ಧನು ಹೇಳಿದ್ದಾನೆ.

ಪತ್ರೀಜಿಯವರು ನಾಮಗಳನ್ನು ತೆಗೆದುಹಾಕಿ ಎನ್ನುತ್ತಾರೆ. ಅಂದರೆ ನನ್ನದು, ನಮ್ಮದು ಎನ್ನುವುದನ್ನು ತೆಗೆದುಹಾಕಿ ಎನ್ನುತ್ತಾರೆ. ಮೊದಲಿಗೆ ನಾನು ಎನ್ನುವುದೇ ಇಲ್ಲ. ನಮ್ಮದು ಎನ್ನುವುದು ಇಲ್ಲ, ಎಲ್ಲವೂ ಸ್ವಪ್ನ, ಎಲ್ಲಾ ಕನಸು ಆದ್ದರಿಂದ ವಿಚಾರಣೆ ಮಾಡಿ ಎನ್ನುತ್ತಾರೆ. ಶಂಕರಾಚಾರ್ಯರು. ತಿಳಿಯಿರಿ. 'ನಾನು' ಎನ್ನುವುದನ್ನು ಬಿಟ್ಟರೆ "ಮೋಕ್ಷ", "ನಾನು"ನ್ನು ಹಿಡಿದರೆ ದುಃಖ, ಈ ಸತ್ಯವನ್ನು ತಿಳಿದುಕೊಳ್ಳಿರಿ.

ಮೋಕ್ಷವನ್ನು ಹೊಂದದೇ ಹೋದರೆ ಜೀವನವು ಎಷ್ಟು ದುರ್ಬರವಾಗಿರುತ್ತದೆ ಎನ್ನುವುದು ನಿಮಗೆ ಅರ್ಥವಾದರೆ ಆ ಮೋಕ್ಷವನ್ನು ಹೊಂದಬೇಕೆನ್ನುವ ಆಕಾಂಕ್ಷೆ ಹೆಚ್ಚುತ್ತದೆ. ಆ ಆಕಾಂಕ್ಷೆ ಇರುವವನೇ, ಆ ಪ್ರಯತ್ನವನ್ನು ಮಾಡುತ್ತಾನೆ. ಅಂತಹವರನ್ನು "ಮುಮುಕ್ಷು" ಎನ್ನುತ್ತಾರೆ ಹಿರಿಯರು. ಆ ಮುಮುಕ್ಷತ್ವವನ್ನು ಉಳ್ಳವರೇ ಈ ಪ್ರಯತ್ನವನ್ನು ಮಾಡುತ್ತಾರೆ. ಈಗ ನಾವುಗಳೆಲ್ಲಾ ಕೂಡಾ ಮುಮುಕ್ಷುಗಳೇ ಅಂದರೆ ಮೋಕ್ಷವನ್ನು ಹೊಂದಲು ಪ್ರಯತ್ನ ಮಾಡುವವರೇ.

ಇಲ್ಲದಿದ್ದರೆ, ಇಷ್ಟು ಶ್ರದ್ಧೆಯಿಂದ ಇಷ್ಟು ವರ್ಷಗಳಿಂದ ಜೂಮ್‌ನಲ್ಲಿ ಏಕೆ ಬರುತ್ತೇವೆ ಹೇಳಿ? ಈ ವಿಷಯಗಳನ್ನು ಏಕೆ ತಿಳಿದುಕೊಳ್ಳುತ್ತೇವೆ? ತಿಳಿದುಕೊಂಡವೆಲ್ಲಾ ಏಕೆ ಆಚರಿಸುತ್ತೇವೆ? ಈ ಮೋಕ್ಷವನ್ನು ಹೊಂದುವ ಪ್ರಯತ್ನ ಸ್ವಲ್ಪ ಕಷ್ಟವೇ! ಈ ಪ್ರಾಪಂಚಿಕ ಜೀವನದಲ್ಲಿ ಇದ್ದು, ಇಷ್ಟು ವಿಧವಾದ ಭಾರಗಳು, ಭಾದ್ಯತೆಗಳು, ಕೆಲಸಗಳು ಇರುವವರಿಗೆ ಎಷ್ಟು ಕಷ್ಟವೋ ಹೇಳಿರಿ?

ಆದರೂ ಸರಿಯೇ ಇಷ್ಟು ಶ್ರದ್ಧೆಯಿಂದ ನೀವೆಲ್ಲರೂ ಪಾಲ್ಗೊಳ್ಳುತ್ತಿದ್ದೀರಿ. ಕಾರಣ ಮೋಕ್ಷವನ್ನು ಹೊಂದಬೇಕು ಎನ್ನುವುದು. ಆ ಆಕಾಂಕ್ಷೆ ಏಕೆ ಇದೆ? ಮೋಕ್ಷದ ಶ್ರೇಷ್ಠತೆ ತಿಳಿದ್ದೀರಿ ಆದ್ದರಿಂದ. ಈ ಸಂಸಾರ ಜೀವನದಲ್ಲಿ ಇರುವ ಬಾಧೆಗಳಿಗೆ ಪೂರ್ಣವಿರಾಮ ಇಡಬೇಕೆಂದು ಹೇಳಿ ತಿಳಿದುಕೊಂಡಿದ್ದೀರಿ. ಎಷ್ಟನ್ನು ಬಿಡುತ್ತಿದ್ದೀರಿ? ಎಷ್ಟು ಕಷ್ಟಪಡುತ್ತಿದ್ದೀರಿ?

ಸುಖಕ್ಕಾಗಿ ಕೂಡಾ ನೋಡಲಾರದೆ ಮೋಕ್ಷಕ್ಕಾಗಿಯೇ ಕೃಷಿ ಮಾಡುತ್ತಿದ್ದೀರಿ. ಅದಕ್ಕೆ ಅದರ ಹಿರಿಮೆಯನ್ನು ತಿಳಿದವನು ಉತ್ತಮ ಪುರುಷನು ಎಂದು ಬುದ್ಧನು ಹೇಳಿದ್ದಾನೆ. ಮತ್ತೆ ಬುದ್ಧನು ಹೇಳಿದ ವಲಯದಲ್ಲಿಯೇ ನಾವೆಲ್ಲರೂ ಬರುತ್ತೇವೆ.

ಇನ್ನೂ ಅವರು ಏನು ಹೇಳಿದ್ದಾರೆ ಎಂದರೆ? ಸಂಸಾರ ಬಂಧನಗಳಿಂದ ಹೊರಬಂದವರು ಅಂದರೆ, ಪ್ರತಿಯೊಬ್ಬರು ಸಂಸಾರ ಜೀವನವನ್ನು ನಡೆಸುತ್ತಿರುವವರೆ. ನಾವೇನು ಎಲ್ಲವನ್ನೂ ತ್ಯಜಿಸಿ ಹಿಮಾಲಯದಲ್ಲೋ, ಅರಣ್ಯದಲ್ಲಿಯೋ, ಆಶ್ರಮಗಳಿಗೋ ಹೋಗಿರುವವರು ಅಲ್ಲ. ಈ ಸಂಸಾರದಲ್ಲಿ ಇರುವುದರಿಂದ ಆ ಸಂಸಾರದಲ್ಲಿ ಇರುವವರ ಮೇಲೆ ಸಹಜವಾಗಿಯೇ ಮಮಕಾರ ಇರುತ್ತದೆ.

ಯಾರಿಗಾದರೂ ಯಾವ ಹೆಂಡತಿಗಾದರೂ, ಯಾವ ಗಂಡನಿಗಾದರೂ, ಯಾವ ತಾಯಿಗಾದರೂ, ಯಾವ ಮಕ್ಕಳಿಗಾದರೂ ತಮ್ಮವರೆಂದರೆ ಇಷ್ಟವೇ. ಏನು ಮಾಡಿದರೂ ತಮ್ಮವರಿಗಾಗಿಯೇ ಮಾಡುತ್ತಿರುತ್ತಾರೆ. ಒಂದು ವಿಧದಲ್ಲಿ ಹೇಳುವುದಾದರೆ ಇವರ ಜೀವನವನ್ನು ಕುಟುಂಬಕ್ಕಾಗಿಯೇ ತ್ಯಾಗ ಮಾಡುತ್ತಾರೆ. ಕಷ್ಟಪಟ್ಟು ಸಂಪಾದಿಸಿದ್ದಲ್ಲಾ ಕೂಡಾ ಸ್ತ್ರೀ ಪುರುಷರು, ಮಕ್ಕಳಿಗೋಸ್ಕರ ಆ ಸಂಸಾರಕ್ಕಾಗಿ ಉಪಯೋಗಿಸುತ್ತಾ ಇರುತ್ತಾರೆ.

ಕಾರಣ ಮಮಕಾರ. ಅವರೆಂದರೆ ತುಂಬಾ ಇಷ್ಟ. ಈ ಇಷ್ಟದಿಂದಲೇ ಈ ಸಂಸಾರ ಬಂಧನದಲ್ಲಿ ಸಿಲುಕಿಕೊಳ್ಳುತ್ತಾರೆ. ಬುದ್ಧನು ಏನೆಂದಿದ್ದಾನೆ ಎಂದರೆ? ಹೀಗೆ ಸಿಲುಕಿಕೊಂಡವರು ಮೋಕ್ಷವನ್ನು ಹೊಂದಲಾರರು ಎಂದಿದ್ದಾನೆ. ಏತಕ್ಕೆಂದರೆ? ಇವರ ಜೀವನ, ಇವರ ಸಮಯ, ಇವರಿಗಿರುವ ಶಕ್ತಿಯುಕ್ತಿಗಳು, ಹಣ ಎಲ್ಲವನ್ನೂ ಸಂಸಾರಕ್ಕಾಗಿಯೇ ಉಪಯೋಗಿಸುತ್ತಾರೆ. ಹುಟ್ಟಿದಾಗಿಂದ ಸಾಯುವವರೆಗೆ ಅಂದರೆ ಜನ್ಮವೆಲ್ಲಾ ಅವರಿಗಾಗಿಯೇ ಕಷ್ಟಪಡುತ್ತಾರೆ, ತಮಗಾಗಿ ಯೋಚಿಸುವುದೇ ಇಲ್ಲಾ.

ಸಾಯುವಾಗಲೂ ಕೂಡಾ ತಳಮಳ ಹೋಗುವುದಿಲ್ಲ. ಇದರ ಮೇಲೆ ವಿದ್ಯಾ ಪ್ರಕಾಶನಂದಗಿರಿ ಸ್ವಾಮಿಯವರು ಒಂದು ಕಥೆಯನ್ನು ಹೇಳುತ್ತಿದ್ದರು.

ಒಬ್ಬ ವ್ಯಕ್ತಿಯು ತುಂಬಾ ಮುದುಕನಾಗಿದ್ದ, ಅವಸಾನದೆಡೆಗೆ ಬಂದಿದ್ದನು. ಯಾವುದೋ ಮೂಲೆಯಲ್ಲಿ ಪ್ರಾಣವಿದ್ದಂತೆ ಇತ್ತು. ಇನ್ನೇನು ಹೋಗಿಬಿಡುತ್ತಾನೆ ಎಂದು ಅರ್ಥವಾಯಿತು. ಆ ಕುಟುಂಬಸ್ಥರು ಏನು ಮಾಡಿದರೆಂದರೆ, ಅವನನ್ನು ಕರೆದುಕೊಂಡು ಬಂದು ಮನೆಯ ಹೊರಗೆ ಮಲಗಿಸಿದರು. ಅಲ್ಲಿ ಹಸುವಿನ ಕೊಟ್ಟಿಗೆಯೂ ಇತ್ತು.

ಇವನು ಸ್ವಲ್ಪ ಹೊತ್ತಿಗೆ ಉಸ್ ಉಸ್ ಅನ್ನುತ್ತಿದ್ದಾನೆ, ಇವರೆಲ್ಲರೂ ಬಹಳ ಸಂತೋಷಪಟ್ಟರು. ತಂದೆಗೆ ಪುನಃ ಪ್ರಾಣ ಬರುತ್ತದೆ ಎಂದು ಉಸ್ ಉಸ್ ಅನ್ನುತ್ತಿದ್ದಾನೆ ಎಂದುಕೊಂಡರು. ತೀರಾ ನೋಡಿದರೆ ಆ ದನದ ಕೊಟ್ಟಿಗೆಯಲ್ಲಿ ಇರುವುದು ಆ ಎತ್ತು, ಆ ಮನೆಯಲ್ಲಿರುವ ಹಳೆಯ ಕಸಬರಿಗೆ ಕಟ್ಟನ್ನು ತಿನ್ನುತ್ತಿದೆ. ಆ ಹಾಳಾದ ಕಸಬರಿಗೆ ಕಟ್ಟನ್ನು ತಿಂದು ಬಿಡುತ್ತದೆ ಎಂದು ಅದನ್ನು ಹೊಡೆಯಬೇಕೆಂದು ಉಸ್ ಉಸ್ ಎನ್ನುತ್ತಿದ್ದಾನೆ. ತಿನ್ನಬೇಡ, ತಿನ್ನಬೇಡ ಎಂದು ಮನೆಯವರೆಲ್ಲರೂ ನಕ್ಕುಬಿಟ್ಟರು. ಇವನು ಹೋಗಲು ಸಿದ್ಧನಾಗಿದ್ದಾನೆ, ಕಸಬರಿಗೆ ಕಟ್ಟಿನ ಮೇಲೆ ಇರುವ ಭ್ರಾಂತಿಯನ್ನು ಕೂಡಾ ಇವನಿಗೆ ಹೋಗಲಿಲ್ಲವೆಂದು ಹೇಳಿಕೊಂಡರು.

ಈಗ ಮಾನವನ ಜೀವನವೂ ಹೀಗೆ ಇದೆ. ಎಲ್ಲದರ ಮೇಲೂ ಅಷ್ಟು ಮಮಕಾರವನ್ನು ಬೆಳೆಸಿಕೊಂಡಿದ್ದಾರೆ. ಮಕ್ಕಳ ಮೇಲೆ, ಗಂಡನ ಮೇಲೆ, ಹೆಂಡತಿ ಮೇಲೆ, ಸಂಸಾರದ ಮೇಲೆ, ಎಲ್ಲದರ ಮೇಲೂ ಅಷ್ಟು ಮಮಕಾರ. ಇವರಿಗೆ ಮೋಕ್ಷ

ಹೇಗೆ ಬರುತ್ತದೆ. ಅದಕ್ಕೆ ಯಾರು ಉತ್ತಮ ಪುರುಷನು ಎಂದರೆ ಬುದ್ಧನು ಹೇಳಿದ್ದು ಸಂಸಾರ ಬಂಧನದಿಂದ ಹೊರಗೆ ಬಂದವನು ಎಂದರು.

ಸಂಸಾರ ಬಂಧನದಿಂದ ಹೊರಬರುವುದು ಎಂದರೆ ಅವರೊಂದಿಗೆ ಇರಬಾರದೆಂದು ಅಲ್ಲ ಗುರ್ತಿಟ್ಟುಕೊಳ್ಳಿ. ಅವರೊಂದಿಗೆ ಇರಬೇಕು ಮಮಕಾರ ಇರಬಾರದು. ಅಂದರೆ ಅವರನ್ನು ನೋಡಬಾರದೆಂದು ಅಲ್ಲ. ಅವರಿಗೋಸ್ಕರ ತಪ್ಪುಗಳನ್ನು, ಪಾಪಗಳನ್ನು ಮಾಡಬಾರದು. ಅಂದರೆ ಅಧರ್ಮವಾಗಿ ಪ್ರವರ್ತಿಸಬಾರದು. ತಮ್ಮ ಜೀವನವನ್ನು ನಷ್ಟಪಡಿಸಿಕೊಳ್ಳಬಾರದು. ತನ್ನ ಮೋಕ್ಷದ ಪ್ರಯತ್ನದಲ್ಲಿ ಅಡ್ಡಿಯುಂಟು ಮಾಡಿಕೊಳ್ಳಬಾರದು.

ಭೂಮಿಯ ಮೇಲೆ ಮೋಕ್ಷವನ್ನು ಹೊಂದಬೇಕಾಗಲಿ, ನಾಶಹೊಂದಬಾರದು. ಯಾರು ಪತನವನ್ನು ಹೊಂದುತ್ತಾರೆ? ಈ ಮಮಕಾರವನ್ನು ಇರುವವನು. ಸಂಸಾರ ಬಂಧನದಲ್ಲಿ ಸಿಲುಕಿಕೊಂಡವರು. ಅವರು ಇಲ್ಲದಿದ್ದರೆ ನಾನು ಇಲ್ಲ. ಅವರೇ ನನ್ನ ಸರ್ವಸ್ವ. ನಾನು ನಷ್ಟಹೋದರೂ ಪರವಾಗಿಲ್ಲ ಅವರು ಚೆನ್ನಾಗಿದ್ದರೆ ಸಾಕು. ಈ ರೀತಿಯ ಭಾವನೆಗಳನ್ನು ಹೊಂದಿರುವವರೇ ಸಂಸಾರ ಬಂಧನದಲ್ಲಿ ಇರುವವರು.

ಇಂತಹ ಸಂಸಾರ ಬಂಧನದಿಂದ ಯಾರಾದರೂ ಹೊರಬರುತ್ತಾರೋ ಅವರನ್ನೇ ಉತ್ತಮ ಪುರುಷ ಎನ್ನುತ್ತಾರೆ. ಆತನೇ ಮೋಕ್ಷವನ್ನು ಹೊಂದುವನು. ಆತನೇ ದುಃಖದಿಂದ ಶಾಶ್ವತವಾಗಿ ಹೊರಬರುವನು. ಈ ಸಂಸಾರ ಬಂಧನದಿಂದ ಹೊರಬರಬೇಕೆಂದರೆ ವಿಚಾರಣೆ ಮಾಡಿರಿ ಎಂದಿದ್ದಾರೆ ಶಂಕರಾಚಾರ್ಯರು.

ಅಂದರೆ ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ತಂದೆ ಯಾರು? ಇವೆಲ್ಲವನ್ನೂ ವಿಚಾರಣೆ ಮಾಡು ಎಂದಿದ್ದಾರೆ, ತಿಳಿದುಕೊಳ್ಳಿ ಎಂದಿದ್ದಾರೆ. ವಿಚಾರಣೆ ಮಾಡುವುದೆಂದರೆ ತಿಳಿದುಕೊಳ್ಳುವುದು. ನಿಜವಾಗಿಯೂ ಆಕೆ ನನ್ನ ತಾಯಿಯೇ? ಆತನು ನನ್ನ ತಂದೆಯೇ? ಯಾವಾಗ ತಿಳಿಯುತ್ತದೆ? ಮೊದಲು ನೀನು ಯಾರೋ ತಿಳಿದುಕೊಂಡರೆ? ನೀನು ಯಾರು? ನೀನು ಆತ್ಮ.

ಆಲೋಚಿಸಿರಿ? ನಿನ್ನ ತಾಯಿ ಆತ್ಮವನ್ನು ಹೆತ್ತಳೆ? ತಾಯಿ ಮಗುವಿನ ಶರೀರವನ್ನು ತಯಾರು ಮಾಡಿದ್ದು. ತಾಯಿ ಗರ್ಭದಲ್ಲಿ ತಯಾರು ಆಗುತ್ತಿರುವ ಶರೀರದಲ್ಲಿ ಆತ್ಮವಾದ ನೀನು ಮೇಲಿನ ಲೋಕದಿಂದ ಬಂದು ಪ್ರವೇಶಿಸಿದಾಗಲೇ ಆ ಶರೀರಕ್ಕೆ ಜೀವ ಬಂದಿದೆ, ಅಂದರೆ ಜೀವ ಬಂದಿದೆ, ಅಂದರೆ ಚಲನವಲನಗಳು ಪ್ರಾರಂಭವಾಗಿವೆ. ಆ ತಾಯಿಯ ಶರೀರದಲ್ಲಿ ತಯಾರಿಯಾದ ಶಿಶುವಿನಲ್ಲಿ ಆತ್ಮನಾದ

ನೀನು ಪ್ರವೇಶಿಸದೇ ಹೋದರೆ, ತಾಯಿ ಆ ಶಿಶುವಿಗೆ ಜನ್ಮ ಕೊಟ್ಟರೂ ಅದು ಮೃತಪಟ್ಟ ಶಿಶುವೇ ಆಗುತ್ತದೆ. ಜೀವವಿರುವ ಶಿಶುವು ಅಲ್ಲ.

ತಕ್ಷಣವೇ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಹೂಳುತ್ತಾರೆ. ನನ್ನ ಮಗನೆಂದು ಉಳಿಸಿಕೊಳ್ಳುವುದಿಲ್ಲವಲ್ಲ ತಾಯಿ. ಏಕೆ ಉಳಿಸಿಕೊಳ್ಳುವುದಿಲ್ಲ? ಉಳಿಸಿಕೊಂಡರೆ ಅದು ಕೊಳೆತು ಹೋಗುತ್ತದೆ. ಕೊಳೆತು ಹೋಗುವ ಶರೀರ ತಾಯಿಗೆ ಮಗ ಹೇಗೆ ಆಗುತ್ತಾನೆ? ತಾಯಿಗೆ ಮಗಳು ಹೇಗೆ ಆಗುತ್ತಾಳೆ? ಆಲೋಚಿಸಿರಿ? ಮತ್ತೆ ಮಗನಾದರೆ ಏಕೆ ತೆಗೆದುಕೊಂಡು ಹೋಗಿ ಹೂಳುತ್ತೀರಿ? ಇಟ್ಟುಕೊಳ್ಳಬಹುದಲ್ಲಾ? ಇಟ್ಟುಕೊಳ್ಳುವುದಿಲ್ಲ. ಯಾವಾಗ ಆತ್ಮನಾದ ನೀನು ಆ ತಾಯಿ ಗರ್ಭದಲ್ಲಿ ಇರುವ ಆ ಶಿಶುವಿನಲ್ಲಿ ಪ್ರವೇಶಿಸುತ್ತಿಯೋ! ಆಗಲೇ ಆ ಶಿಶುವಿಗೆ ಚಲನೆ ಬರುತ್ತದೆ.

ಆ ಚಲನೆ ಬಂದಾಗ ತಾಯಿ ಹೇಳುತ್ತಾ ಇರುತ್ತಾಳೆ ಒಳಗಡೆ ಒದೆಯುತ್ತಿದ್ದಾನೆ. ಅಲ್ಲಿಯವರೆಗೆ ಹೇಳುವುದಿಲ್ಲ. ಆದರೆ ಒದೆಯುತ್ತಿದ್ದಾನೆ ಅಂದರೆ ಆತ್ಮ ಪ್ರವೇಶಿಸಿದೆ ಎಂದಲ್ಲವೇ? ಅಂದರೆ ನೀನು ಪ್ರವೇಶಿಸಿದ್ದೀಯೆ. ಈಗ ಹೇಳಿ ಆ ತಾಯಿಗೆ ನೀನು ಹುಟ್ಟಿದ್ದೀಯಾ? ಅಂದರೆ ಇಲ್ಲವೆಂದೇ ಹೇಳುತ್ತೀಯಾ. ಆಕೆ ನಿನ್ನ ಶರೀರಕ್ಕೆ ತಾಯಿ. ಅಷ್ಟೇ ಆಗಲಿ ನಿನಗೆ ಅಲ್ಲ. ನೀನು ಶರೀರ ಆದರೆ ಆಕೆ ನಿನಗೆ ತಾಯಿ.

ನೀನು, ಶರೀರವೇ? ಶರೀರದಲ್ಲಿ ಪ್ರವೇಶಿಸಿದ ಆತ್ಮ. ಆದ್ದರಿಂದ ಆಕೆ ನಿನ್ನ ತಾಯಿ ಅಲ್ಲ. ಈ ವಿಚಾರಣೆ ಮಾಡಿರಿ ಎಂದು ಶಂಕರಾಚಾರ್ಯರು ಹೇಳುವುದು.

ನೀನು ಪೂರ್ಣಾತ್ಮದಿಂದ ಬಂದಿರುವಂತಹ ಅಂಶ. ಆ ಪೂರ್ಣಾತ್ಮನೇ ನಿನ್ನ ತಂದೆ, ತಾಯಿ, ಆತನೇ ಇಲ್ಲದಿದ್ದರೆ ನೀನು ಎಲ್ಲಿದ್ದೀಯ? ನಿನಗೇ ತಿಳಿಯದು, ಆತ್ಮ ಕಾಣಿಸುವುದಿಲ್ಲ. ಆ ಗರ್ಭದಲ್ಲಿ ಇರುವಂತಹ ಶಿಶುವಿನಲ್ಲಿ ಆತ್ಮ ಯಾವಾಗ ಪ್ರವೇಶಿಸುತ್ತದೆಯೋ ನಿನಗೆ ತಿಳಿಯದು. ಪ್ರವೇಶಿಸುತ್ತಿರುವಾಗ ನಿನಗೆ ಕಾಣಿಸಿದರೆ ಇವೆಲ್ಲವೂ ಅರ್ಥವಾಗುತ್ತವೆ. ಕಾಣಿಸದಿದ್ದುದರಿಂದ ಇವು ನಿನಗೆ ಅರ್ಥವಾಗುತ್ತಿಲ್ಲ.

ನನ್ನ ಮಗ ಬೆಳೆಯುತ್ತಿದ್ದಾನೆ ಎಂದುಕೊಳ್ಳುತ್ತಾ ಇರುತ್ತೀರಿ ಇನ್ನೂ ವಿಚಿತ್ರ ಏನೆಂದರೆ, ತಾಯಿ ಗರ್ಭದಲ್ಲಿ ಶಿಶುವು ಇರುವಾಗ ತುಂಬಾ ಚಿಕ್ಕ ಗಾತ್ರ ಇರುತ್ತದೆ. ಇನ್ನೂ ಕಡಿಮೆ ತಿಂಗಳುಗಳು ಇರುವಾಗ ಇನ್ನೂ ಚಿಕ್ಕ ಗಾತ್ರ. ಹೊರಗೆ ಬಂದ ನಂತರ, ಅಂದರೆ ಜನ್ಮದ ನಂತರ ದಿನ ದಿನಕ್ಕೂ ಬೆಳೆಯುತ್ತಾ ಇರುತ್ತದೆ. ಒಂದು ಸಣ್ಣ ಶಿಶುವಿನಲ್ಲಿಯೂ ಆತ್ಮ ಹೊಂದಿಕೊಂಡಿದೆ. ಈ ಶರೀರವು ಎಷ್ಟು ದೊಡ್ಡದಾದರೂ ಆತ್ಮ ಶರೀರವನ್ನೆಲ್ಲಾ ಆವರಿಸಿರುತ್ತದೆ. ಆತ್ಮದ ಶ್ರೇಷ್ಠತೆಯನ್ನು ತಿಳಿದುಕೊಳ್ಳಿರಿ.

ತಾಯಿ ಗರ್ಭದಲ್ಲಿರುವ ಶರೀರದಲ್ಲಿ ಆತ್ಮ ಯಾವುದೋ ಒಂದು ಲೋಕದಿಂದ ಬಂದು ಪ್ರವೇಶಿಸಿದೆ! ಆ ಆತ್ಮ ನಿನ್ನ ಮಗ ಹೇಗೆ ಆಗುತ್ತಾನೆ? ನಿನ್ನ ಮಗಳು ಹೇಗೆ ಆಗುತ್ತಾಳೆ? ಆದರೆ ಹಾಗೆಂದು ಬಿಟ್ಟುಬಿಡಿ ಎನ್ನುತ್ತೀರಾ? ಅದು ಅಲ್ಲ, ಸೃಷ್ಟಿಯಲ್ಲಿ ಕೆಲವು ಧರ್ಮಗಳಿವೆ. ಪತ್ರೀಜಿಯವರು ಹೇಳಿದ್ದಾರೆ. ನಮಗೆ ಸಂಘ ಧರ್ಮ, ಸಂಸಾರ ಧರ್ಮಗಳು ಹೀಗೆ.

ನಿನ್ನ ತಂದೆ ತಾಯಿಗಳು ಆತ್ಮನಾದ ನೀನು ಬೆಳೆಯಲು, ಜ್ಞಾನವನ್ನು ಹೊಂದಲು, ಪೂರ್ಣಾತ್ಮನಾಗಿ ಬೆಳೆಯಲು, ಭೂಮಿಯ ಮೇಲೆ ಬರಲು, ನಿನಗೆ ಹೇಗೆ ಅವಕಾಶವನ್ನು ಕಲ್ಪಿಸಿದ್ದಾರೋ! ಹಾಗೇ ನೀನು ಕೂಡಾ ಇನ್ನೂ ಕೆಲವು ಆತ್ಮಗಳಿಗೆ ಅವಕಾಶವನ್ನು ಕಲ್ಪಿಸಬೇಕು. ಅದೇ ಸಂಸಾರ ಧರ್ಮ. ನಿನ್ನ ತಾಯಿ ತಂದೆಯರು ಹೇಗೆ ಬೆಳೆಸಿರುವರೋ! ಹಾಗೆಯೇ ರೆಕ್ಕೆಗಳು ಬರುವವರೆಗೆ ಬೆಳೆಸಿ ಪೋಷಿಸಬೇಕು.

ಅವರು ಯಾವಾಗ ದೊಡ್ಡವರು ಆಗುತ್ತಾರೋ, ಪ್ರಬುದ್ಧರಾಗುತ್ತಾರೋ ಅವರ ಪ್ರಣಾಳಿಕೆಯ ಪ್ರಕಾರ ಅವರ ಜೀವನ ಅನುಭವಗಳನ್ನು ಹೊಂದುತ್ತಾರೆ. ಪಾಠಗಳನ್ನು ಕಲಿಯುತ್ತಾರೆ. ಬೆಳೆಯುತ್ತಾರೆ. ಅಷ್ಟೇ ಆಗಲಿ ನನ್ನ ಮಗ, ನನ್ನ ಮಗ ಎನ್ನುತ್ತಾ, ನನ್ನ ಮಗಳು, ನನ್ನ ಮಗಳು ಎನ್ನುತ್ತಾ, ನನ್ನ ತಾಯಿ, ನನ್ನ ತಂದೆ ಎನ್ನುತ್ತಾ, ನಿನ್ನನ್ನು ನೀನು ಮರೆತುಹೋಗಿ, ನಿನ್ನ ಲಕ್ಷ್ಯ ಏನೋ ಮರೆತು ಹೋಗಿ, ನಿನ್ನ ಪ್ರಣಾಳಿಕೆ ಏನೋ ನೀನು ಮರೆತುಹೋಗಿ, ಜೀವಿಸುವುದು ಎನ್ನುವುದು ಎಷ್ಟೋ ಅಜ್ಞಾನದಿಂದ ಕೂಡಿದ ವಿಷಯ.

ಅಂತಹವರು ಮೋಕ್ಷವನ್ನು ಹೊಂದಲಾರರು. ಲಕ್ಷ್ಯವನ್ನು ಸಾಧಿಸಲಾರರು, ಅಂತಹವನು ಉತ್ತಮ ಪುರುಷನು ಹೇಗೆ ಆಗುತ್ತಾನೆ? ಅದಕ್ಕೆ ಬುದ್ಧನು ಸಂಸಾರ ಬಂಧನಗಳಿಂದ ಹೊರ ಬರಬೇಕು ಎಂದಿದ್ದಾರೆ. ಹೊರಬರುವುದೆಂದರೆ ಶಂಕರಾಚಾರ್ಯರು ಹೇಳಿದಂತೆ ವಿಚಾರಣೆ ಮಾಡಿ ಇವೆಲ್ಲಾ ತಿಳಿದುಕೊಳ್ಳಬೇಕು. ಆಗ ನೀನು ಹೊರಬರುತ್ತೀಯಾ. ಹೊರ ಬರುತ್ತೀಯಾ ಎಂದರೆ ಮಮಕಾರವನ್ನು ಬಿಡುತ್ತೀಯಾ.

ಏಕೆ ಶಂಕರಾಚಾರ್ಯರು ಹೇಳಿದ್ದಾರೆ? ಮೂರ್ಖರೇ ಇವೆಲ್ಲವೂ ಅಸ್ತಿತ್ವದಲ್ಲಿವೆ ಎಂದುಕೊಳ್ಳುತ್ತೀಯಾ. ಇರುವಂತವು ಎಂದುಕೊಳ್ಳುತ್ತೀಯಾ. ಇವೆಲ್ಲವೂ ಶಾಶ್ವತ ಎಂದುಕೊಳ್ಳುತ್ತೀಯಾ. ಇವೆಲ್ಲವೂ ಶ್ರೇಷ್ಠವೆಂದುಕೊಳ್ಳುತ್ತೀಯ. ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತೀಯ. ಆದರೆ ಇವೆಲ್ಲವೂ ಸಾರಹೀನವಾದವು. ಸಾರವಿಲ್ಲದವು, ಸ್ವಪ್ನತುಲ್ಯವಾದವು ಅಂದರೆ ಕನಸಿನಂತಹವುಗಳು.

ಆದ್ದರಿಂದ ಈ ವಿಶ್ವವನ್ನು, ಈ ವಿಶ್ವದಲ್ಲಿರುವವರನ್ನು ವಿಚಾರಣೆಯ ಮೂಲಕ ತೊರೆಯಬೇಕು. ಮತ್ತೆ ಈಗ ನಾವು ತೀವ್ರ ಸಾಧನೆ ಮಾಡುತ್ತಿದ್ದೇವೆ. ಬುದ್ಧಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆ. ವಿವೇಕವನ್ನು ವೃದ್ಧಿಸಿಕೊಳ್ಳುತ್ತಿದ್ದೇವೆ, ಪಡೆಯುತ್ತಿದ್ದೇವೆ. ಇಂತಹ ವಿಚಾರಣೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಬುದ್ಧನು, ಶಂಕರಾಚಾರ್ಯರು, ಪತ್ರೀಜಿಯವರಂತಹವರು ಹೇಳಿದ ಬೋಧನೆಗಳನ್ನು ಪಾಲಿಸುತ್ತಿದ್ದೇವೆ. ದುಃಖದಿಂದ ಏಕೆ ಹೊರಬರಲಾರೆವು, ಖಂಡಿತವಾಗಿ ಹೊರಬರುತ್ತೇವೆ.

ಈ ಸಂಸಾರ ಬಂಧನದಿಂದ ಯಾರು ಹೊರಬರುತ್ತಾರೆ ಎನ್ನುವುದನ್ನು ಶಂಕರಾಚಾರ್ಯರು ಭಜಗೋವಿಂದಂದಲ್ಲಿ ಏನು ಹೇಳಿದ್ದಾರೆ ಎಂದರೆ?

ಕಸ್ತ್ವಂ ಕೋಹಂ ಕುತ ಆಯತಃ
ಕಾಮೇ ಜನನೀ ಕೋ ಮೇ ತಾತಃ
ಇತಿ ಪರಿಭಾವಾಯೆ ಸರ್ವಮಸಾರಮ್
ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಂ ॥

ಅವರು ಹೇಳಿದ್ದು ಇದರಲ್ಲಿ ಏನೆಂದರೆ, ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ನನ್ನ ತಂದೆ ಯಾರು? ಇವುಗಳನ್ನು ತಿಳಿದುಕೊಳ್ಳಿ ಎನ್ನುತ್ತಾರೆ ಅವರು. ಸಾರಹೀನವಾದ ಸ್ವಪ್ನ ತುಲ್ಯವಾದ ಈ ವಿಶ್ವವನ್ನು ಈ ವಿಧವಾಗಿ ವಿಚಾರಣೆಯ ಮೂಲಕ ಬಿಟ್ಟುಬಿಡಬೇಕು ಎನ್ನುತ್ತಾರೆ.

ಇನ್ನೂ, ಸ್ವಪ್ನ ತುಲ್ಯವಾದದ್ದು ಎಂದಿದ್ದಾರೆ. ಅಂದರೆ ಆ ಸ್ವಪ್ನಾವಸ್ಥೆಯಲ್ಲಿ ಬರುವ ಕನಸುಗಳ ತರಹ ಎಂದು ಅವರು ಹೇಳುತ್ತಾರೆ. ನೋಡಿ, ಕನಸು ಕಾಣುತ್ತಿರುವಾಗ ನಿಜವೆನಿಸುತ್ತದೆ. ನಿಜವಾಗಿ ನಡೆಯುತ್ತಿರುವಂತೆಯೇ ಇರುತ್ತದೆ.

ಆ ಕನಸಿನಲ್ಲಿ ಯಾರಾದರೂ ನಮಗೆ ಹೊಡೆದರೆ ದುಃಖಪಡುತ್ತೇವೆ. ಆ ಕನಸಿನಲ್ಲಿ ಏನಾದರೂ ಅಪಘಾತವಾಗಿ ಪೆಟ್ಟಾದರೆ ಆ ನೋವನ್ನೂ ಅನುಭವಿಸುತ್ತಾ ಇರುತ್ತೇವೆ. ಇಲ್ಲದಿದ್ದರೆ ನಮ್ಮ ಮೇಲೆ ಅನ್ಯಾಯವಾಗಿ ಯಾರಾದರು ಕೇಸು ಹಾಕಿ, ಬಂಧಿಸಿ, ನಿರ್ವಹಿಸಿ, ಮೂರನೇ ವಿಧದ ಶಿಕ್ಷೆಯನ್ನು ಅನುಸರಿಸಿ ಹೊಡೆಸುತ್ತಿದ್ದರೆ. ಅದನ್ನೂ ಕೂಡಾ ಅನುಭವಿಸುತ್ತಾ ಇರುತ್ತೇವೆ. ನನ್ನ ಜೀವನ ಹೀಗಾಯಿತಲ್ಲಾ ಎಂದು ದುಃಖಿಸುತ್ತಿರುತ್ತೇವೆ. ಅಲ್ಲವೇ?

ಆದರೆ ನಿದ್ರೆಯಿಂದ ಎಚ್ಚೆತ್ತ ಮೇಲೆ ಅರ್ಥವಾಗುತ್ತದೆ. ಅರೇ ಅದು ನಿಜವಲ್ಲವೇ? ಕನಸಾ? ಎನ್ನುವುದು ಅರ್ಥವಾಗುತ್ತದೆ. ಎಷ್ಟೋ ಸಮಾಧಾನ ಹೊಂದುತ್ತೇವೆ. ಅದೇ

ಒಳ್ಳೆಯ ಕನಸು ಬಂದಿತ್ತು ಎಂದುಕೊಳ್ಳಿ. ನೀವು ಒಳ್ಳೆಯ ವ್ಯಾಪಾರ ಮಾಡುತ್ತಿದ್ದೀರಿ. ಕೋಟಿಗಟ್ಟಲೆ ಲಾಭವು ಬಂದಿದೆ, ಎಷ್ಟೋ ಜನರಿಗೆ ಉದ್ಯೋಗ ನೀಡಿದ್ದೀರಿ. ನಿಮ್ಮಿಂದ ಎಷ್ಟೋ ಜನರು ಜೀವಿಸುತ್ತಿದ್ದಾರೆ. ನೀವು ಕೂಡಾ ಅವರೆಲ್ಲರನ್ನೂ ನೋಡಿಕೊಳ್ಳುತ್ತಾ, ಅಷ್ಟು ಜನರನ್ನು ನಾನು ಪೋಷಿಸುತ್ತಿದ್ದೇನೆ ಎಂದು ತೃಪ್ತಿಪಡುತ್ತಿರುತ್ತೀರಿ. ಈ ಕನಸು ಸಂತೋಷವಾಗಿರುತ್ತದೆ.

ಆ ಭೋಗಗಳನ್ನು ಅನುಭವಿಸುತ್ತಿರುವಾಗ ಸಂತೋಷವಾಗಿರುತ್ತೇವೆ. ಆಗ ನಿದ್ರೆಯಲ್ಲಿಂದ ಎಚ್ಚರವಾದಾಗ, ಅರೇ ಇದೆಂತಹ ಕನಸು? ನಿಜವಲ್ಲವೇ? ಎಂದೆನಿಸುತ್ತದೆ. ಆಗ ನಿಮಗೆ ಅನ್ನಿಸುತ್ತದೆ, ಇನ್ನೂ ಸ್ವಲ್ಪ ಕಾಲ ಹಾಗೇ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಈ ಕನಸು ಚದುರಿ ಹೋಯಿತೇ? ಎಂದು ಹೇಳಿ ಸ್ವಲ್ಪ ದುಃಖ ಪಡುತ್ತೀರಿ ಕೂಡಾ. ಆದ್ದರಿಂದ ಈ ಕನಸುಗಳ ಕುರಿತು ಸ್ವಲ್ಪ ತಿಳಿದುಕೊಳ್ಳೋಣ.

ಪ್ರಕೃತಿ, ನಮಗೆ ಮಾನವ ಜೀವನದಲ್ಲಿರುವಂತಹ "ಒಂದು ಹಸಿ ಸತ್ಯವು, ಒಂದು ಪರಮ ಸತ್ಯವು" ಬೋಧಿಸುವುದಕ್ಕಾಗಿಯೇ ಈ ಕನಸುಗಳು ಎನ್ನುವ ಏರ್ಪಾಟು ಪ್ರತಿಯೊಬ್ಬರಿಗೂ ಮಾಡಲಾಗಿದೆ. "ಹಸಿ ಸತ್ಯವು, ಪರಮ ಸತ್ಯವು" ಈ ಎರಡು ನಮಗೆ ತಿಳಿಯಪಡಿಸುವುದಕ್ಕಾಗಿ, ಯಾವುದು ಹಸಿ ಸತ್ಯ? ನಡೆಯುತ್ತಿರುವುದೆಲ್ಲಾ ಕನಸಿದ್ದಂತೆ ಎಂದು ತಿಳಿಯುವುದಕ್ಕಾಗಿಯೇ ಈ ಕನಸುಗಳು. ಇದನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು.

ಇದು ಪ್ರಕೃತಿಯೇ ಮಾಡಿದ ಏರ್ಪಾಡು. ಪ್ರಕೃತಿ ನಿಮಗೆ ಬೋಧಿಸುತ್ತದೆ. ಎಷ್ಟೋ ಜನ್ಮಗಳಲ್ಲಿ ಕನಸುಗಳನ್ನು ಕಾಣುತ್ತಿರುವ ಮಾನವರು ಇದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಅರ್ಥಮಾಡಿಕೊಂಡವನು ಜ್ಞಾನಿ. ನಿಮಗೆ ಇನ್ನೂ ಅರ್ಥವಾಗದೇ ಇದ್ದರೆ ನೀವು ಅಜ್ಞಾನದಲ್ಲಿ ಇದ್ದಂತೆ ಎಂದು ನೆನಪಿಟ್ಟುಕೊಳ್ಳಿ. ಜರುಗುತ್ತಿರುವುದೆಲ್ಲಾ ಕನಸೇ.

ಏಕೆಂದರೆ? ಮಾನವನು 70, 80 ವರ್ಷಗಳು ಕಷ್ಟಪಟ್ಟು ಎಷ್ಟೋ ಸಂಪಾದಿಸುತ್ತಾನೆ. ಎಷ್ಟೊಂದು ಒದಗಿಸಿಕೊಳ್ಳುತ್ತಾನೆ. ಅಷ್ಟೇ ಅಲ್ಲ ಹೆಂಡತಿ, ಗಂಡ, ಮಕ್ಕಳು, ಬಂಧುಗಳು, ಸ್ನೇಹಿತರು ಹೀಗೆ ಎಷ್ಟೋ ಜನ ಆಪ್ತರುಗಳು ಹೆಚ್ಚಾಗುತ್ತಾ ಇರುತ್ತಾರೆ. ಅವರೊಂದಿಗೆ ಎಷ್ಟೋ ಅನುಬಂಧ ಇರುತ್ತದೆ. ಸಂತೋಷವಾಗಿ ಕಳೆಯುವುದು, ಮೋಜು ಮಾಡುವುದು, ಕಾಲಕ್ಷೇಪ ಮಾಡುವುದು, ಔತಣಗಳು, ಕಾರ್ಯಕ್ರಮಗಳು, ಆನಂದಿಸುವುದು, ಮನೋರಂಜನೆ ಹೀಗೆ ಎಷ್ಟೋ ಅನುಭವಗಳನ್ನು ಪಡೆಯುವುದು, ವಿಧವಿಧವಾದ ಆಹಾರವನ್ನು ಸೇವಿಸುವುದು ಮಾಡುತ್ತಾ ಇರುತ್ತಾರೆ.

ಇನ್ನೂ ವಿಧವಿಧವಾದ ಪ್ರದೇಶಗಳನ್ನು ಸಂದರ್ಶಿಸುವುದು, ಇಷ್ಟಪಡುವ ವಿದ್ಯೆಗಳನ್ನು ಕಲಿಯುವುದು, ಇಂತಹವುಗಳನ್ನು ಎಷ್ಟೋ ಮಾಡುತ್ತಾ ಇರುತ್ತಾರೆ. ವಿಚಿತ್ರವೇನೆಂದರೆ, ಇಷ್ಟು ವಿಧವಾದ ಅನುಭವಗಳು, ಅನುಭೂತಿಗಳನ್ನು ಹೊಂದಿ, ಇಷ್ಟು ಪರಿಚಯಗಳನ್ನು ಮಾಡಿಕೊಂಡು, ಇಷ್ಟು ಸಂಪಾದಿಸಿ, ಇಷ್ಟೆಲ್ಲಾ ಮಾಡುತ್ತಾ, ಹಗಲು–ರಾತ್ರಿ ಕಷ್ಟಪಟ್ಟು ಕೆಲಸವನ್ನು ಮಾಡಿದರೆ, ಸತ್ತ ನಂತರ ಏನು ಇರುವುದಿಲ್ಲ. ಏನು ಬರುವುದಿಲ್ಲ, ಇದು ತುಂಬಾ ವಿಚಿತ್ರ, ಆಗ ಅನ್ನಿಸುತ್ತದೆ, ಏನಿದು ಎಲ್ಲವೂ ಕನಸಿನಂತೆ ಇದೆಯಲ್ಲಾ ಎಂದುಕೊಳ್ಳುತ್ತೀರಿ.

ಏಕೆಂದರೆ, ಸತ್ತ ನಂತರ, ಆ ಮೇಲಿಂದ ಇಬ್ಬರು ಸಹಾಯಕರು ಬರುತ್ತಾರೆ. ಬಾ ಮಗು ಭೂಮಿ ಮೇಲೆ ನಿನ್ನ ಕೆಲಸ ಮುಗಿದಿದೆ. ಹೋಗೋಣ ಬಾ ಎನ್ನುತ್ತಾರೆ. ಇವನಿಗೆ ಬುದ್ಧಿಭ್ರಮಣೆ ಆಗುತ್ತದೆ. ಇಷ್ಟು ಕಷ್ಟಪಟ್ಟು, ಇಷ್ಟೊಂದು ಸಂಪಾದಿಸಿಕೊಂಡು, ಒದಗಿಸಿಕೊಂಡು, ಇಷ್ಟು ಮಂದಿಯನ್ನು, ಪರಿಚಯಸ್ತರನ್ನು ಏರ್ಪಡಿಸಿಕೊಂಡು, ಆನಂದ ಪಡುತ್ತಿದ್ದರೆ ಇವರು ಹೋಗೋಣ ಎನ್ನುತ್ತಾರೇನು? ಆಗ ಅವನಿಗೆ ಬುದ್ಧಿ ಇರುವುದಿಲ್ಲ.

ಹೋಗಬೇಕಾ? ಇದ್ದುಬಿಡಬೇಕಾ? ಎಂತಹ ಸಂದಿಗ್ಧತೆ, ಆದರೆ ಆ ಸಮಯದಲ್ಲಿ ಅಂತಹ ಸಂದಿಗ್ಧತೆ ಇರುತ್ತದೆ. ಆಗ ಅವರು ಬಾ ಅಂದ ತಕ್ಷಣ ಏನಿದು ಇದೆಲ್ಲವೂ ಕನಸಿನಂತೆ ಇದೆಯಲ್ಲಾ? ನನ್ನದು ಎನ್ನುವುದು ಏನು ಇಲ್ಲಾ. ನನ್ನವರು ಎನ್ನುವರು ಯಾರೂ ಇಲ್ಲಾ. ನನ್ನ ಮಕ್ಕಳು ಇಲ್ಲ, ನನ್ನ ಹೆಂಡತಿ ಇಲ್ಲ, ಇವರು ಬಂದುಬಿಡು ಎನ್ನುತ್ತಿದ್ದಾರೆ. ನೋಡಿದರೆ ನಡೆದದ್ದೆಲ್ಲಾ ಕನಸು ಅನ್ನಿಸುತ್ತದೆ. ನಡೆಯುತ್ತಿರುವಾಗ ನಿಜ ಎಂದುಕೊಳ್ಳುತ್ತಾನೆ. ಈಗ ಸತ್ತ ಮೇಲೆ ಏನು ಇಲ್ಲ, ಅವನಿಗೆ ಬುದ್ಧಿ ಇರುವುದಿಲ್ಲ.

ಅವನ ಜೀವನದಲ್ಲಿ ಕಂಡ ಎಲ್ಲಾ ಕನಸುಗಳು ನೆನಪಿಗೆ ಬರುತ್ತವೆ. ಆ ಕನಸು ಕಾಣುತ್ತಿರುವಷ್ಟು ಹೊತ್ತು ಎಲ್ಲಾ ಇದ್ದಂತೆ ಅನ್ನಿಸುತ್ತದೆ. ಎಚ್ಚರವಾದಾಗ ಏನೂ ಇರುವುದಿಲ್ಲ. ಹಾಗೆಯೇ ಜೀವಿಸುವಷ್ಟು ಕಾಲ ಎಲ್ಲಾ ಇದ್ದಂತೆ ಇರುತ್ತದೆ. ಜರುಗುತ್ತಿರುವಂತೆ ಇರುತ್ತದೆ. ಕಷ್ಟಗಳು ಪಡುತ್ತಿರುವಂತೆ ಇರುತ್ತದೆ. ಭೋಗಗಳು ಅನುಭವಿಸುತ್ತಿರುವಂತೆ ಇದೆ. ಆದರೆ ಈಗ ಖರೀದಿಸಿದಂತೆ ಇದೆ, ಗರ್ವಪಡುವಂತೆ ಇದೆ, ದುಃಖಪಡುವಂತೆ ಇದೆ, ಆದರೆ ಈಗ ಏನೂ ಇಲ್ಲ, ಅವೆಲ್ಲವನ್ನೂ ಬಿಟ್ಟು ಬಂದುಬಿಡು ಎನ್ನುತ್ತಿದ್ದಾರೆ ಅವರು.

ಎಚ್ಚರವಾದಾಗ ಕನಸಿನಲ್ಲಿರುವವೆಲ್ಲಾ ಏನು ಮಾಡಿದರು? ಎಲ್ಲಿಗೆ ಹೋಗಿಬಿಟ್ಟವು? ನಿನಗೆ ಸಂಬಂಧವಿಲ್ಲವಯ್ಯಾ ಎನ್ನುತ್ತಾರೆ ಅವರು. ನಿಜವೆಂದು ತಿಳಿದು ಅವರೆಲ್ಲರೂ ನಿಜವಾಗಿಯೂ ನನ್ನ ಮಕ್ಕಳು ಅಂದುಕೊಂಡು, ನನ್ನ ಹೆಂಡತಿ ಎಂದುಕೊಂಡು, ನನ್ನ ಗಂಡನೆಂದುಕೊಂಡು, ಅವರಿಗಾಗಿ ತಪ್ಪುಗಳನ್ನು ಮಾಡಿದಿರಿ,

ಪಾಪಗಳನ್ನು ಮಾಡಿದಿರಿ, ಅಧರ್ಮವಾಗಿ ವರ್ತಿಸಿದಿರಿ, ಅರೇ ಇವರು ಯಾರು ಈಗ ಇಲ್ಲವಲ್ಲ ಎಂದುಕೊಳ್ಳುತ್ತಾರೆ.

ಆಗ ಅರ್ಥವಾಗುತ್ತದೆ ಅನವಶ್ಯಕವಾಗಿ ಇವೆಲ್ಲವನ್ನೂ ಮಾಡಿದ್ದೇನೆ ಎಂದು. ಅಧರ್ಮವಾಗಿ ಮೋಸಗಳನ್ನು ಮಾಡಿ ಸಂಪಾದಿಸಿದೆನು. ಇವೆಲ್ಲದರ ಗೊಡವೆ ಏಕೆ ಹೀಗೆ ಸಂಪಾದನೆ ಮಾಡಿದೆ ಎಂದುಕೊಳ್ಳುತ್ತಾನೆ. ಜೀವಿಸುವಾಗಲೇ ಇದನ್ನು ತಿಳಿದುಕೊಳ್ಳಬೇಕೆಂದು ಪ್ರಕೃತಿ ನಮಗೆ ಈ ಕನಸುಗಳು ಎನ್ನುವವನ್ನು ಏರ್ಪಾಡು ಮಾಡುವುದು ಆಗಿದೆ.

ಎಷ್ಟು ಎಚ್ಚರಿಸುತ್ತಿದೆ ಪ್ರಕೃತಿ, ಭಗವಂತನು. ತಿಳಿಯಲಾರದೆ ಅಜ್ಞಾನದಲ್ಲಿ ಎಷ್ಟು ತಪ್ಪುಗಳನ್ನು ಮಾಡುತ್ತಿದ್ದೇವೆ, ಎಷ್ಟು ಪಾಪಗಳನ್ನು ಮಾಡುತ್ತಿದ್ದೇವೆ, ಇದೆಲ್ಲವೂ ನಿಜ ಎಂದುಕೊಳ್ಳುತ್ತೀಯಾ, ಹುಚ್ಚನೇ..ಅದು ನಿಜವಲ್ಲವಯ್ಯಾ, ಅದು ಕನಸಮ್ಮ.. ಈ ಮಾತ್ರಕ್ಕೆ ಏಕೆ ಕೋಪ? ಅವನ ಮೇಲೆ ಕೋಪ, ಇನ್ನೊಬ್ಬನ ಮೇಲೆ ಶಿಕ್ಷೆ, ಬೇರೊಬ್ಬನ ಮೇಲೆ ದ್ವೇಷ, ಕನಸಿನಲ್ಲಿ ದ್ವೇಷವೇನು? ಕನಸಿನಲ್ಲಿ ಕೋಪಗಳೇನು? ಯಾರು ಇರುವುದಿಲ್ಲ. ಆದರೆ ನೀವು ಮಾಡಿದ ಕರ್ಮಗಳು ಇರುತ್ತವೆ. ತಿಳಿದುಕೊಳ್ಳಿರಿ.

ಇದು ಕನಸೆಂದು ತಿಳಿದುಕೊಳ್ಳದೆ, ನಿಜವೆಂದುಕೊಳ್ಳುತ್ತಾ ನೀನು ಮಾಡಿದಂತಹ ಆ ತಪ್ಪಾದ ಕರ್ಮಗಳು, ಪಾಪ ಕರ್ಮಗಳು ಅದೇ ನಿನ್ನ ಸಂಗಡ ಬರುತ್ತವೆ. ಇನ್ನು ಎಲ್ಲವೂ ಅದೃಶ್ಯ ಆಗಿಹೋಗುತ್ತವೆ, ಕನಸುಗಳಂತೆ. ಆದ್ದರಿಂದ ಗುರುತಿಟ್ಟುಕೊಳ್ಳಿ. ಪ್ರಕೃತಿ ಎಂತಹ ಉತ್ತಮವಾದ ಏರ್ಪಾಡು ಮಾಡಿದೆ ಎಲ್ಲರಿಗೆ. ಎಷ್ಟೋ ತಿಳಿಯಬೇಕಿದೆ. ಅವೆಲ್ಲವನ್ನೂ ತಿಳಿದುಕೊಳ್ಳುವುದೇ ಜ್ಞಾನ. ಜ್ಞಾನವೆಂದರೆ ಏನು? ಪ್ರಕೃತಿ ಬೋಧಿಸುವವೆಲ್ಲವನ್ನೂ ತಿಳಿದುಕೊಂಡರೆ, ಇದಕ್ಕಿಂತಲೂ ಜ್ಞಾನ ಯಾವುದು ಇಲ್ಲ.

ಏಕೆಂದರೆ ಕನಸು ಇರುವಷ್ಟು ಸಮಯ ನಿಜ ಅನ್ನಿಸುತ್ತದೆ. ಎಚ್ಚರವಾದಾಗ ಏನು ಇರುವುದಿಲ್ಲ. ಅಯ್ಯೋ ಕನಸು ಎನ್ನುತ್ತೇವೆ. ಹಾಗೆಯೇ ನಿಜ ಜೀವನವೂ ಕೂಡ. ಈಗ ನಡೆಯುತ್ತಿರುವ ಜೀವನವು ನಿಜವೆಂದು ಅನ್ನಿಸುತ್ತದೆ. ಆದರೆ ಸತ್ತ ಮೇಲೆ ಏನೂ ಇರುವುದಿಲ್ಲ. ಆಗ ಅಂದುಕೊಳ್ಳುತ್ತೀರಿ ಏನಿದು ಇದೆಲ್ಲಾ ಕನಸೆಂದು.

ಒಂದು ವಿಧದಲ್ಲಿ ನೋಡಿದರೆ ಈ ಜರುಗುತ್ತಿರುವುದೆಲ್ಲಾ ನೀರಿನ ಮೇಲಿನ ಬರಹದ ತರಹ ಇರುತ್ತದೆ. ನೀರಿನ ಮೇಲಿನ ಬರಹದ ತರಹ ಇದೆಯಲ್ಲಾ ಎಂದುಕೊಳ್ಳುತ್ತಾರೆ. ನೀರಿನ ಮೇಲೆ ಬರಹ ಬರೆಯುತ್ತಿರುವಾಗಲೇ ಮರುಕ್ಷಣದಲ್ಲಿ ಇರುವುದಿಲ್ಲ. ನೀರು ಮಾತ್ರ ಇರುತ್ತದೆ. ನಿಜ ಜೀವನದಲ್ಲಿ ಕೂಡಾ ಅಷ್ಟೇ! ಎಲ್ಲವೂ ಇದ್ದಂತೆ ಇರುತ್ತದೆ, ಆದರೆ ಮರಣಿಸಿದ ತಕ್ಷಣ ಏನು ಬಾರದು, ಯಾವುದು ಇರುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ನಡೆಯುವುದೆಲ್ಲಾ ಕನಸೇ ಆಗಲಿ, ನಿಜವಲ್ಲವೆಂದು

ತಿಳಿಯಬೇಕು. ಈಗ ಏನಾದರೆ ನಡೆಯುತ್ತದೆಯೋ! ಯಾವುದನ್ನು ನಿಜವೆಂದುಕೊಂಡಿದ್ದೀಯೋ! ಕನಸಿನ ನಂತರ ಒಂದೂ ಇರುವುದಿಲ್ಲ. ಯಾವುದೂ ಬರುವುದಿಲ್ಲ. ಎಲ್ಲಾ ಕನಸು ಮಾಯವಾದಂತೆ ಮಾಯವಾಗುತ್ತದೆ..

ಆದ್ದರಿಂದ ಯಾವುದು ನಡೆದರೂ ಬಾಧೆಪಡುವ ಅಗತ್ಯವಿಲ್ಲ. ಸಂತೋಷ ಹೊಂದುವ ಅವಶ್ಯವೂ ಇಲ್ಲ. ಅದಕ್ಕೇ ಭಗವದ್ಗೀತೆಯಲ್ಲಿ ದ್ವಂದ್ವದಿಂದ ಹೊರಗೆ ಬನ್ನಿರಿ ಎಂದಿದೆ. ಗೆಲುವು–ಸೋಲುಗಳು, ನಿಂದನೆ–ಸ್ತುತಿಗಳು, ಮಾನ–ಅಪಮಾನಗಳು, ಸುಖ–ದುಃಖಗಳಿಗೆ ಪ್ರತಿಸ್ಪಂದಿಸಬೇಡ.

ಏಕೆಂದರೆ ಕನಸಿನಲ್ಲಿರುವವುಗಳಿಗಾಗಿ ಏಕೆ ಈ ಪ್ರತಿಸ್ಪಂದನ? ಹುಚ್ಚನಲ್ಲದಿದ್ದರೆ. ಮತ್ತೇನು. ಯಾರು ಜಯ ಗಳಿಸಿದವನು? ಯಾರು ಸೋತವನು? ನಿನ್ನನ್ನು ಯಾರು ನಿಂದಿಸಿದವರು? ಅದು ನಿಜವೇ? ಯಾರು ಪ್ರಶಂಸಿಸಿದವರು? ಉಬ್ಬಿ ಹೋಗಲು. ಶಾಲನ್ನು ಹೊದಿಸಿದರೆ ಸಂತೋಷಗೊಳ್ಳುತ್ತೇವೆ. ವಿಮರ್ಶಿಸಿದರೆ ಕುಗ್ಗಿಹೋಗುತ್ತೇವೆ. ಇವೆಲ್ಲವೂ ಕನಸಿನಲ್ಲಿಯವು. ಆದ್ದರಿಂದ ನಡೆಯುವುದೆಲ್ಲಾ ಕನಸೇ ಆಗಲಿ ನಿಜವಲ್ಲ ಎಂದು ತಿಳಿದುಕೊಳ್ಳಬೇಕು. ಇದು ಜ್ಞಾನಿಗೆ ಅರ್ಥವಾಗುತ್ತದೆ. ಆದ್ದರಿಂದ ತಪ್ಪುಗಳನ್ನು ಮಾಡಬಾರದು. ಪಾಪಗಳನ್ನು ಮಾಡಬಾರದು, ಧರ್ಮವನ್ನು ಬಿಡಬಾರದು.

ನೋಡಿ ಹುಟ್ಟಿದ ಮೇಲೆ ಎಷ್ಟೊಂದು ಮಾಡುತ್ತಾ ಇರುತ್ತೇವೆ, ಮಾಡಿ, ಮಾಡಿ, ನಿಷ್ಕ್ರಮಿಸುತ್ತೇವೆ, ಅಂದರೆ ಮರಣಿಸುತ್ತೇವೆ, ಇದೆಲ್ಲವೂ ಕನಸೇ. ಸ್ವಲ್ಪ ಆಲೋಚಿಸಿ ನಿಮ್ಮ ಬಾಲ್ಯದಲ್ಲಿ ನಡೆದದನ್ನು ಈಗ ತೋರಿಸುವಿರಾ? ಇವೆಯೇ? ತೋರಿಸಲಾರೆವು ಅಲ್ಲವೇ. ಹಾಗೆಯೇ ಈಗ ನಡೆದದ್ದೆಲ್ಲಾ ಮರಣದ ನಂತರ ಏನು ಇರುವುದಿಲ್ಲ. ಜಾಗ್ರತೆಯಿಂದ ನೆನಪಿಟ್ಟುಕೊಳ್ಳಿ.

ಇದು ನಿಮಗೆ ಅರ್ಥವಾದರೆ ನಿಮ್ಮಲ್ಲಿ ಎಷ್ಟೋ ಬದಲಾವಣೆ ಬರುತ್ತದೆ. ಸರಿಯಾದ ರೀತಿಯಲ್ಲಿ ಜೀವಿಸುತ್ತೀರಿ. ಎಷ್ಟೋ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತೀರಿ. ಅಸಲಿಗೆ ಏಕೆ ಅವುಗಳ ಮೇಲೆ ಮಮಕಾರವನ್ನು, ಅವುಗಳಿಗಾಗಿ ನಿಮ್ಮ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತೀರಿ.

ಭೀಮವರಂಗೆ ಬನ್ನಿರಿ ಎಂದರೆ ಎಷ್ಟೋ ಕಾರಣಗಳನ್ನು ಹೇಳುತ್ತೀರಿ. ಎಷ್ಟೋ ಜವಾಬ್ದಾರಗಳಿವೆ ಎನ್ನುತ್ತೀರಿ. ಇದೆಲ್ಲವೂ ಕನಸು ಕಣ್ರೀ ಅರ್ಥ ಮಾಡಿಕೊಳ್ಳಿ. ಸ್ವಲ್ಪ ಸಮಯವನ್ನು ಬಿಡುವು ಮಾಡಿಕೊಂಡು ಜ್ಞಾನವನ್ನು ಸಂಪಾದಿಸಿಕೊಂಡರೆ ಎಲ್ಲವೂ ಅರ್ಥವಾಗುತ್ತದೆ.

ಜ್ಞಾನವಿಲ್ಲದಿದ್ದರೆ ಅರ್ಥವಾಗದು. ಏಕೆ ಆ ಮಮಕಾರ? ಏಕೆ ಆರ್ಭಟ? ಏಕೆ ಆಸೆ? ಏನೋ ನನ್ನ ಜವಾಬ್ದಾರಿ, ಜವಾಬ್ದಾರಿ ಎನ್ನುತ್ತೀಯಾ? ನೀನು ಆತ್ಮ, ನೀನು

ದೇಹವಲ್ಲ, ಆದ್ದರಿಂದ ಈ ಜ್ಞಾನವನ್ನು ಸಂಪಾದಿಸಿಕೋ! ಈ ಬಂಧನದಿಂದ ಬಿಡುಗಡೆಯಾಗು. ಅದೇ ಬುದ್ಧನು ಹೇಳೋದು. ಆತನೇ ಉತ್ತಮ ಪುರುಷನು.

ಶಂಕರಾಚಾರ್ಯರು ಏನು ಹೇಳಿದ್ದಾರೆಂದರೆ?
ಕಸ್ತ್ವಂ ಕೋಹಂ ಕುತ ಆಯತಃ
ಕಾಮೇ ಜನನೀ ಕೋ ಮೇ ತಾತಃ
ಇತಿ ಪರಿಭಾವಾಯೆ ಸರ್ವಮಸಾರಮ್
ವಿಶ್ವಂ ತ್ಯಕ್ತ್ವಾ ಸ್ವಪ್ನ ವಿಚಾರಂ ॥

**ತಾತ್ಪರ್ಯ :** ನೀನು ಯಾರು? ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನನ್ನ ತಾಯಿ ಯಾರು? ನನ್ನ ತಂದೆ ಯಾರು? ಇವರೆಲ್ಲರೂ ಕೂಡ ಅವರು ಏನು ಹೇಳಿದ್ದಾರೆ ಎಂದರೆ ಸಾರಹೀನವಾದವು ಎಂದು. ಅವುಗಳಲ್ಲಿ ಏನೂ ಇಲ್ಲ, ಅವು ಸ್ವಪ್ನ ತುಲ್ಯವಾದವು, ಅಂದರೆ ಸ್ವಪ್ನದಂತಹುಗಳೇ! ಕನಸುಗಳಂತಹವು! ಆದ್ದರಿಂದ ಇಂತಹವುಗಳೆಲ್ಲವನ್ನೂ ಕೂಡ ವಿಚಾರಣೆ ಮಾಡುತ್ತಾ ಪ್ರಶ್ನಿಸಿಕೊಳ್ಳುತ್ತಾ ಇರಬೇಕು.

ಹೀಗೆ ಪ್ರಶ್ನಿಸಿಕೊಂಡರೆ ಆಗ ನಿನಗೆ ಏನು ಇಲ್ಲವೆನ್ನುವುದು ಅರ್ಥವಾಗುತ್ತದೆ. ಆಗ ಅವುಗಳ ಮೇಲೆ ಮಮಕಾರವನ್ನು ತ್ಯಜಿಸುತ್ತೀರಿ. ಮತ್ತೇ ಇವೆಲ್ಲವೂ ಏಕೆ ಇರುವವು ಎನ್ನುವ ಸಂದೇಹ ಬರಬಹುದು? ಏಕೆ ಇವೆ ಅಂದರೆ ಅವೆಲ್ಲವೂ ಇರುತ್ತವೆ. ಅವುಗಳ ಮೂಲಕ ಕೆಲವು ಅನುಭವಗಳನ್ನು ಹೊಂದಬೇಕು. ಕೆಲವು ಪಾಠಗಳನ್ನು ಕಲಿಯಬೇಕು. ಆದ್ದರಿಂದ ಇವೆಲ್ಲವೂ ಹೆಂಡತಿ, ಗಂಡ, ಮಕ್ಕಳು, ಸಂಸಾರ ಇವೆಲ್ಲವೂ ಕೂಡಾ. ಕಲಿಯುವುದಕ್ಕಾಗಿಯೇ ವಿನಃ ಅವರೆಲ್ಲಾ ನಿಜವೆಂದು ಅಲ್ಲ.

ಆದ್ದರಿಂದ ಅವುಗಳು ಒಂದು ಕನಸು ಇದ್ದಂತೆ. ಕನಸು ಇದ್ದಷ್ಟು ಸಮಯ ಹೇಗೆ ನಿಜವೆಂದು ಅನ್ನಿಸುತ್ತದೆಯೋ! ಇವುಗಳು ಕೂಡಾ ನಡೆಯುವಷ್ಟು ಸಮಯ ನಿಜವೆನ್ನಿಸುತ್ತದೆ. ಆದರೆ ಅವು ಇರುವುದಿಲ್ಲ. ಆದ್ದರಿಂದ ಅವುಗಳ ಮೇಲೆ ಇರುವ ಮಮಕಾರವನ್ನು ತ್ಯಜಿಸಬೇಕು. ಏಕೆಂದರೆ ನಾನು ಹಣದ ಮೇಲೆ ಆಗಲಿ, ಇವುಗಳ ಮೇಲೆ ಆಗಲಿ ಮಮಕಾರವಿದ್ದರೆ ತಪ್ಪುಗಳನ್ನು ಮಾಡುತ್ತೀಯಾ, ಪಾಪಗಳನ್ನು ಮಾಡುತ್ತೀಯಾ, ಮಾಡಬಾರದ ಕೆಲಸಗಳನ್ನು ಮಾಡುತ್ತೀಯ.

ಮಮಕಾರವಿಲ್ಲದಿದ್ದರೆ ತಪ್ಪುಗಳು, ಪಾಪಗಳನ್ನು ಮಾಡುವುದಿಲ್ಲ. ಆದ್ದರಿಂದ ಶಂಕರಾಚಾರ್ಯರು ಇದನ್ನು ಹೇಳಿದ್ದಾರೆ. ಇವೆಲ್ಲವೂ ನಿಜವಾಗಿ ಇದ್ದರೆ? ನೀನು ಮಮಕಾರವನ್ನು ಬೆಳೆಸಿಕೊಂಡಿದ್ದೀಯಾ ಎಂದು ಅರ್ಥವಾಗುತ್ತದೆ. ಇಲ್ಲದವುಗಳ ಮೇಲೆ ಮಮಕಾರ ಏಕೆ? ಆದ್ದರಿಂದ ಇವುಗಳೆಲ್ಲಾ ಕನಸಿನಂತಹವು ಎಂದು ತಿಳಿದುಕೊಂಡರೆ, ಅವುಗಳಿಂದ ಹೊರಬರುವ ಪ್ರಯತ್ನವನ್ನು ಮಾಡಬೇಕು. ಏಕೆಂದರೆ

ನೀವೇ ನೋಡಿ ಕನಸು ಕಾಣುತ್ತಿರುವಷ್ಟು ಸಮಯ ನಿಜವೆನಿಸುತ್ತದೆ. ಆದರೆ ಆ ನಿದ್ರೆಯಿಂದ ಎಚ್ಚರವಾದಾಗ ಏನು ಇರುವುದಿಲ್ಲ. ಎಲ್ಲಾ ಕನಸೇ ಎಂದು ಹೇಳುತ್ತೀರಿ.

ಹಾಗೆಯೇ ಅಜ್ಞಾನದಲ್ಲಿ ಇದ್ದಷ್ಟು ಹೊತ್ತು ಈಗ ಜೀವನದಲ್ಲಿ ನಡೆಯುತ್ತಿರುವುದೆಲ್ಲಾ ನಿಜವೆನ್ನುವ ಭಾವನೆಯಲ್ಲಿ ಇರುತ್ತೇವೆ. ಆದರೆ ಆತ್ಮಜ್ಞಾನವನ್ನು ಹೊಂದಿದ ಮೇಲೆ ನಡೆಯುತ್ತಿರುವುದೆಲ್ಲಾ ಜೀವನವು ಕನಸೆಂದು ತಿಳಿದುಕೊಳ್ಳುತ್ತೀರಿ. ಅದಕ್ಕೆ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಕಾರಣ ನೀನು ಅಜ್ಞಾನದಲ್ಲಿಯೇ ಇದ್ದರೆ ಇದೆಲ್ಲವೂ ನಿಜವೆಂದುಕೊಳ್ಳುತ್ತಾ, ತಪ್ಪುಗಳನ್ನು ಮಾಡುತ್ತೀಯಾ, ರುಚಿಗೆ ಪ್ರಾಮುಖ್ಯತೆ ಕೊಡುತ್ತೀಯೆ.

ಆ ಪ್ರಾಣಿಗಳನ್ನು ಕೊಂದು, ಮಾಂಸಾಹಾರವನ್ನು ಭಕ್ಷಿಸುತ್ತಾ ಎಷ್ಟೋ ಪಾಪಗಳನ್ನು ಮಾಡಿ ಮೂಟೆ ಕಟ್ಟಿಕೊಳ್ಳುತ್ತೀಯೆ. ಆದ್ದರಿಂದ ನೀನು ಜ್ಞಾನವನ್ನು ಸಂಪಾದಿಸಿಕೊಂಡರೆ ನಿನಗೆ ಅರ್ಥವಾಗುತ್ತದೆ. ಆ ಪ್ರಾಣಿಗಳೆಲ್ಲಾ ಒಂದೇ. ಅವುಗಳಲ್ಲಿ ಆತ್ಮ ಸ್ವರೂಪವೆಂದು. ನಾವು ಆತ್ಮಸ್ವರೂಪವೇ. ನಮ್ಮಂತಹ ಅನುಭವಗಳಿಗಾಗಿ ಭೂಮಿಯ ಮೇಲೆ ಬಂದಿರುವ ಪ್ರಾಣಿಗಳೇ ಎಂದು ಹೇಳಿ ಭಾವಿಸುತ್ತೀಯ. ಅವುಗಳನ್ನು ಹಿಂಸಿಸುವುದಿಲ್ಲ. ಪಾಪದ ಮೂಟೆಯನ್ನು ಕಟ್ಟಿಕೊಳ್ಳುವುದಿಲ್ಲ. ನೀನು ಆತ್ಮಜ್ಞಾನವನ್ನು ಹೊಂದಿದಾಗ.

ಆದ್ದರಿಂದ ನಿದ್ರೆಯಿಂದ ಎಚ್ಚರಗೊಂಡಾಗ ಕನಸು ಕಂಡದ್ದು ಏನು ಇರುವುದಿಲ್ಲ. ಕನಸೇನಾ ಎನ್ನುತ್ತೀಯ. ಹಾಗೆಯೇ ಆತ್ಮಜ್ಞಾನವನ್ನು ಹೊಂದಿದ ಮೇಲೆ ಈಗ ನಡೆಯುತ್ತಿರುವ ಜೀವನವೆಲ್ಲಾ ಕನಸೆಂದು ತಿಳಿದುಕೊಳ್ಳುತ್ತೀಯ. ಹಾಗೆಯೇ ಮೂರನೇ ಕಣ್ಣು ತೆರೆದರೂ, ನಡೆಯುತ್ತಿರುವುದೆಲ್ಲಾ ಕನಸೆಂದು ತಿಳಿಯುತ್ತದೆ. ಆತ್ಮಜ್ಞಾನವೇ ಅಲ್ಲಾ. ಮೂರನೇ ಕಣ್ಣು ತೆರೆದರೂ ನಡೆಯುತ್ತಿರುವುದೆಲ್ಲಾ ಕನಸು ಎಂದು ತಿಳಿಯುತ್ತದೆ.

ಅಷ್ಟೇ ಅಲ್ಲಾ ಆತ್ಮಜ್ಞಾನಿಗೆ ಜೀವಮಾನವೆಲ್ಲಾ 'ನೀರಿನ ಮೇಲಿನ ಬರಹ'ದಂತೆಯೇ ಎನ್ನುವ ಸತ್ಯ ಕೂಡಾ ಅರ್ಥವಾಗುತ್ತದೆ. ಅಷ್ಟೇ ಅಲ್ಲ ನಿದ್ರೆ ಹೋದವನಿಗೆ ಕಣ್ಣು ತೆರೆದರೆ ನಡೆದದ್ದು ಕನಸೆಂದು ಅರ್ಥವಾಗುತ್ತದೆ. ಹಾಗೆಯೇ ಮರಣ ಹೊಂದಿದವನಿಗೆ ಅಂದರೆ ಶರೀರವನ್ನು ತ್ಯಜಿಸಿದವನಿಗೆ ಮರಣದ ನಂತರ, ನಡೆದ ಜೀವನವೆಲ್ಲಾ ಕನಸೆಂದು ಅರ್ಥವಾಗುತ್ತದೆ.

ಅಷ್ಟೇ ಅಲ್ಲಾ ಆತ್ಮಜ್ಞಾನಿ 'ಮರಣಿಸಿದರೂ ಮರಣಿಸುವುದಿಲ್ಲ' ಎನ್ನುವ ವೇದಾಂತ ತಿಳಿದುಕೊಳ್ಳುತ್ತಾನೆ. ಅಂದರೆ "ಯದೃಶ್ಯಂ ತನ್ನಸ್ಯಂ" ಎನ್ನುವ ವೇದಾಂತವನ್ನು ತಿಳಿದುಕೊಳ್ಳುತ್ತಾನೆ. ಅಜ್ಞಾನಿಗೆ ತಿಳಿಯುವುದಿಲ್ಲ. ಸತ್ತು ಹೋಗುತ್ತೇವೆ. ಸತ್ತು ಹೋಗುತ್ತೇವೆ ಎಂದುಕೊಳ್ಳುತ್ತಾನೆ. ನೀನು ಸತ್ತರೂ ಸಾಯುವುದಿಲ್ಲವೆಂದು

ಪತ್ರೀಜಿಯವರು ಹೇಳುತ್ತಾ ಇರುತ್ತಾರೆ. ನಮಗೆ ಮರಣವೇ ತಿಳಿಯದು, ಮರಣಿಸಿದರೂ ನೀನು ಇರುತ್ತೀಯ. ಮರಣಿಸಿದರೂ ನಿನಗೆ ಜೀವನವಿದೆ. ಮರಣಿಸಿದರೂ ನಿನಗೆ ಇನ್ನೂ ಜನ್ಮಗಳಿವೆ ಎಂದು ತಿಳಿದುಕೋ! ಎಂದಿದ್ದಾರೆ.

ಅಷ್ಟೇ ಅಲ್ಲದೆ 'ಯದೃಶ್ಯಂ' ನಿನಗೆ ಏನಾದರೆ ಕಾಣಿಸುತ್ತಿದೆಯೋ! 'ತನ್ನಶ್ಯಂ' ಅದೆಲ್ಲವೂ ನಶಿಸು ಹೋಗುವವು! ಎನ್ನುವ ವೇದಾಂತ ಕೂಡಾ ಆತ್ಮಜ್ಞಾನಿಗೆ ಅರ್ಥವಾಗುತ್ತದೆ. ಅಷ್ಟೇ ಅಲ್ಲ ಕನಸಿನಲ್ಲಿಯೂ ಕೂಡಾ ಆನಂದವನ್ನು ಹೊಂದುತ್ತಾ ಇರುತ್ತಾರೆ. ಅಂದುಕೊಂಡದ್ದಾಲ್ಲಾ ಜರುಗಿದರೆ. ಆನಂದವಲ್ಲದೆ ಮತ್ತೇನಿದೆ. ಹಾಗೆಯೇ ಜೀವನದಲ್ಲಿ ಕೂಡಾ ಆನಂದವನ್ನು ಹೊಂದುತ್ತಾ ಇರುತ್ತಾರೆ. ನೀವು ಅಂದುಕೊಂಡದ್ದೆಲ್ಲಾ ನಡೆದರೆ ಆನಂದವಲ್ಲದೆ ಮತ್ತೇನು. ಕನಸಿನಲ್ಲಿ ಹೇಗೆ ಇರುತ್ತದೆಯೋ! ನಿನ್ನ ಜೀವನದಲ್ಲಿಯೂ ಕೂಡಾ ಹಾಗೆಯೇ ಇರುತ್ತದೆ.

ಕನಸಿನಲ್ಲಿ ಆನಂದವನ್ನು ಹೊಂದುತ್ತಾ ಇರುತ್ತಾನೆ, ಆದರೆ ಕಣ್ಣು ತೆರೆದ ತಕ್ಷಣ ಏನು ಇರುವುದಿಲ್ಲ. ನಿದ್ರೆ ಮಾಡುತ್ತಿರುವವನು ಕಣ್ಣು ತೆರೆದರೆ ಕನಸು ಎಂದು ಹೇಗೆ ಅರ್ಥವಾಗುತ್ತದೆಯೋ, ಎಚ್ಚರವಾದವನಿಗೆ ಈ ಎರಡು ಕಣ್ಣು ಮುಚ್ಚಿ, ಮೂರನೇ ಕಣ್ಣು ತೆರೆದರೆ ಎಲ್ಲಾ ಕನಸೆಂದು ಅರ್ಥವಾಗುತ್ತದೆ.

ಈ ವಿಷಯವನ್ನೇ ಪ್ರಕೃತಿ ನಮಗೆ ಕನಸುಗಳ ಮೂಲಕ ಬೋಧಿಸಿ, ಕನಸಿನಂತಹ ಈ ಜೀವನಕ್ಕಾಗಿ ಅನಾವಶ್ಯಕವಾಗಿ ತಪ್ಪುಗಳು, ಪಾಪಗಳನ್ನು ಮಾಡಬೇಡ. ಜೀವನವನ್ನು ವ್ಯರ್ಥ ಮಾಡಿಕೊಳ್ಳಬೇಡಿ, ಜ್ಞಾನವನ್ನು ಸಂಪಾದಿಸಿಕೋ ಎಂದು ನಮ್ಮನ್ನು ಪ್ರಕೃತಿ ಎಚ್ಚರಿಸುತ್ತದೆ. ಎಂತಹ ಉತ್ತಮವಾದ ಏರ್ಪಾಡು ಅಲ್ಲವೇ? ಕಷ್ಟಗಳು ಇದ್ದವರು ಕೆಲವರು ಹೀಗೆ ಹೇಳುತ್ತಾರೆ ಭಗವಂತ ನನ್ನನ್ನು ಏಕೆ ಸೃಷ್ಟಿ ಮಾಡಿದ, ನನಗೆ ಏಕೆ ಕಷ್ಟಗಳಿವೆ, ನನ್ನನ್ನು ಸೃಷ್ಟಿಸದಿದ್ದರೆ ಈ ಗೊಡವೆಯೆ ಇಲ್ಲವಲ್ಲ, ನಾನು ಏನಾದರೂ ಕೇಳಿದನೇ ಎಂದು ಪ್ರಶ್ನೆಗಳನ್ನು ಕೇಳುತ್ತಾರೆ.

ಹೀಗೆ ಪ್ರಶ್ನೆಗಳನ್ನು ಹಾಕುತ್ತಾರೆ ಆಗಲೀ, ಪ್ರಕೃತಿ ಕಲಿಸುತ್ತಿರುವ ಪಾಠಗಳನ್ನು ಏಕೆ ಅರ್ಥ ಮಾಡಿಕೊಳ್ಳುವುದಿಲ್ಲ? ಎಷ್ಟು ಪಾಠಗಳನ್ನು ಕಲಿಸುತ್ತದೆ. ಎಷ್ಟು ಜನಗಳ ಮೂಲಕ ಪಾಠಗಳನ್ನು ಕಲಿಸುತ್ತದೆ. ಇವೆಲ್ಲವನ್ನು ಯಾರು ಕಲಿತುಕೊಳ್ಳುತ್ತಾರೆ. ಒಬ್ಬ ಜ್ಞಾನಿ ಕಲಿತುಕೊಳ್ಳುತ್ತಾನೆ. ಆದ್ದರಿಂದ ಮೊದಲು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕು. ಆಗ ನಿಮಗೆ ಇವೆಲ್ಲವೂ ಅರ್ಥವಾಗುತ್ತವೆ, ದುಃಖವಿರುವುದಿಲ್ಲ.

ನಿಮಗೆ ಇನ್ನೊಂದು ವಿಷಯವು ಕೂಡಾ ಅರ್ಥವಾಗುತ್ತದೆ. ಏನೆಂದರೆ? ಈ ಜೀವನವೇ ಅಲ್ಲ, ಈ ಪ್ರಪಂಚವೆಲ್ಲಾ ಒಂದು ನಾಟಕರಂಗವಿದ್ದಂತೆ ಎಂದು ಅರ್ಥವಾಗುತ್ತದೆ.

ಆ ನಾಟಕದಲ್ಲಿ ನಾವೆಲ್ಲಾ ನಟರು ಅಂದರೆ ಪಾತ್ರಧಾರಿಗಳು. ಆ ನಾಟಕವು ನಡೆಯುತ್ತಿರುವಷ್ಟು ಕಾಲ ಎಲ್ಲರೂ ವೇದಿಕೆಯ ಮೇಲೆ ಇರುತ್ತಾರೆ. ಅವರವರ ಪಾತ್ರಗಳನ್ನು ಪೋಷಿಸುತ್ತಾ ಇರುತ್ತಾರೆ. ನಾಟಕ ಮುಗಿದ ಮೇಲೆ ವೇದಿಕೆ ಮೇಲೆ ಯಾರು ಇರುವುದಿಲ್ಲ. ಯಾರಿಗೆ ಅವರು ನಿಷ್ಕ್ರಮಿಸುತ್ತಾರೋ ವೇದಿಕೆ ಖಾಲಿ ಆಗುತ್ತದೆ. ಹಾಗೆಯೇ ನಾವೆಲ್ಲಾ ಕೂಡಾ ಈ ಪ್ರಪಂಚವೆನ್ನುವ ನಾಟಕದಲ್ಲಿ ನಮ್ಮ ಪಾತ್ರ ಪೋಷಿಸುವುದಕ್ಕಾಗಿ ಬಂದಿರುವಂತಹ ನಟರು.

ನಾವು ನಟಿಸುತ್ತಿದ್ದೇವೆ. ನೆನಪಿಟ್ಟುಕೊಳ್ಳಿ. ನಮ್ಮ ಪಾತ್ರ ಎಷ್ಟು ಕಾಲ ಇರುತ್ತದೆ? ನಿನ್ನ ಪಾತ್ರ ಮುಗಿದ ನಂತರ ನಿಷ್ಕ್ರಮಿಸುತ್ತೀಯ. ಪುನಃ ಕಾಣಿಸಿಕೊಳ್ಳುವುದಿಲ್ಲ. ನೋಡಿ ಕೆಲವು ಅತಿಥಿ ನಟರು ಇರುತ್ತಾರೆ. ಕೆಲವರು ಕೊನೆವರೆಗೆ ಇರುತ್ತಾರೆ. ಇನ್ನೂ ಕೆಲವರು ಮಧ್ಯದಲ್ಲಿ ಹೊರಟು ಹೋಗುತ್ತಾರೆ. ಹಾಗೆಯೇ ಈ ಪ್ರಪಂಚವೆನ್ನುವ ನಾಟಕರಂಗದಿಂದ ನಮ್ಮ ಪಾತ್ರ ಮುಗಿದ ನಂತರ ನಿಷ್ಕ್ರಮಿಸುತ್ತೇವೆ. ಅಂದರೆ ಮರಣಿಸುತ್ತೇವೆ.

ಮರಣಿಸಿದರೆ ತುಂಬಾ ಅಳುತ್ತಾರೆ. ತುಂಬಾ ಬಾಧೆಪಡುತ್ತಾರೆ. ಪೋಷಿಸಿದ ನನ್ನ ಪಾತ್ರ ಮುಗಿದುಹೋಯಿತು. ಇನ್ನು ನನ್ನ ಕೆಲಸ ಇಲ್ಲಿ ಏನು ಇಲ್ಲ. ಆದ್ದರಿಂದ ನಿಷ್ಕ್ರಮಿಸುತ್ತಿದ್ದೇನೆ ಎಂದು ನಾಟಕದಲ್ಲಿ ಪಾತ್ರಧಾರಿ ಎಂದುಕೊಂಡು ನಿಷ್ಕ್ರಮಿಸುತ್ತಾನೆ. ನಿಷ್ಕ್ರಮಿಸುವುದೆಂದರೆ ಆ ಪಾತ್ರದಿಂದ ಹೊರಬರುವುದು.

ಆಗ ನಿಮಗೆ ಆ ನಿರ್ದೇಶಕರು ಪುನಃ ಇನ್ನೊಂದು ಪಾತ್ರವನ್ನು ಕೊಡುತ್ತಾನೆ, ಒಮ್ಮೆ ತಾಯಿ ಪಾತ್ರ. ಒಮ್ಮೆ ಅತ್ತೆ ಪಾತ್ರ. ಹೀಗೆ ವಿಧವಿಧವಾದ ಪಾತ್ರಗಳನ್ನು ಪೋಷಿಸಬೇಕಾಗುತ್ತದೆ.

ಹಾಗೆಯೇ ಒಂದು ಬಾರಿ ಮಗನ ಪಾತ್ರ, ಒಮ್ಮೆ ಧನವಂತನ ಪಾತ್ರ, ಒಮ್ಮೆ ಬಡವನ ಪಾತ್ರ, ಮತ್ತೊಮ್ಮೆ ಉದ್ಯೋಗಿ ಪಾತ್ರ, ಮತ್ತೊಮ್ಮೆ ಅಧಿಕಾರಿಯಾಗಿ, ಒಂದು ಬಾರಿ ಸೇವಕನಾಗಿ, ಒಮ್ಮೆ ರಾಜ, ಒಮ್ಮೆ ಸಂಗೀತ ವಿದ್ವಾಂಸನಾಗಿ ಹೀಗೆ ಎಷ್ಟೋ ಪಾತ್ರಗಳನ್ನು ನಟಿಸುತ್ತಾರೆ. ನೀವು ಚಲನಚಿತ್ರಗಳನ್ನು ನೋಡುತ್ತಿಲ್ಲವೇ? ಸಾವಿತ್ರಿಯವರು ಎಷ್ಟು ಪಾತ್ರಗಳನ್ನು ಪೋಷಿಸಿದ್ದರೂ ಸೊಸೆ ಪಾತ್ರವನ್ನೇ ಏಕೆ ತೆಗೆದುಕೊಳ್ಳುತ್ತಾಳೆ, ಸೂರ್ಯಕಾಂತಮ್ಮನು ಅತ್ತೆಯ ಪಾತ್ರವನ್ನೇ ತೆಗೆದುಕೊಳ್ಳುತ್ತಾಳೆ. ಅತ್ತೆಯ ಪಾತ್ರ ತೆಗೆದುಕೊಂಡ ಸೂರ್ಯಕಾಂತಮ್ಮ ಸೊಸೆಯನ್ನು ಬಾಧೆಪಡಿಸುವುದೇ! ಪಾತ್ರವನ್ನು ಚೆನ್ನಾಗಿ ಪೋಷಿಸಬೇಕು. ಇಲ್ಲದಿದ್ದರೆ ಆಕೆಯನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ.

ಹಾಗೆಯೇ ಸೊಸೆಯಾಗಿ ಪಾತ್ರ ಮಾಡಿದ ಸಾವಿತ್ರಿ ನೋವು ಪಡುತ್ತಿರುವಂತೆ ನಟಿಸಲೇಬೇಕು. ಇಲ್ಲದಿದ್ದರೆ ಪುನಃ ಅವಕಾಶ ಬಾರದು. ಆ ಸಿನಿಮಾದಲ್ಲಿ ನಟಿಸಬೇಕೆಂದರೆ. ಹಾಗೆಯೇ ಈ ಪಾತ್ರದಲ್ಲಿ ನೋವುಗಳನ್ನು ಅನುಭವಿಸಲು ಕೆಲವರು, ಸುಖವನ್ನು ಅನುಭವಿಸಲು ಕೆಲವರು ಇರುತ್ತಾರೆ.

ಎಲ್ಲರ ಜೀವನ ಒಂದೇ ರೀತಿಯಾಗಿ ಇರುವುದಿಲ್ಲ. ಅವರವರ ಪಾತ್ರ ಅವರದೇ. ನಾವು ಕೂಡ ವಿಧವಿಧವಾದ ಪಾತ್ರಗಳನ್ನು ತೆಗೆದುಕೊಂಡು ಬಂದಿದ್ದೇವೆ. ನಮ್ಮ ಪಾತ್ರವು ಮುಗಿದ ಮೇಲೆ ನಿಷ್ಕ್ರಮಿಸುತ್ತೇವೆ.

ನಾಟಕದಲ್ಲಿಯಾದರೆ ವೇದಿಕೆ ಮೇಲಿಂದ ಇಳಿದುಹೋಗುತ್ತಾರೆ. ಆದರೆ ನಿಜ ಜೀವನದಲ್ಲಿ ಈ ಭೂಮಿಯ ಮೇಲಿಂದಲೇ ನಿಷ್ಕ್ರಮಿಸುತ್ತೇವೆ. ಅದನ್ನು ಮರಣ ಹೊಂದುವುದು ಎನ್ನುತ್ತಾರೆ. ಮರಣ ಹೊಂದಿದ್ದೇವೆ. ಎಂದರೆ ಇನ್ನೂ ಅಲ್ಲಿ ಇಲ್ಲದಂತೆ ಅಲ್ಲ, ಇರುತ್ತಾರೆ ಪುನಃ ಇನ್ನೊಂದು ಪಾತ್ರ ತೆಗೆದುಕೊಂಡು ಭೂಮಿಯ ಮೇಲೆ ಬರುತ್ತಾರೆ.

ನಾಟಕದಲ್ಲಿಯೇ ಆಗಲಿ, ಸಿನಿಮಾದಲ್ಲಿಯೇ ಆಗಲಿ ಮೂರು ಗಂಟೆಗಳ ಪಾತ್ರವಿರುತ್ತದೆ. ನಿಜ ಜೀವನದಲ್ಲಿ ಒಂದು ಜನ್ಮವಿರುತ್ತದೆ. ಹಾಗೆ ಒಂದು ಪಾತ್ರ ಒಂದು ಜನ್ಮದಲ್ಲಿ ಪೋಷಿಸುತ್ತಾರೆ. ಆದ್ದರಿಂದ ಈ ವಿಷಯವನ್ನೇ ಷೇಕ್ಸ್‌ಪಿಯರ್ ಕೂಡಾ ಹೇಳಿದ್ದಾರೆ. ಪತ್ರೀಜಿಯವರು ಕೂಡಾ ಈ ವಿಷಯವನ್ನು ಅನೇಕ ಸಾರಿ ಹೇಳಿದ್ದಾರೆ. ಅವರು ಏನು ಹೇಳಿದರೆಂದರೆ?

**“All the world is a stage, we are all mere actor, district and fume, do our part, and then deport”.**

ಈ ಪ್ರಪಂಚವೇ ಒಂದು ನಾಟಕರಂಗ. ಮಾನವನು ಚಿಕ್ಕ ಚಿಕ್ಕ ವೇದಿಕೆಗಳನ್ನು ಹಾಕಿಕೊಂಡರೆ! ಭಗವಂತನು ಭೂಮಿಯಂತಹ ಒಂದು ದೊಡ್ಡ ವೇದಿಕೆ ಹಾಕಿದ್ದಾನೆ. ಇದನ್ನು ಅನುಸರಿಸಿ ಭಗವಂತನು ಎಂತಹ ಶ್ರೇಷ್ಠನೋ ಅರ್ಥ ಮಾಡಿಕೊಳ್ಳಬಹುದು. ಮಾನವನು ಹಾಕಿದ ವೇದಿಕೆಯಲ್ಲಿ 50 ಜನರೋ ಇಲ್ಲದಿದ್ದರೆ 100 ಜನರೋ ನಟಿಸುತ್ತಾರೆ. ಇಲ್ಲದಿದ್ದರೆ 500 ಜನರು ನಟಿಸಬಹುದು.

ಆದರೆ ಭಗವಂತನು ಶ್ರೇಷ್ಠನಾದ್ದರಿಂದ ಕೆಲವು ನೂರಾರು ಕೋಟಿ ಜನರು ಪಾತ್ರಗಳನ್ನು ಪೋಷಿಸಲು ಅನುಕೂಲವಾಗುವಂತೆ ತುಂಬಾ ಚೆನ್ನಾಗಿ ವೇದಿಕೆ ಹಾಕಿದ್ದಾನೆ. ಆ ವಿಷಯವೇ ಶೇಕ್ಸ್‌ಪಿಯರ್ ಹೇಳಿದ್ದು “ಆಲದ ದಿ ವರಲ್ಡ್ ಈಜ್ ಏ ಸ್ಟೇಜ್” ಎಂದು. ನಾವೆಲ್ಲಾ ಪಾತ್ರದಾರರು, ಸುಮ್ಮನೆ ನಟಿಸಲು ಬಂದವರು. ಅಂದರೆ ನಮ್ಮ ಪಾತ್ರ ಪೋಷಿಸಲು ಬಂದವರು.

ನಟಿಸಲು ಬಂದು ಇದೆಲ್ಲಾ ನನ್ನದು, ನನ್ನದು ಅನ್ನುತ್ತೀಯಾ. ನನ್ನ ಹೆಂಡತಿ, ನನ್ನ ಗಂಡ, ನನ್ನ ಮಕ್ಕಳು, ನನ್ನ ಹಣ, ನಾನು ನಾನು ಎನ್ನುತ್ತಾ ಇರುತ್ತೀಯಾ. ನಾಟಕದಲ್ಲಿರುವವರೆಲ್ಲಾ ನಿಜವಾಗಿ 'ನನ್ನದು' 'ನನ್ನವರು' ಎಂದೊಕೊಂಡರೆ ಎಂತಹ ಮೂರ್ಖರು.

ಅವನಿಗೆ ರಾಜನ ಪಾತ್ರ ಬಂದಿದೆ, ಸಿಂಹಾಸನ ಮೇಲೆ ಕುಳಿತುಕೊಳ್ಳುತ್ತಾನೆ. ಎಂತಹ ದರ್ಬಾರು ನಡೆಸುತ್ತಾನೆ. ಎಷ್ಟು ಆಜ್ಞೆಗಳನ್ನು ಮಾಡುತ್ತಾನೆ. ಆ ಸಿನಿಮಾ ಮುಗಿದ ಮೇಲೆ ಆಜ್ಞೆಗಳನ್ನು ಹಾಕಿ ಎನ್ನಿರಿ, ಆ ಸೇವಕನೇ ಕಪಾಳ ಮೋಕ್ಷ ಮಾಡುತ್ತಾನೆ.

ಆ ಸಿನಿಮಾದಲ್ಲಿ, ಆ ನಾಟಕದಲ್ಲಿ ಹೆಂಡತಿಗೆ ಮುತ್ತು ಕೊಡುತ್ತಾನೆ. ಏನು ಎನ್ನುವುದಿಲ್ಲ. ತನ್ಮಯತ್ವವನ್ನು ಹೊಂದುತ್ತಿರುವಂತೆ ನಟಿಸುತ್ತಾಳೆ. ಅದು ನಿಜವೆಂದುಕೊಂಡು ಸಿನಿಮಾ ಮುಗಿದ ಮೇಲೆ ಆಕೆಯನ್ನು ಕರೆದು ಮುತ್ತಿಟ್ಟರೆ ಸುಮ್ಮನಿರುತ್ತಾಳೆಯೇ? ಕೆನ್ನೆಗೆ ಹೊಡೆಯುತ್ತಾಳೆ. ನಾಟಕದಲ್ಲಿ ಇರುವವನು ಇದು ನಾಟಕವೆಂದು ನೆನಪಿಟ್ಟುಕೊಂಡು, ಮೈ ಮೇಲೆ ಎಚ್ಚರವಿಟ್ಟುಕೊಳ್ಳಬೇಕು. ಹಾಗೆಯೇ ಜೀವನವೇ ಒಂದು ನಾಟಕ. ಈ ಪ್ರಪಂಚ ಒಂದು ನಾಟಕರಂಗ ಎನ್ನುವುದು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ನಾವೆಲ್ಲರೂ ಪಾತ್ರಧಾರಿಗಳು ಎಂದು ಅವರು ಹೇಳಿದ್ದಾರೆ. ಆ ವೇದಿಕೆ ಮೇಲೆ ಏನೋ ಮಾಡಿ ನಮ್ಮ ಪಾತ್ರವನ್ನು ಪೋಷಿಸಿ, ಪುನಃ ನಿಷ್ಕ್ರಮಿಸುತ್ತೇವೆ. ಅದೇ ಶೇಕ್ಸ್‌ಪಿಯರ್ ಹೇಳಿದ್ದು. ಎಂತಹ ಅದ್ಭುತ. ಎಲ್ಲಾ ನಿಜವೆಂದು ಎಷ್ಟು ತಪ್ಪುಗಳನ್ನು ಮಾಡುತ್ತಾರೋ ಪಾಪಗಳನ್ನು ಮಾಡುತ್ತಾರೋ! ಎಷ್ಟು ಹಿಂಸೆ ಮಾಡುತ್ತಾರೋ! ನಂತರ ಅವುಗಳನ್ನು ಅನುಭವಿಸುವಾಗ ಎಷ್ಟು ಬಾಧೆಪಡುತ್ತಾರೆ. ನಾಟಕದಲ್ಲಿ ನಡೆಯುವುದಕ್ಕೆ ನೋವು ಏಕೆ?

ನಾಟಕದಲ್ಲಿ ನಷ್ಟ ಬಂದಿದೆ. ಏಕೆ ದುಃಖ? ಕುಗ್ಗಿದರೆ ಹೇಗೆ? ಲಾಭ ಬಂದರೆ ಹಿಗ್ಗುವುದು ಏಕೆ?

ಕೊನೆಗೆ ಏನು ಇರುವುದಿಲ್ಲ. ಎಲ್ಲವೂ ಮಾಯವಾಗುತ್ತವೆ. ಆದ್ದರಿಂದ ಎಲ್ಲವನ್ನು ಕಲಿಯಬೇಕು. ಕಲಿಯಲೆಂದೇ ಈ ದೊಡ್ಡ ಜೈಲಿನಲಿಟ್ಟಿದ್ದಾರೆ. ಅಯ್ಯೋ ಜೈಲಿನಲ್ಲಿ ಇದ್ದೇನೆ ಎಂದು ದುಃಖಪಟ್ಟರೆ ಹೇಗೆ? ಕಲಿಯಿರಿ ಈ ಜೀವನದಿಂದ ಕೂಡಾ ಯಾವ ಪಾಠಗಳನ್ನು ಕಲಿಯಬೇಕೋ ಅವುಗಳನ್ನು ಕಲಿತುಕೊ! ಹಾಗೆ ಎಲ್ಲವನ್ನೂ ಕಲಿತುಕೊಳ್ಳುವುದಕ್ಕಾಗಿಯೇ.

ಆದ್ದರಿಂದ ಕಾಣುವುದೆಲ್ಲಾ ಸ್ವಪ್ನ ತುಲ್ಯವಾದದ್ದು ಅಂದಿದ್ದಾರೆ ಶಂಕರಾಚಾರ್ಯರು. ಆದ್ದರಿಂದ ತಿಳಿದುಕೊಳ್ಳಿರಿ! ಈ ಬಂಧನಗಳೆಲ್ಲಾ ಕೂಡಾ ಕನಸಿನಲ್ಲಿದ್ದಂತಹ ಬಂಧಗಳೇ! ಆದ್ದರಿಂದ ಆ ಭವಬಂಧನಗಳಿಂದ ಹೊರ ಬರಬೇಕು ಎಂದು ಬುದ್ಧನು ಬೋಧಿಸಿದ್ದಾನೆ. ಅವನೇ ಉತ್ತಮ ಪುರುಷನು ಎಂದು ಕೂಡಾ ಹೇಳಲಾಗಿದೆ. ನಾವು ಕೂಡಾ ಉತ್ತಮ ಪುರುಷರಾಗಬೇಕು. ನಾವು ಕೂಡಾ ಭವಬಂಧನಗಳಿಂದ ಹೊರಬರಬೇಕು. ಆ ಮಮಕಾರದಿಂದ ಹೊರಬರಬೇಕು.

ಇಂತಹ ವಿಚಾರಣೆ ಮಾಡಬೇಕು. ಅಜ್ಞಾನದಲ್ಲಿ ಇದ್ದರೆ? ಏನು ಅರ್ಥವಾಗದೇ ಜೀವನವು ಒಂದು ವಿಧವಾಗಿ ಇರುತ್ತದೆ. ಇವೆಲ್ಲವನ್ನೂ ಅರ್ಥ ಮಾಡಿಕೊಂಡು ಜ್ಞಾನವನ್ನು ಹೊಂದಿ ಜೀವಿಸಿದರೆ. ಆ ಜೀವನವು ಇನ್ನೊಂದು ವಿಧವಾಗಿ ಇರುತ್ತದೆ. ಅದಕ್ಕಾಗಿ ನಾನು ಜ್ಞಾನ, ಜ್ಞಾನ ಎನ್ನುತ್ತೇನೆ. ಇದೇನೋ ನಿಜವೆಂದುಕೊಳ್ಳುತ್ತಾ ನನಗೆ ರೋಗ ಬಂದೆಬಿಡುತ್ತದೆ. ನನಗೆ ಈ ಕಷ್ಟ ಬಂದಿದೆ. ನನಗೆ ಈ ನೋವು ಬಂದಿದೆ ಎಂದು ಯಾವುದೇ ಸಂಕಲ್ಪಗಳನ್ನು ಇಟ್ಟುಕೊಳ್ಳುವುದು, ಅದನ್ನು ಇಟ್ಟುಕೊಳ್ಳುವುದು, ಇದನ್ನು ಇಟ್ಟುಕೊಳ್ಳುವುದರಿಂದ ಏನು ಪ್ರಯೋಜನವಿಲ್ಲ.

ಆದ್ದರಿಂದ ಈ ಮಮಕಾರಗಳನ್ನು ಬಿಟ್ಟು, ಮಕ್ಕಳ ಮೇಲೆ ಆಗಲಿ, ಹೆಂಡತಿಯ ಮೇಲೆ ಆಗಲಿ, ಗಂಡನ ಮೇಲೆ ಆಗಲಿ, ತಂದೆ ತಾಯಿ ಹೀಗೆ ಎಷ್ಟೋ ಪಾತ್ರಗಳು ಇವೆ, ಹಣದ ಮೇಲೆ ಮಮಕಾರವನ್ನು ಬಿಟ್ಟು ಬಿಡಬೇಕು.

ಈ ವಿಭಾಗದಲ್ಲಿ ಕನಸುಗಳ ಬಗ್ಗೆ ಹೇಳಿಕೊಂಡಿದ್ದೇವೆ. ಅಸಲು ಕನಸುಗಳನ್ನು ಹೇಗೆ ಕಾಣುತ್ತಾರೆ? ಕನಸುಗಳು ಏಕೆ ಬರುತ್ತವೆ? ಅಸಲು ಹೇಗೆ ಬರುತ್ತವೆ ಎನ್ನುವುದು ಈಗ ನಾವು ಸ್ವಲ್ಪ ತಿಳಿದುಕೊಳ್ಳೋಣ.

ಕನಸುಗಳು ಕಾಣುವುದು ಮನಸ್ಸಿಗೆ ಸಹಜವಾದ ಸ್ಥಿತಿ. ಮನಸು ಮಾಡುವ ಕೆಲಸ ಎಂದು ನಿಮಗೆ ಅರ್ಥವಾಗುತ್ತದೆ. ಅದು ಎಚ್ಚರ, ಗಾಢ ನಿದ್ರೆಗಳ ಮಧ್ಯೆ ಇರುವ ಸ್ಥಿತಿ. ಇಂದ್ರಿಯಗಳು ಗ್ರಹಣ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಅಡ್ಡಿಯಾದಾಗ, ಅಂದರೆ ಅವು ಮಾಡುವ ಕೆಲಸಗಳು ಮಾಡದಿರುವಾಗ ಕಣ್ಣು ನೋಡುವುದಿಲ್ಲ. ಕಿವಿಗಳು ಕೇಳುವುದಿಲ್ಲ, ಬಾಯಿ ಮಾತನಾಡುವುದಿಲ್ಲ, ಕೈಗಳು ಕೆಲಸ ಮಾಡಲಾರವು, ಕಾಲುಗಳು ಕೆಲಸ ಮಾಡುವುದಿಲ್ಲ, ನಿದ್ರೆ ಮಾಡುವಾಗ ಜರುಗುವುದು ಇದೇ.

ಮನಸ್ಸು ತಮ್ಮ ಆಳದಲ್ಲಿ ನಿದ್ರಾವಸ್ಥೆಯಲ್ಲಿದ್ದರೂ ಜ್ಞಾಪಕಗಳನ್ನು ಪುನಃ ಸ್ಮರಣೆ ಮಾಡಿಕೊಳ್ಳುತ್ತವೆ. ಅಂತಹ ಮನಸ್ಸನ್ನು ನಾವು ಏನೆನ್ನುತ್ತೇವೆ ಎಂದರೆ "ಸಬ್ ಕಾನ್ಸಿಯಸ್ ಮೈಂಡ್" ಎನ್ನುತ್ತೇವೆ. ಪ್ರತಿಯೊಬ್ಬರಿಗೂ ಕೂಡಾ ತೀರಲಾರದ

ಕೋರಿಕೆಗಳು ಮನಸ್ಸಿನ ಆಳದಲ್ಲಿ ಅಡಗಿರುತ್ತವೆ. ಆ ಕೋರಿಕೆಗಳು ಏನು ಮಾಡುತ್ತವೆ ಎಂದರೆ, ಬೇರೆ ಬೇರೆ ಅವಕಾಶಗಳಿಗಾಗಿ ಮನಸ್ಸು ಕಾದಿರುತ್ತದೆ.

ಜ್ಞಾನೇಂದ್ರಿಯಗಳು ಬಾಹ್ಯ ಪ್ರಪಂಚದಲ್ಲಿ ನಡೆಯುತ್ತಿರುವ ಗ್ರಹಿಸಲಾರದ ಸ್ಥಿತಿಯಲ್ಲಿ ಇರುವಾಗ ಸ್ಮಾರಕ ಮನಸ್ಸು ತನ್ನ ಆಸೆಯನ್ನು ತೀರಿಸಿಕೊಳ್ಳುತ್ತದೆ. ಸ್ಮಾರಕ ಮನಸ್ಸು, ಅಪಸ್ಮಾರಕ ಮನಸು ಎರಡು ವಿಧಗಳಾಗಿವೆ. ಕಾನ್ಸಿಯಸ್ ಮೈಂಡ್, ಸಬ್ ಕಾನ್ಸಿಯಸ್ ಮೈಂಡ್. ಸಬ್ ಕಾನ್ಸಿಯಸ್ ಅಂದರೆ ಅಪಸ್ಮಾರಕ ಸ್ಥಿತಿಯಲ್ಲಿ ಆ ನಿದ್ರೆ ಹೋಗುವ ಸಮಯದಲ್ಲ ಸ್ಮಾರಕ ಮನಸ್ಸು ಕೂಡಾ ಆಸೆಯನ್ನು ತೀರಿಸಿಕೊಳ್ಳುತ್ತಾ ಇರುತ್ತದೆ.

ಆಗ ಅಪಸ್ಮಾರಕ ಮನಸ್ಸಿನಲ್ಲಿ ಹುದುಗಿರುವ ಕೋರಿಕೆಗಳನ್ನು ಪುನಃ ಸ್ಮರಣೆ ಮಾಡಿಕೊಳ್ಳುವುದರಿಂದ ಆ ಕೋರಿಕೆಗಳು ಹಿಂದಕ್ಕೆ ಬರುತ್ತಾ ಇರುತ್ತವೆ. ಒಳಗಿರುವವು ಹೊರಗೆ ಬರುತ್ತಾ ಇರುತ್ತವೆ. ಅವುಗಳನ್ನೇ ಕನಸುಗಳು ಎನ್ನುತ್ತಾರೆ. ನಾವು ಇವುಗಳ ಕುರಿತು ಸರಳವಾಗಿ ಹೇಳಿಕೊಳ್ಳುತ್ತೇವೆ. ಅವುಗಳನ್ನೇ ಮೂರು ಅವಸ್ಥೆಗಳು ಎನ್ನುತ್ತಾರೆ 1) ಜಾಗೃತಾವಸ್ಥೆ 2) ಸ್ವಪ್ನಾವಸ್ಥೆ 3) ಸುಷುಪ್ತಿ ಅವಸ್ಥೆ ಎಂದು.

ಜಾಗ್ರತಾವಸ್ಥೆಯಲ್ಲಿ ಶರೀರವು, ಇಂದ್ರಿಯಗಳು ಕೆಲಸ ಮಾಡುತ್ತವೆ ಎಂದು ಹೇಳಿಕೊಂಡಿದ್ದೇವೆ. ರಾತ್ರಿ ನಿದ್ರೆ ಹೋದಾಗ ಆ ಇಂದ್ರಿಯಗಳು, ಶರೀರವು ಕೆಲಸ ಮಾಡುವುದಿಲ್ಲ. ಮನಸ್ಸು ಒಂದೇ ಕೆಲಸ ಮಾಡುತ್ತದೆ. ಆ ಮನಸ್ಸು ಏನು ಮಾಡುತ್ತದೆ ಎಂದರೆ? ಮನಸ್ಸೆಂದು ನಾವು ಹೇಳುತ್ತೇವೆ, ಆ ಅಪಸ್ಮಾರಕ ಮನಸು ಏನು ಮಾಡುತ್ತದೆ ಎಂದರೆ ಜಾಗ್ರತಾವಸ್ಥೆಯಲ್ಲಿ ನಡೆದ ಸಂಘಟನೆಗಳನ್ನು ಅಂದರೆ ಆಸೆಗಳನ್ನು ಕಲ್ಪನೆಗಳಾಗಿ ಮಾಡುತ್ತಾ ಇರುತ್ತದೆ.

ಆದ್ದರಿಂದ ಸ್ವಲ್ಪ ಗಲಿಬಿಲಿಯಾಗಿ ಕನಸುಗಳು ಇರುತ್ತವೆ. ಸ್ವಲ್ಪ ಹೊತ್ತು ಅದು, ಸ್ವಲ್ಪ ಹೊತ್ತು ಇದು ಹೊರಗಡೆ ಬರುತ್ತಾ ಇರುತ್ತವೆ. ಕೆಲವೊಮ್ಮೆ ಸ್ಪಷ್ಟವಾಗಿ ಇರುತ್ತವೆ. ಕೆಲವೊಮ್ಮೆ ಇರುವುದಿಲ್ಲ. ಅವುಗಳನ್ನೇ ಕನಸುಗಳು ಎನ್ನುತ್ತೇವೆ ಎಂದು ಹೇಳಿಕೊಳ್ಳುತ್ತಿರುತ್ತೇವೆ. ಸ್ವಪ್ನಾವಸ್ಥೆಯಲ್ಲಿ ಬರುತ್ತವೆ ಆದ್ದರಿಂದ ಸ್ವಪ್ನವೆಂದು ಕೂಡಾ ಎನ್ನುತ್ತಾರೆ. ಈ ಕನಸುಗಳಲ್ಲಿ ತುಂಬಾ ವಿಧಗಳಿವೆ. ನಾವು ಸಾಮಾನ್ಯವಾಗಿ ಹೊಂದುವ ಒಳ್ಳೆಯ, ಕೆಟ್ಟ ಕನಸುಗಳು ಅಲ್ಲದೆ ಇನ್ನೂ ಎರಡು ವಿಧದ ಕನಸುಗಳಿವೆ.

1. ಭವಿಷ್ಯದಲ್ಲಿ ಜರುಗುವುದನ್ನು ಸೂಚಿಸುವವು. ಅದಕ್ಕೆ ನಮ್ಮವರು ಕೆಲವರು ನನಗೆ ನಡೆಯುವುದು ತಿಳಿಯುತ್ತಿರುತ್ತದೆ ಎನ್ನುತ್ತಾರೆ. ಅಷ್ಟೇ ಅಲ್ಲದೆ ಭವಿಷ್ಯತ್ತಿನಲ್ಲಿ ನಡೆಯುವುದರ ಬಗ್ಗೆ ತಿಳಿಸುವ ಕನಸುಗಳು ನಮಗೆ ಮಾರ್ಗದರ್ಶನ ಕೂಡ ಆಗುತ್ತವೆ.

2. ವಿಶೇಷ ಭಯವನ್ನುಂಟು ಮಾಡುವವು. ಅಷ್ಟೇ ಅಲ್ಲಾ ಈ ಭಯಂಕರ ಕನಸುಗಳು ಹೇಗೆ ಬರುತ್ತವೆ ಅಂದರೆ ಆಶಾಭಂಗದಿಂದ ಉಂಟಾಗಿರುವವು. ವಿಪರೀತ ಚಿಂತೆಗಳು ಎಂದರೆ ವಿಪರೀತವಾಗಿ ಆಲೋಚಿಸುತ್ತಾ ಇರುತ್ತಾರೆ. ದುಃಖವನ್ನು ಉಂಟು ಮಾಡುವ ವಿಷಯಗಳನ್ನು ವಿಪರೀತವಾಗಿ ಆಲೋಚಿಸುತ್ತಾ ಇರುತ್ತಾರೆ. ಇವುಗಳಿಂದ ಭಯಂಕರವಾದ ಕನಸುಗಳು ಬರುತ್ತಾ ಇರುತ್ತವೆ.

ಹಾಗೆಯೇ ಮಾನವರು ತುಂಬಾ ಆಯಾಸಗೊಂಡಾಗ, ದುಗುಡದಿಂದ ಕೂಡಿದ್ದಾಗ ಭಯಂಕರ ಕನಸುಗಳು ಬರಬಹುದು. ಬರದೇ ಇರಬಹುದು. ಯಾವುದು ಏನಾದರೂ ಕನಸುಗಳೆಂದರೆ ಕನಸುಗಳೇ. ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವ ಅಗತ್ಯವಿಲ್ಲ. ತುಂಬಾ ಜನಕ್ಕೆ ನೆನಪಿರುವುದಿಲ್ಲ. ಯಾರಿಗಾದರೂ ನೆನಪಿದ್ದರೆ ಅವು ಮನಸ್ಸಿನಲ್ಲಿ ಊಹೆಗಳೇ ಆದ್ದರಿಂದ ಅವುಗಳಿಗೆ ಪ್ರಾಮುಖ್ಯತೆ ಕೊಡುವ ಅಗತ್ಯವಿಲ್ಲ. ನಾವು ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಏತಕ್ಕೆ ಈ ಕನಸುಗಳು ಬರುತ್ತಾ ಇರುತ್ತವೆ ಎಂದೂ ಆಗಲೇ ಹೇಳಿಕೊಂಡಿದ್ದೇವೆ. ನಿದ್ರೆ ಮಾಡಿ ಎದ್ದರೆ ಅದು ಕನಸು ಎಂದು ತಿಳಿಯುತ್ತದೆ. ಜೀವಿಸುತ್ತಿರುವವನು ಮರಣ ಹೊಂದಿದರೆ ಆ ಜೀವನವೇ ಒಂದು ಕನಸು ಎನ್ನುವ ಸಂಗತಿ ಅರ್ಥವಾಗುತ್ತದೆ. ಇವೆಲ್ಲವನ್ನೂ ನಾವು ತಿಳಿದಿದ್ದೇವೆ. ಅಷ್ಟೇ ಅಲ್ಲಾ, ಈ ನಿದ್ರಾವಸ್ಥೆಯಲ್ಲಿ ವಿವಿಧ ಶರೀರಗಳಿಂದ ಪಡೆಯುವ ಕನಸುಗಳು ವಿವಿಧ ಬಗೆಯಾಗಿರುತ್ತವೆ. ಅವುಗಳನ್ನು ನಾವು ನಂತರ ಇನ್ನೊಂದು ಸಾರಿ ತಿಳಿಯೋಣ.

ಏಕೆಂದರೆ ಪತ್ರೀಜಿಯವರು ಹೇಳುತ್ತಾರೆ. ನೀನು ಧ್ಯಾನವನ್ನು ವಿಶೇಷವಾಗಿ ಮಾಡಿದರೆ, ನಿನ್ನ ಶರೀರದಿಂದ ಸೂಕ್ಷ್ಮ ಶರೀರವು ಬರುತ್ತದೆ. ಆ ಶರೀರದಲ್ಲಿ ಗೀಜಾ ಪಿರಮಿಡ್‌ನಲ್ಲಿ ಹೋಗಿ ಅಲ್ಲಿ ಕುಳಿತುಕೋ ಎನ್ನುತ್ತಾರೆ. ಕಾರಣ ಶರೀರದಲ್ಲಿ, ಕಾರಣ ಲೋಕದಲ್ಲಿ ಇರುವಂತಹ ಪಿರಮಿಡ್‌ನಲ್ಲಿ ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ಆಗ ಅದರಲ್ಲಿಂದ ಮಹಾ ಕಾರಣ ಶರೀರವು ಹೊರಗೆ ಬರುತ್ತದೆ ಎನ್ನುತ್ತಾರೆ.

ಆ ಕಾರಣ ಲೋಕದಲ್ಲಿ, ಪಿರಮಿಡ್‌ನಲ್ಲಿ ಕೂತುಕೊಂಡು ಧ್ಯಾನವನ್ನು ಮಾಡಬೇಕು. ಕುಳಿತುಕೊಳ್ಳುವುದು ಎಂದರೆ ಸುಮ್ಮನೆ ಕುಳಿತುಕೊಳ್ಳುವುದು ಅಲ್ಲ. ಪಿರಮಿಡ್ ಒಳಗೆ ಹೋಗಿ ಅಲ್ಲಿ ಧ್ಯಾನವನ್ನು ಮಾಡಬೇಕು. ಆಗಲೇ ಅದರೊಳಗೆ ಇರುವ ಶರೀರವು ಹೊರಗೆ ಬರುತ್ತದೆ. ಒಟ್ಟಾರೆ ಏಳು ಶರೀರಗಳು ಎಂದು ಪತ್ರೀಜಿಯವರು ನಮಗೆ ಹೇಳುತ್ತಾರೆ. ಆಗ ಮಹಾಕಾರಣ ಲೋಕದಲ್ಲಿ ಹೋಗುತ್ತೇವೆ ಅಲ್ಲೇ ನೀನು ತೀವ್ರಾತಿ ತೀವ್ರ ಸಾಧನ ಮಾಡಿದಾಗ ವಿಧವಿಧವಾದ ಶರೀರಗಳಿಂದ ಪಡೆಯುವ ಕನಸುಗಳ ಕುರಿತು ನಂತರ ತಿಳಿದುಕೊಳ್ಳೋಣ.

**4. ತೃಷ್ಣಾರಹಿತನು :**

ತೃಷ್ಣಾರಹಿತನು ಅಂದರೆ ಕೋರಿಕೆಗಳು ಇಲ್ಲದವರು ಉತ್ತಮ ಪುರುಷರು ಎಂದು ಬುದ್ಧನು ಹೇಳಿದ್ದಾನೆ. ನಿಜವಾಗಿ ಬಹಳಷ್ಟು ಜನರು ಈ ಕೋರಿಕೆಗಳ ಕುರಿತು ಜೀವಿಸುತ್ತಾರೆ. ಕೋರಿಕೆಗಳು ಇಲ್ಲದವರು ಯಾರೂ ಇರುವುದಿಲ್ಲ.

ಅವಶ್ಯಕತೆಗಳಿಗಾಗಿಯೇ ಇರುವ ಕೋರಿಕೆಗಳು ಬೇರೆ, ಆಡಂಬರಗಳಿಗಾಗಿ ಇರುವ ಕೋರಿಕೆಗಳು ಬೇರೆ. ಅವಶ್ಯತಕೆಗಳು ತಪ್ಪಿದ್ದಲ್ಲ. ಭೂಮಿಯ ಬೇರೆ ಶರೀರವು ನಿಲ್ಲಬೇಕೆಂದರೆ, ಅವಶ್ಯಕತೆಗಳು ಅಗತ್ಯ. ಆದರೆ ಆಡಂಬರಗಳಿಗಾಗಿ ಇರುವ ಕೋರಿಕೆಗಳೇ ಮಾನವನಿಗೆ ನಷ್ಟಗಳನ್ನುಂಟು ಮಾಡುತ್ತವೆ. ಯಾರು ಉತ್ತಮ ಪುರುಷರು? ಯಾರು ನಿರ್ವಾಣವನ್ನು ಹೊಂದುವ ಪ್ರಯತ್ನವನ್ನು ಮಾಡುತ್ತಾ ಇರುತ್ತರೋ ಅವರೇ ಉತ್ತಮ ಪುರುಷರು. ಆ ಪ್ರಯತ್ನವನ್ನು ಯಾರು ಮಾಡುತ್ತಾರೋ ಅಂದರೆ ಕೋರಿಕೆಗಳು ಇಲ್ಲದವರೇ ಮಾಡುತ್ತಾರೆ.

ಕೋರಿಕೆಗಳು ಇದ್ದರೆ ಕೋರಿಕೆಗಳನ್ನು ತೀರಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಅವರು ಇನ್ನೂ ಈ ವಿಶ್ವದಲ್ಲಿ ಇರುವ ಈ ಪ್ರಪಂಚದಲ್ಲಿ ಇರುವವನ್ನು ಅನುಭವಿಸಬೇಕು. ಮೋಜನ್ನು ತೀರಿಸಿಕೊಳ್ಳಬೇಕು. ಐದು ಇಂದ್ರಿಯಗಳೊಂದಿಗೆ ಭೋಗಗಳನ್ನು ಅನುಭವಿಸಬೇಕು ಎನ್ನುವಂತಹ ಕೋರಿಕೆಗಳು ಇದ್ದರೆ ನಿರ್ವಾಣ ಹೊಂದಲು ಏಕೆ ಪ್ರಯತ್ನಿಸುತ್ತಾರೆ? ಮೋಕ್ಷವನ್ನು ಹೊಂದಬೇಕು ಎಂದು ಏಕೆ ಅಂದುಕೊಳ್ಳುತ್ತಾರೆ? ಜನ್ಮವಿಲ್ಲದ ಸ್ಥಿತಿ ಏಕೆ ಬೇಕು ಎಂದುಕೊಳ್ಳುತ್ತಾರೆ? ಜನ್ಮವಿದ್ದರೇನೆ ಅಲ್ಲವೇ ಇವೆಲ್ಲವನ್ನೂ ಅನುಭವಿಸುವುದು ಈ ಮೋಜುಗಳನ್ನು, ತೀರಿಸಿಕೊಳ್ಳೋದು, ಈ ಕೋರಿಕೆಗಳನ್ನು ತೀರಿಸಿಕೊಳ್ಳುವುದು. ಆದ್ದರಿಂದ ಕೋರಿಕೆಗಳು ಇರುವವರಿಗೆ ಮೋಕ್ಷವು ಬಾರದು. ಮೋಕ್ಷ ಬೇಕೆನ್ನುವವರಿಗೆ ಕೋರಿಕೆಗಳು ಇರಬಾರದು.

ಈಗ ನಮ್ಮ ಸಮಾಜದಲ್ಲಿ ಕೂಡಾ ಎಷ್ಟೋ ಜನರು ಕೋರಿಕೆಗಳ ಕುರಿತು ಧ್ಯಾನವನ್ನು ಮಾಡುತ್ತಿದ್ದಾರೆ. ರೋಗಗಳು ನಿವಾರಣೆ ಆಗಬೇಕೆಂಬ ಕೋರಿಕೆ. ಆಸೆಗಳನ್ನು ತೀರಿಸಿಕೊಳ್ಳಬೇಕೆಂಬ ಕೋರಿಕೆ. ಹಣವನ್ನು ಸಂಪಾದಿಸಬೇಕೆಂಬ ಕೋರಿಕೆ. ಸಮಸ್ಯೆಗಳು ನಿವಾರಣೆಯಾಗಬೇಕೆಂಬ ಕೋರಿಕೆ, ಇನ್ನೂ ಎಷ್ಟೋ ಕೋರಿಕೆಗಳು. ಹೆಣ್ಣುಮಕ್ಕಳ ಮದುವೆ ಆಗಬೇಕೆಂದು, ಗಂಡು ಮಕ್ಕಳಿಗೆ ಉದ್ಯೋಗ ಬರಬೇಕೆಂದು ಕೋರಿಕೆ, ಗಂಡನ ಕುರಿತ ಕೋರಿಕೆಗಳು, ಹೆಂಡತಿಯ ಕುರಿತು ಕೋರಿಕೆಗಳು ಹೆಂಡತಿ ತಾನು ಹೇಳಿದಂತೆ ಕೇಳಬೇಕೆನ್ನುವ ಕೋರಿಕೆ. ಗಂಡನ ಅನುಕೂಲಕರವಾಗಿರಬೇಕೆನ್ನುವ ಕೋರಿಕೆ, ಹೀಗೆ ವಿಧವಿಧವಾದ ಕೋರಿಕೆಗಳಿಂದ ಧ್ಯಾನವನ್ನು ಮಾಡುತ್ತಿದ್ದಾರೆ.

ಅವರಿಗೆ ಯಾರೋ ಹೇಳಿದ್ದಾರೆ ನೀನು ಧ್ಯಾನವನ್ನು ಮಾಡು ನಿನ್ನೆಲ್ಲಾ ಕೋರಿಕೆಗಳು ತೀರಿ ಹೋಗುತ್ತವೆ ಎಂದು ಇನ್ನೂ ಕೆಲವರು ಹೇಳುತ್ತಾರೆ. ನೀನು ಸಂಕಲ್ಪವಿಟ್ಟು ಧ್ಯಾನ ಮಾಡು ಬೇಗನೆ ತೀರಿಹೋಗುತ್ತವೆ ಎನ್ನುತ್ತಾರೆ. ಆದ್ದರಿಂದ ಈ ಸಂಕಲ್ಪಗಳು ಇಟ್ಟುಕೊಂಡವರು ಕೂಡಾ ತುಂಬಾ ಜನರಿದ್ದಾರೆ. ಆದರೆ ಬುದ್ಧನು ಸ್ಪಷ್ಟವಾಗಿ ಹೇಳಿದ್ದಾನೆ. ಯಾರು ಉತ್ತಮ ಪುರುಷನು? ಮೋಕ್ಷಗಳನ್ನು ಹೊಂದುವ ಅರ್ಹತೆ ಉಳ್ಳವನು? ಅಂದರೆ ತೃಷ್ಣಾ ರಹಿತನು, ಅಂದರೆ ಕೋರಿಕೆಗಳು ಇಲ್ಲದವನು ಎಂದಿದ್ದಾರೆ.

ಹಾಗಾದರೆ ಇಲ್ಲಿ ಹೇಗೆ ಎನ್ನುವ ಮಾತನ್ನು ಆಡುತ್ತಾರೆ. ಆದರೆ ಪತ್ರೀಜಿಯವರು ಏನೆನ್ನುತ್ತಾರೆ ಎಂದರೆ ನೀನು ಮಾಡುವುದನ್ನು ಮಾಡಿದರೆ ಬರುವುದು ಬರುತ್ತದೆ. ಸಹಜವಾಗಿಯೇ ಹೊಂದುತ್ತೀಯ ಎನ್ನುತ್ತಾರೆ. ನೀನು ಬೇಡುವ ಅವಶ್ಯಕತೆ ಇಲ್ಲ. ಮಾಡುವುದು ಮಾಡಿದರೆ ನೀನು ಪಡೆಯುವುದನ್ನು ಸಹಜವಾಗಿಯೇ ಹೊಂದುತ್ತೀಯ ಎಂದು ಪತ್ರೀಜಿಯವರು ಎಷ್ಟೋ ಸಾರಿ ಹೇಳುವುದು ನಡೆದಿದೆ.

ಅವರು ಏನೆಂದಿದ್ದಾರೆ ಎಂದರೆ? ಪ್ರಾರಂಭ ಜನ್ಮದಲ್ಲಿ ಕೋರಿದರೆ ಬಾರದು, ಅರ್ಹತೆಗೆ ತಕ್ಕಂತೆ ಬರುತ್ತದೆ ಎನ್ನುತ್ತಾರೆ. ಮಧ್ಯಸ್ಥ ಜನ್ಮದಲ್ಲಿ ಕೋರಿದರೆ ಬಾರದು ಬೇಕಾದದ್ದು ಬರುತ್ತದೆ ಎನ್ನುತ್ತಾರೆ. ಕೊನೆಯ ಜನ್ಮದಲ್ಲಿ ಕೂಡಾ ಕೋರಿದ್ದು ಬಾರದು, ನಿನ್ನ ಮೂಲಕ ಲೋಕಕ್ಕೆ ಯಾವುದು ಅವಶ್ಯಕತೆ ಇದೆಯೋ ಅದೇ ನಿನಗೆ ತನ್ನಷ್ಟಕ್ಕೇ ತಾನೇ ಬರುತ್ತಾ ಇರುತ್ತದೆ ಎನ್ನುವರು. ಅಂದರೆ ನಿಜವಾಗಿ ನೋಡಿದರೆ ಕೋರಿಕೆಗಳು ಎನ್ನುವವು ಎಲ್ಲಿಯೂ ತೀರುವುದಿಲ್ಲ. ಆದರೆ ಮಾನವರು ಕೋರುತ್ತಾ ಇರುತ್ತಾರೆ.

ಹಾಗಾದರೆ ಪ್ರಪಂಚದಲ್ಲಿ ಪೂಜೆ ಮಾಡುವವರು ಕೆಲವರಾದರೆ, ಪ್ರಾರ್ಥನೆಗಳನ್ನು ಮಾಡುವವರು ಕೆಲವರು, ನಮಾಜ್ ಮಾಡುವವರು ಕೆಲವರು. ಹೀಗೆ ಎಲ್ಲರೂ ಕೋರಿಕೆಗಳ ಕುರಿತೇ ಈ ಆರಾಧನೆಗಳನ್ನು ಮಾಡುತ್ತಿದ್ದಾರೆ. ಆದರೆ ಮಾನವನ ಅಸಲಾದ ಕೋರಿಕೆ ಮೋಕ್ಷವನ್ನು ಹೊಂದುವುದೇ, ಜನ್ಮರಾಹಿತ್ಯವೇ, ಸಾವು–ಹುಟ್ಟುಗಳು ಇರದ ಸ್ಥಿತಿಯನ್ನು ಹೊಂದುವುದೇ. ಕೊನೆಯ ಜನ್ಮದಲ್ಲಿ ಬಂದವರಿಗೇ ಈ ಆಕಾಂಕ್ಷೆ ಇರುತ್ತದೆ. ಆ ಉತ್ಕಟತೆ ಇರುತ್ತದೆ. ಅಂತಹವರು ತೃಷ್ಣಾರಹಿತನು ಆಗಬೇಕು. ಕೋರಿಕೆಗಳು ಇಲ್ಲದವನು ಆಗಬೇಕು. ಅದನ್ನೇ ಬುದ್ಧನು ಹೇಳುತ್ತಿರುವುದು.

ನೀವು ನೋಡಿ ಭಗವದ್ಗೀತೆಯಲ್ಲಿ ಕೃಷ್ಣನು ಏನು ಹೇಳಿದ್ದಾನೋ, ಬುದ್ಧನು ಅದನ್ನೇ ಹೇಳಿದ್ದಾನೆ.

**ಶ್ಲೋಕ :** ಯಸ್ಯ ಸರ್ವೆ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ
ಜ್ಞಾನಾಗ್ನಿದಗ್ಧಕರ್ಮಾಣಂ ತ ಮಾಹಾಃ ಪಣ್ಡಿತಂ ಬುಧಾಃ (ಭ.ಗೀ 4–19)

**ತಾತ್ಪರ್ಯ :** ಯಾರೊಬ್ಬರ ಸಮಸ್ತ ಕರ್ಮಗಳು, ಕೋರಿಕೆ, ಸಂಕಲ್ಪಗಳು ಎನ್ನುವವು ಇರುವುದಿಲ್ಲವೋ, ಜ್ಞಾನವೆನ್ನುವ ಅಗ್ನಿಯಿಂದ ಕರ್ಮಗಳೆಲ್ಲವೂ ದಗ್ಧವಾಗಿರುತ್ತವೆಯೋ, ಅಂತಹವರನ್ನು ಪಂಡಿತರೆಂದು ಜ್ಞಾನಿಗಳು ಹೇಳುತ್ತಾರೆ. ನೋಡಿ ಬುದ್ಧನು ಉತ್ತಮ ಪುರುಷನೆಂದಿದ್ದಾನೆ, ಕೃಷ್ಣನು ಪಂಡಿತನೆಂದಿದ್ದಾನೆ.

ಪುರುಷರಲ್ಲಿ ಉತ್ತಮನಾದವನನ್ನು ಉತ್ತಮ ಪುರುಷನೆಂದು ಬುದ್ಧನು ಹೇಳಿದ್ದಾನೆ. ಮಾನವರೆಲ್ಲವರಿಗಿಂತಲೂ ಉತ್ತಮನಾದವನನ್ನು ಪಂಡಿತರು ಎಂದು ಶ್ರೀ ಕೃಷ್ಣನು ಹೇಳಿದ್ದಾನೆ. ಒಂದು ವಿಧದಲ್ಲಿ ಹೇಳಬೇಕೆಂದರೆ ಜ್ಞಾನದಲ್ಲಿ ಹಣ್ಣಾದವನು. ಪರಾಕಾಷ್ಠೆಗೆ ಸೇರಿದವರು ಎಂದು ತಿಳಿದುಕೊಳ್ಳಬೇಕು. ಅಂದರೆ ಯಾರೊಬ್ಬರ ಸಮಸ್ತ ಕರ್ಮಗಳು ಕೋರಿಕೆ. ಸಂಕಲ್ಪಗಳು ಎನ್ನುವವು ಇಲ್ಲವಾಗುತ್ತವೆಯೋ, ಅಂದರೆ ಕರ್ಮ ಮಾಡುತ್ತಿರುವಾಗ ಯಾವ ಕೋರಿಕೆಯೂ ಇಲ್ಲದೇ ಅಂದರೆ ನನಗೆ ಈ ಫಲ ಬರಬೇಕು, ನನಗೆ ಈ ಲಾಭವಾಗಬೇಕು ಎನ್ನುವ ಕೋರಿಕೆ ಇಲ್ಲದೆ ಮಾಡಬೇಕು. ಹಾಗೇ ಇನ್ನೂ ಕೆಲವು ಮಂದಿ ಧ್ಯಾನವೆನ್ನುವ ಕರ್ಮ ಮಾಡುತ್ತಾರೆ. ಸಂಕಲ್ಪಗಳನ್ನು ಇಡುತ್ತಾರೆ. ಮತ್ತೆ ಕೆಲವರು ಆ ಸಂಕಲ್ಪವನ್ನು ಕುರಿತಂತೆ ಧ್ಯಾನವನ್ನು ಮಾಡುತ್ತಾರೆ.

ಆದರೆ ಶ್ರೀ ಕೃಷ್ಣನು ಏನು ಹೇಳಿದ್ದಾನೆ ಎಂದರೆ ನೀನು ಮಾಡುವ ಯಾವ ಕರ್ಮವಾದರೂ ಸರಿಯೇ ಕೋರಿಕೆಯಿಂದ ಕೂಡಿರಬಾರದು. ಸಂಕಲ್ಪಗಳನ್ನು ಇಟ್ಟು ಮಾಡಬಾರದು. ನೀನು ಮಾಡಬೇಕಾಗಿರುವುದು ಮಾಡು. ಪಡೆಯಬೇಕಾದದ್ದು ಪಡೆಯುತ್ತೀಯ ಎನ್ನುತ್ತಾರೆ. ನೀನು ಏನು ಮಾಡದೇ ಏನು ಬರುವುದಿಲ್ಲ. ಏನಾದರೂ ಮಾಡಿದರೇನೇ ಬರುವುದು. ಈ ಪ್ರಕೃತಿಯಲ್ಲಿ ಯಾರೂ ಏನು ಮಾಡಿದರೂ ಅದಕ್ಕೆ ತಕ್ಕ ಫಲಿತಾಂಶವನ್ನು ಪಡೆಯುತ್ತೀಯಾ. ಒಳ್ಳೇದು ಮಾಡಿದರೆ ಒಳ್ಳೆಯ ಫಲಿತಾಂಶವಿರುತ್ತದೆ. ಕೆಟ್ಟದ್ದು ಮಾಡಿದರೆ ಕೆಟ್ಟ ಫಲಿತಾಂಶವಿರುತ್ತದೆ.

ಆದ್ದರಿಂದ ಕೋರುವುದರ ಮೇಲೆ ದೃಷ್ಟಿ ಇಡದೇ, ಮಾಡುವುದರ ಮೇಲೆ ದೃಷ್ಟಿ ಇಡು ಅದರಿಂದ ನೀನು ಕೋರಿಕೆಗಳನ್ನು ಸಂಕಲ್ಪಗಳನ್ನು ಇಟ್ಟರೂ, ನೀನೇನು ಪಂಡಿತನಾಗಲಾರೆ, ಶ್ರೇಷ್ಠನಾಗುವುದಿಲ್ಲ, ಸಾಮಾನ್ಯನಾಗಿಯೇ ಇರುವೆ.

ಅಷ್ಟೇ ಅಲ್ಲ, ಈ ಶ್ಲೋಕದಲ್ಲಿ ಇನ್ನೂ ಏನು ಹೇಳಿದ್ದಾರೆಂದರೆ ಜ್ಞಾನವನ್ನು ಅಗ್ನಿಯಾಗಿ ಪ್ರಜ್ವಲಿಸುವಂತೆ ಮಾಡಿಕೊಂಡು ಕರ್ಮಗಳನ್ನು ಕೂಡಾ ದಗ್ಧ ಮಾಡಿಕೊಂಡು ಇರಬೇಕು ಎಂದಿದ್ದಾರೆ. ಅಂತಹವರನ್ನು ಪಂಡಿತ ಎನ್ನುತ್ತಾರೆ ಎಂದು ಹೇಳಲಾಗಿದೆ.

ಅಷ್ಟೇ ಅಲ್ಲದೆ ಶ್ರೀ ಕೃಷ್ಣನು ಇನ್ನು ಕೆಲವು ಸಂದರ್ಭಗಳಲ್ಲಿ ಕೋರಬಾರದೆಂದು ಹೇಳಿದ್ದಾರೆ. 12 ಅ. 17ನೇ ಶ್ಲೋಕದಲ್ಲಿ

**ಶ್ಲೋಕ :** ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚಿತ ನ ಕಾಂಕ್ಷತಿ ।
ಶುಭಾ ಶುಭ ಪರಿತ್ಯಾಗಿ ಭಕ್ತಿಮಾನ್ ಯ ಸ್ಸ ಮೇ ಪ್ರಿಯಃ (ಭ. ಗೀ. 12–17)

**ತಾತ್ಪರ್ಯ :** ಯಾರು ಸಂತೋಷಿಸುವುದಿಲ್ಲವೋ, ದ್ವೇಷಿಸುವುದಿಲ್ಲವೋ ಶೋಕವನ್ನು ಹೊಂದನೋ, ಯಾರು ಕೋರುವುದಿಲ್ಲವೋ, ಯಾರು ಶುಭಾ ಅಶುಭಗಳನ್ನು ಬಿಟ್ಟವನೋ, ಅಂದರೆ ಪಾಪವನ್ನು ಪುಣ್ಯವನ್ನು ಎರಡೂ ಬಿಟ್ಟವನು. ಅಂತಹ ಭಕ್ತನು ನನಗೆ ಪ್ರಿಯವಾದವನು ಎಂದಿದ್ದಾನೆ. ಇದರಿಂದ ಯಾರಾದರೂ ಸರಿಯೇ ಭಗವಂತನಿಗೆ ಇಷ್ಟವಾದವನಾಗಬೇಕು. ಅಂದರೆ ಕೋರಿಕೆಗಳನ್ನು ಕೋರಬಾರದು.

ಬುದ್ಧನು ಹೇಳಿದ ವಿಷಯಗಳೆಲ್ಲವನ್ನೂ ನಾವು ಪಾಲಿಸಿದೆವಾದರೆ ಯಾರ ಜೀವನವಾಗಲಿ ಎಷ್ಟೋ ಉತ್ತಮವಾಗಿ ಬದಲಾಗುತ್ತದೆ. ಆತನು ಹೇಳಿದ ಬೋಧನೆಗಳೆಲ್ಲವನ್ನೂ ಪಾಲಿಸಿದವನೇ ಉತ್ತಮ ಪುರುಷನಾಗಿ ಬೆಳೆಯುತ್ತಾನೆ.

ಅವರು ಉತ್ತಮ ಪುರುಷನ ಲಕ್ಷಣಗಳನ್ನು ಹೇಳುತ್ತಾ ತೃಷ್ಣಾರಹಿತನು ಆಗಿ ಇರಬೇಕು ಎಂದಿದ್ದಾರೆ. ಅಂದರೆ ಕೋರಿಕೆಗಳು ಇಲ್ಲದವನು ಆಗಿರಬೇಕು. ಕೋರಿಕೆಗಳಿಗೆ ದಾಸನಾಗಬಾರದು. ಆತನೇ ತೃಷ್ಣಾ ರಹಿತನು. ಅವಶ್ಯಕತೆಗಳನ್ನು ತೊರೆಯುವ ಅವಶ್ಯವಿಲ್ಲ. ಶಾರೀರಿಕ ಅವಶ್ಯಕತೆಗಳು ಪ್ರತಿಯೊಬ್ಬರಿಗೂ ಇರುತ್ತವೆ. ಕುಟುಂಬದ ಅವಶ್ಯಕತೆಗಳು ಇರುತ್ತವೆ. ಎಲ್ಲವನ್ನೂ ನೋಡಿಕೊಳ್ಳಬಹುದು. ಅವುಗಳನ್ನು ನಿಭಾಯಿಸುತ್ತಾ ನಿರ್ವಾಣವನ್ನು ಹೊಂದುವ ಪ್ರಯತ್ನವನ್ನು ಮಾಡಬೇಕೆಂದಿದ್ದಾರೆ. ಅಂದರೆ ದುಃಖದಿಂದ ಶಾಶ್ವತವಾಗಿ ಹೊರಬರಬೇಕು ಎನ್ನುವರು.

ನಿಜವಾಗಿ ಈ ಕಾಂಕ್ಷೆ, ಈ ಉತ್ಕಟತೆ 300–350 ಜನ್ಮಗಳು ದಾಟಿದರೇನೆ ಸಿಗುವುದು. ಯೋಗಿಗಳು ಆ ಸ್ಥಿತಿಗೆ ತಲುಪಿದವರೇ. ಅವರ ಮಾರ್ಗದಲ್ಲಿ ಪ್ರಯಾಣಿಸಿದರೆ ನಾವು ಕೂಡಾ ಅವರ ತರಹ ಉತ್ತಮರಾಗುತ್ತೇವೆ. ಶ್ರೀ ಕೃಷ್ಣನು ಕೂಡಾ ಭಗವದ್ಗೀತೆಯ ಮೂಲಕ ಎಲ್ಲರಿಗೂ ಇದನ್ನೇ ಬೋಧಿಸಿದ್ದಾರೆ. ಆತನು ಕರ್ಮ ಮಾಡಲು ನಿನಗೆ ಅಧಿಕಾರವಿದೆ. ಆಗಲಿ ಅದರ ಫಲಿತವನ್ನು ಕೇಳುವ ಅಧಿಕಾರವಿಲ್ಲವೆನ್ನುತ್ತಾರೆ.

ಈ ದಿನ ನಾವು ಶ್ರೀ ಕೃಷ್ಣನು ಹೇಳಿದ ಕೆಲವು ವಿಷಯಗಳನ್ನು ತಿಳಿಯೋಣ. ನಾನು ಒಂದೇ ಹೇಳುತ್ತಿರುವುದು. ಅಂತಹ ಉತ್ತಮರು ಹೇಳಿದ ವಿಷಯಗಳನ್ನು ಅಶ್ರದ್ಧೆ ಮಾಡಬಾರದು. ನಿರ್ಲಕ್ಷ್ಯ ಮಾಡಬಾರದು, ನಿರ್ಲಕ್ಷ್ಯ ಮಾಡಿದರೆ ನಷ್ಟವಾಗುವುದು

ನಮಗೇ, ಈ ಕೋರಿಕೆಗಳ ಕುರಿತು ಅವರು ಇನ್ನೂ ಏನು ಹೇಳಿದ್ದಾರೆಂದರೆ,

**ಶ್ಲೋಕ** : ಅನಪೇಕ್ಷಂ ಶುಚಿರ್ದಕ್ಷೆ ಉದಾಸೀನೋ ಗತ ವ್ಯಥಃ
ಸರ್ವಾರಂಭ ಪರಿತ್ಯಾಗಿ ಯೋಮದ್ಭಕ್ತ ಸ್ಸ ಮೇ ಪ್ರಿಯಃ (ಭ.ಗಿ.12–16)

**ತಾತ್ಪರ್ಯ :** ಕೋರಿಕೆಗಳು ಇಲ್ಲದವನು, ಅಂತರ್‌ಶುದ್ಧಿ ಇರುವವನು, ವಿವೇಕವಂತನು, ಯಾವುದರ ಮೇಲೆಯೂ ಆಸಕ್ತಿ ಇಲ್ಲದವನು, ದುಃಖಿಸದವನು, ಸಮಸ್ತ ಕಾರ್ಯಗಳನ್ನು ತ್ಯಜಿಸಿದವನು, ನನ್ನಲ್ಲಿ ಅಂದರೆ ಆತ್ಮದ ಮೇಲೆ ಭಕ್ತಿ ಇರುವವನು, ಯಾರು ಹೊಂದಿರುವರೋ ಆತನು ನನಗೆ ಇಷ್ಟವಾಗುತ್ತಾನೆ.

ಶ್ರೀ ಕೃಷ್ಣನು ಆತನಿಗೆ ಇಷ್ಟವಾದವರಲ್ಲಿ ಇರುವಂತಹ ಕೆಲವು ಲಕ್ಷಣಗಳನ್ನು ಹೇಳುತ್ತಾ ಅದರಲ್ಲಿ ಕೋರಿಕೆಗಳು ಇಲ್ಲದವನು ಎಂದಿದ್ದಾರೆ. ಹಾಗೆಯೇ ಬುದ್ಧನು ಕೂಡಾ ಉತ್ತಮ ಪುರುಷನ ಲಕ್ಷಣಗಳನ್ನು ಹೇಳುತ್ತಾ ತೃಷ್ಣಾರಹಿತನು ಎಂದು ಹೇಳಿದ್ದಾರೆ.

ಇನ್ನೂ ಏನು ಹೇಳಿರುವರೆಂದರೆ? ಆತನು ಅಂತರ್‌ಶುದ್ಧಿ ಉಳ್ಳವನು. ಅಂದರೆ ಅಂತರಂಗದಲ್ಲಿ ಮನಸ್ಸು ಉಳ್ಳವನು. ಯಾರ ಮನಸ್ಸು ಶುದ್ಧವಾಗಿ ಇರುತ್ತದೆಯೋ ಅವರ ಅಂತರಂಗ ಶುದ್ಧವಾಗಿದ್ದಂತೆಯೇ. ಆ ಪ್ರಯತ್ನವೇ ನಾವೆಲ್ಲಾ ಮಾಡುತ್ತಿರುವುದು. ಆದ್ದರಿಂದ ಪ್ರತಿದಿನವೂ ಇಷ್ಟು ತೀವ್ರವಾಗಿ ಧ್ಯಾನವನ್ನು ಮಾಡುತ್ತಿದ್ದೇವೆ. ಅಂತರಂಗ ಶುದ್ಧವಾಗಿಲ್ಲದಿದ್ದರೆ ಬಾಹ್ಯ ಪ್ರವರ್ತನೆ ಸೃಷ್ಟಿ ವಿರುದ್ಧವಾಗಿರುತ್ತವೆ. ಬುದ್ಧಿಯು ಸ್ಥಿರವಾಗಿ ಕೆಲಸ ಮಾಡುವುದಿಲ್ಲ. ಅಂತರಶುದ್ಧಿ ಇಲ್ಲದಿದ್ದರೆ ಕೋರಿಕೆಗಳು ಕೂಡಾ ಹೆಚ್ಚಾಗಿರುತ್ತವೆ.

ಆದ್ದರಿಂದ ಶ್ರೀ ಕೃಷ್ಣನು ಅಂತರ್‌ಶುದ್ಧಿ ಎಂದು ಹೇಳಿದ್ದಾರೆ. ಇನ್ನೂ ಏನು ಹೇಳಿದ್ದಾರೆ ಎಂದರೆ, ವಿವೇಕವಂತನು, ವಿವೇಕವುಳ್ಳವನು ಎಂದರೆ ಯಾವ ವಿಷಯವಾದರೂ ಶೀಘ್ರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳದಿರುವುದು. ಸ್ವಲ್ಪ ವಿವೇಕವನ್ನು ಉಪಯೋಗಿಸಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ನಾನು ಮುಖ್ಯವಾಗಿ ಈ ಸ್ಥಾಯಿಗೆ ಬರಲು ಕಾರಣ ಪತ್ರೀಜಿಯವರ ಪರಿಚಯ ಆದ ಮೇಲೆ ಅವರು ಎಷ್ಟೋ ವಿಷಯಗಳನ್ನು ಹೇಳಿದ್ದಾರೆ.

ಆ ವಿಷಯಗಳನ್ನೆಲ್ಲಾ ಕೂಡಾ ಮೇಲೆ ನೋಡಿದರೆ ಲೋಕ ವಿರೋಧವಾಗಿ ಕಾಣಿಸುತ್ತವೆ. ಆದರೆ ಅವುಗಳೆಲ್ಲಾ ಅಕ್ಷರಶಃ ಸತ್ಯಗಳು. ಅವರು ವಿಗ್ರಹಗಳು ದೇವರಲ್ಲ ಎಂದಿದ್ದಾರೆ. ಆತ್ಮವೇ ದೇವರು ಎಂದಿದ್ದಾರೆ. ನಾನೇನು ಗಲಿಬಿಲಿಗೊಳ್ಳಲಿಲ್ಲ. ಈ ಮಾತನ್ನು ಹೇಳಿದ್ದಾರೆ ಎಂದರೆ ಏನೋ ಕಾರಣವಿದೆ. ನನಗೆ ತಿಳಿಯದೇ ಇರಬಹುದು ಎಂದು ಸ್ವಲ್ಪ ವಿವೇಕದಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿದೆ. ಪುನಃ ಕೆಲವು

ಗ್ರಂಥಗಳನ್ನು ಕೂಡಾ ಓದಿದೆ.

ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಮೊದಲಿಗೆ ವೇದಗಳಲ್ಲಿ ವಿಗ್ರಹ ಪ್ರಸ್ತಾವನೆ ಇಲ್ಲ. ಯಾವುದು ನೋಡಿದರೂ ಯಾವುದನ್ನು ಓದಿದರೂ ಕೊನೆಗೆ ಭಗವದ್ಗೀತೆಯಲ್ಲಿ ಕೂಡಾ ಆತ್ಮವೇ ಭಗವಂತನು ಎನ್ನುವ ವಿಷಯವು ಸ್ಪಷ್ಟವಾಗಿ ಕಾಣುತ್ತಿದೆ. ಆಗ ಆತ್ಮವನ್ನು ಹಿಡಿದೆ. ಪುನಃ ನಿಜವಾಗಿ ನನ್ನ ಜೀವನದಲ್ಲಿ ವಿಪರೀತವಾದ ಬದಲಾವಣೆಗಳು ಬಂದವು. ನನ್ನ ಜೀವನವನ್ನು ಬದಲಾಯಿಸಿಕೊಂಡೆ, ಈಗ ಕೆಲವು ಸಾವಿರ ಜನರಿಗೆ ನಾನು ಸರಿಯಾದ ದಾರಿ ತೋರಿಸುವವನು ಆಗಿದ್ದೇನೆ.

ನಾನು ಆನಂದವಾಗಿ ಜೀವಿಸುವವನಾಗಿದ್ದೇನೆ. ಎಲ್ಲರೂ ಆನಂದವಾಗಿ ಜೀವಿಸಲು ಪ್ರಯತ್ನ ಮಾಡಿದ್ದೇನೆ. ಇದೆಲ್ಲವೂ ವಿವೇಕದಿಂದಲೇ. ಶ್ರೀ ಕೃಷ್ಣನು ವಿವೇಕವಂತನು ಆಗಬೇಕು ಎಂದಿದ್ದಾರೆ. ಪತ್ರೀಜಿಯವರು ಇನ್ನೊಂದು ವಿಷಯವನ್ನು ಹೇಳಿದ್ದಾರೆ. ನಂಬಲಾಗದ ಸತ್ಯಗಳೇ ಅವರು ಹೇಳಿರುವವೆಲ್ಲಾ. ನೀನು ದೇಹವಲ್ಲ, ನೀನು ಆತ್ಮನು ಎಂದಿದ್ದಾರೆ. ಇದು ಬಹಳ ಆಶ್ಚರ್ಯ. ನಾನು ದೇಹವೆಲ್ಲವೆನ್ನುವುದು ಏನಿದು? ನಾನು ಆತ್ಮವೇನು? ಅದು ಎಲ್ಲಿದೆ? ಆತಂಕಪಡಲಿಲ್ಲ.

ಅವರು ಹೇಳಿದ್ದಾರೆಂದರೆ, ಏನೋ ಕಾರಣವಿರುತ್ತದೆ ಎಂದು ಸ್ವಲ್ಪ ವಿವೇಕವನ್ನು ಉಪಯೋಗಿಸಿದಾಗ, ವಿಚಾರಣೆ ಮಾಡಿದರೆ ಅವರು ಹೇಳಿದ್ದು ಸತ್ಯವೇ ಎನ್ನುವ ವಿಷಯ ತಿಳಿದುಕೊಂಡೆನು. ನಾನು ದೇಹವೆಂದು ಅಂದುಕೊಳ್ಳುವಷ್ಟು ಸಮಯ ಅಶಾಂತಿಯ ಜೊತೆಗೆ, ದುಃಖದ ಜೊತೆಗೆ ಜೀವಿಸಿದೆ. ನಾನು ಆತ್ಮವೆಂದು ತಿಳಿದುಕೊಂಡಾಗಿನಿಂದ ಅರ್ಧ ದುಃಖವು ಆಗಿಂದಾಗಲೇ ಹೋಯಿತು. ಎಷ್ಟೋ ಬದಲಾವಣೆ ಬಂದಿತು.

ಎಲ್ಲರೂ ಬೇರೆ, ಬೇರೆ ಎನ್ನುವ ಭಾವವು ಹೋಗಿ ಎಲ್ಲರೂ ಒಂದೇ, ಬೇರೆ ಎಂದುಕೊಂಡರೆ ಈರ್ಷೆ, ದ್ವೇಷ, ಅಸೂಯೆ, ಗರ್ವ, ಅಹಂಕಾರಗಳೆಲ್ಲವೂ ಇರುತ್ತವೆ.

ನಾನೇ ಉತ್ತಮ ಎಂದುಕೊಳ್ಳುತ್ತೇವೆ. ಎಲ್ಲಾ ಒಂದೇ ಎಂದು ತಿಳಿದಾಗ, ಎಲ್ಲರೂ ಸಮಾನರು ಎಂದುಕೊಂಡಾಗ ಇನ್ನು ಗರ್ವಿಸುವುದು ಏನು? ನಿನಗೆ ಅಹಂಕಾರವೆಲ್ಲಿಯದು? ಮತ್ತೆ ಎಷ್ಟೋ ಬದಲಾವಣೆಗಳು ಬಂದವು.

ಶ್ರೀ ಕೃಷ್ಣನು ಹೇಳಿದಂತೆ ನಾನು ಈ ವಿವೇಕವನ್ನು ಉಪಯೋಗಿಸಿದೆ. ಇನ್ನೂ ಶ್ರೀ ಕೃಷ್ಣರು ಏನು ಹೇಳಿದ್ದಾರೆಂದರೆ, ಯಾವುದರ ಬಗ್ಗೆಯೂ ಆಸಕ್ತಿಯಿಲ್ಲದವನು, ಈ ಆಸಕ್ತಿ ಯಾವಾಗ ಇರುವುದಿಲ್ಲವೆಂದರೆ, ಪತ್ರೀಜಿಯವರು ಹೇಳಿದಂತೆ ನಾನು ಆತ್ಮನು ಎಂಬುದನ್ನು ಅರ್ಥ ಮಾಡಿಕೊಂಡಾಗ ಇರುವುದಿಲ್ಲ. ಕಾರಣ ಏನೆಂದರೆ ಆತ್ಮೇ

ಪರಬ್ರಹ್ಮ. ಇದು ಕೂಡಾ ನಾವು ತಿಳಿದುಕೊಂಡಿದ್ದೇವೆ.

ಕಾರಣವೇನೆಂದರೆ ಆತ್ಮನೇ ಪರಬ್ರಹ್ಮ. ನಾನೇ ಆ ಬ್ರಹ್ಮನು ಅಲ್ಲವೇ? ಅಹಂ ಬ್ರಹ್ಮಾಸ್ಮಿ ಅಲ್ಲವೇ? ಆ ಬ್ರಹ್ಮನೇ ನಾನಾದಾಗ, ಆ ಸಮಸ್ತ ಸೃಷ್ಟಿ ಆತನದೇ ಆದಾಗ. ನಾನು ಆತನೇ ಆದಾಗ, ಎಲ್ಲವೂ ನನ್ನದೆ ಅಲ್ಲವೆ. ಇನ್ನೂ ಯಾವುದರ ಮೆಲೆ ಆಸಕ್ತಿಯಿರುತ್ತದೆ. ಯಾವುದು ನನಗೆ ಬೇಕೆಂದೆನಿಸುತ್ತದೆ. ನನ್ನದು ಅಲ್ಲದಿರುವುದು ಯಾವುದಾದರೂ ಇದ್ದರೆ ಆದರ ಮೇಲೆ ಆಸಕ್ತಿ ಇರುತ್ತದೆ. ಎಲ್ಲವೂ ನನ್ನದೇ ಆದಾಗ ಇನ್ನೂ ಯಾವುದರ ಮೇಲೆ ಆಸಕ್ತಿ ಇರುತ್ತದೆ. ಇದೆಲ್ಲವೂ ನಮ್ಮ ಜ್ಞಾನವು ಹೆಚ್ಚಾದಂತೆಲ್ಲಾ ಬರುವ ಬದಲಾವಣೆಗಳು.

ಶ್ರೀ ಕೃಷ್ಣರು ಹೇಳಿದಂತೆ ಆ ಸ್ಥಿತಿಯು ನಮಗೆ ಬರುತ್ತದೆ. ಆಗ ನಾವು ಆತನಿಗೆ ಇಷ್ಟವಾಗುತ್ತೇವೆ. ಇನ್ನೇನು ಹೇಳಿದ್ದಾನೆ ಎಂದರೆ. ಆತನು ದುಃಖಿಸದವನು. ನಿನಗೆ ಇನ್ನು ದುಃಖ ಏಕೆ ಬರುತ್ತದೆ. ಇವೆಲ್ಲವನ್ನು ತಿಳಿದುಕೊಂಡಾಗ, ಈ ಜ್ಞಾನವನ್ನು ಹೊಂದಿದಾಗ, ಇನ್ನೂ ಅವರು ಏನೆಂದಿದ್ದಾರೆಂದರೆ ಸಮಸ್ತ ಕಾರ್ಯಗಳು ಪರಿತ್ಯಜಿಸಿದವನು. ಈ ಪ್ರಾಪಂಚಿಕ ಕೆಲಸಗಳ ಮೇಲೆ ಆಸಕ್ತಿ ಇರುವುದಿಲ್ಲ. ಆತ್ಮದ ಮೇಲೆಯೇ ಆಸಕ್ತಿ. ಆ ಮಾತುಗಳನ್ನೇ ಮಾತನಾಡುತ್ತಾರೆ. ಆತ್ಮಕ್ಕೆ ಲಭಿಸುವ ಕೆಲಸಗಳನ್ನೇ ಮಾಡುತ್ತಾರೆ. ಆತ್ಮವಾಗಿಯೇ ಜೀವಿಸುತ್ತಾರೆ.

ಅಂತಹವರು ಭಗವಂತನಿಗೆ ಇಷ್ಟವಾದವರಾಗುತ್ತಾರೆ. ಅವರು ಮೋಕ್ಷವನ್ನು ಹೊಂದಿದಂತೆಯೇ. ಅದೇ ಶ್ರೀ ಕೃಷ್ಣನ ಸಂದೇಶ. ಆದ್ದರಿಂದ ಅಂತಹ ಮಹನೀಯರು ಒಬ್ಬರು ಯಾವುದನ್ನು ಹೇಳುತ್ತಾರೋ, ಎಲ್ಲರೂ ಅದನ್ನೇ ಹೇಳುತ್ತಾರೆ. ಅದನ್ನೇ ನಾವು ತಿಳಿದುಕೊಳ್ಳುತ್ತೇವೆ. ಆಚರಣೆಯಲ್ಲಿ ಇಟ್ಟುಕೊಳ್ಳುತ್ತೇವೆ. ನಿಧಾನವಾಗಿ ಬುದ್ಧನು ಹೇಳಿದಂತೆ "ಉತ್ತಮ ಪುರುಷ"ನ ಲಕ್ಷಣಗಳನ್ನು ಸಂಪಾದಿಸಿಕೊಂಡು ಉತ್ತಮ ಪುರುಷರು ಆಗೋಣ.

# ಪಿರಮಿಡ್ ಧ್ಯಾನಿಗಳ 18 ಆದರ್ಶ ಸೂತ್ರಗಳು

1. "ಸರಿಯಾದ ಧ್ಯಾನ" ಅಂದರೆ "ಆನಾಪಾನಸತಿ"ಯನ್ನು ಕ್ರಮ ತಪ್ಪದೇ ಅಭ್ಯಾಸ ಮಾಡುವುದು "ಆನಾಪಾನಸತಿ" ಧ್ಯಾನವನ್ನು ಎಲ್ಲರಿಂದಲೂ ಮಾಡಿಸುವುದು.
2. ಸರಿಯಾದ ಆತ್ಮವಿಜ್ಞಾನ ಪುಸ್ತಕಗಳನ್ನು ಓದುವುದು. ಉದಾ: ಸ್ವಾಮಿ ರಾಮಾ, ಯೋಗಾನಂದ ಪರಮಹಂಸ, ಓಷೋ, ಲೋಬ್‌ಸಾಂಗ್ ರಾಂಪಾ, ಕಾಸ್ಟಾನೆಡಾ, ಜೇನ್ ರಾಬರ್ಟ್ಸ್, ರಿಚಾರ್ಡ ಬಾಕ್, ಅನಿಬೆಸೆಂಟ್, ಲಿಂಡಾ ಗುಡ್‌ಮಾನ್, ದೀಪಕ್ ಚೋಪ್ರಾ, ಬ್ರಯಾನ್ ವೈಸ್, ಸಿಲ್ವಿಯಾ ಬ್ರೌನ್ ಮುಂತಾದ ಗ್ರಾಂಡ್ ಮಾಸ್ಟರ್‌ಗಳ ಗ್ರಂಥಗಳನ್ನು ಅಧ್ಯಯನ ಮಾಡುವುದು.
3. ಧ್ಯಾನಾನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು.
4. ಸಾಧ್ಯವಾದಷ್ಟು ಮೌನವನ್ನು ಅಳವಡಿಸಿಕೊಳ್ಳುವುದು.
5. ಹುಣ್ಣಿಮೆ ಧ್ಯಾನ ತಪ್ಪದೇ ಮಾಡಬೇಕು. ಸಾಧ್ಯವಾದಷ್ಟು ಸಾಮೂಹಿಕವಾಗಿ!...
6. ಧ್ಯಾನಕ್ಕೆ ಪಿರಮಿಡ್ ಶಕ್ತಿಯನ್ನು ಯಥೇಚ್ಛವಾಗಿ ಉಪಯೋಗಿಸಿಕೊಳ್ಳಬೇಕು.
7. ಅಲೋಪತಿ ಔಷಧಿಗಳನ್ನು ಪೂರ್ತಿಯಾಗಿ ಬಿಡುವುದು!... ಸ್ವತಃ ಧ್ಯಾನ ಶಕ್ತಿಯಿಂದಲೇ ಅವರಿಗವರೇ ಸ್ವಸ್ಥತೆ ಹೊಂದುವುದು.
8. ಮೊಟ್ಟೆ ಸೇರಿದಂತೆ ಮಾಂಸಾಹಾರವನ್ನು ತ್ಯಜಿಸುವುದು ಸಸ್ಯಾಹಾರದಲ್ಲಿಯೂ ಮಿತಾಹಾರವೇ ಯುಕ್ತ.
9. ಪ್ರಕೃತಿಯೊಂದಿಗೆ ಸಹಜೀವನ ಕಳೆಯುತ್ತಾ ಇರುವುದು, ಹೆಚ್ಚಾಗಿ ಅರಣ್ಯದಲ್ಲಿ ಟ್ರೆಕ್ಕಿಂಗ್‌ಗಳನ್ನು ಮಾಡುವುದು.
10. ಪ್ರತ್ಯೇಕ 'ಆಧ್ಯಾತ್ಮಿಕ' ದಿರಿಸು, ವೇಷಭೂಷಣಗಳು ಇಲ್ಲದಿರುವುದು ವ್ಯರ್ಥವಾದ ಕರ್ಮಕಾಂಡಗಳನ್ನು ಮಾಡದಿರುವುದು.
11. ಚಿಕ್ಕಂದಿನಿಂದಲೇ ಮಕ್ಕಳಿಗೆ "ಆನಾಪಾನಸತಿ" ಧ್ಯಾನದ ಬಗ್ಗೆ ಶಿಕ್ಷಣ ಕೊಡುವುದು.
12. ಪ್ರತಿಯೊಬ್ಬರೂ ಗುರುಗಳಾಗಿ ತಯಾರಾಗುವುದು 'ಶಿಷ್ಯ'ರಾಗಿ ಮಾತ್ರವಲ್ಲದೆ 'ಮಾಸ್ಟರ್'ಗಳಾಗಿ ಇರುವುದು.
13. ಧ್ಯಾನ ಶಿಕ್ಷಣ ಕಾರ್ಯಕ್ರಮದಲ್ಲಿ ಹಣವನ್ನು ತೆಗೆದುಕೊಳ್ಳಬಾರದು.
14. ವಿಗ್ರಹಾರಾಧನೆ ಎನ್ನುವುದು ಸಂಪೂರ್ಣ ನಿಷಿದ್ಧ. ಆತ್ಮ ಆರಾಧನೆಯೇ ಮುಕ್ತಿಗೆ ಮಾರ್ಗ!..
15. ಸ್ವಂತ ಆತ್ಮ ಶಕ್ತಿಯಿಂದಲೇ ಸರ್ವ ವ್ಯಕ್ತಿಗತ ಸಮಸ್ಯೆಗಳನ್ನು ಆಗಿಂದಾಗಲೇ ಪರಿಹರಿಸಿಕೊಳ್ಳುವುದು.
16. ಸಾಧಾರಣ ಗೃಹಸ್ಥ ಜೀವನವನ್ನು ಆನಂದದಿಂದ ಕಳೆಯುವುದು.
17. ಎಲ್ಲಾ ಗ್ರಾಮಗಳಲ್ಲೂ, ಎಲ್ಲಾ ಪಟ್ಟಣಗಳಲ್ಲೂ ಪಿರಮಿಡ್ ಧ್ಯಾನ ಕೇಂದ್ರಗಳನ್ನು ಸ್ಥಾಪಿಸುವುದು.
18. ಸ್ವಂತ ಧ್ಯಾನಾನುಭವಗಳನ್ನು, ಆಧ್ಯಾತ್ಮಿಕ ಪ್ರಗತಿ ವಿಶೇಷಗಳನ್ನು ಗ್ರಂಥಗಳ ರೂಪದಲ್ಲಿ ಪ್ರಕಟಣೆ ಮಾಡುವುದು.

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| 1. | ಅಹಿಂಸೆ & ಶಾಖಾಹಾರ | ರೂ. | 30 |
| 2. | ನವವಿಧ ಧರ್ಮಗಳು | ರೂ. | 30 |
| 3. | ಸಸ್ಯಾಹಾರವೇ ಮಾನವಾಹಾರ | ರೂ. | 30 |
| 4. | ಧ್ಯಾನ | ರೂ. | 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. | 50 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. | 30 |
| 7. | ಶಿರಡಿ ಸಾಯಿ ಸಂದೇಶಗಳು | ರೂ. | 50 |
| 8. | ಪ್ರಾಣ ಶಕ್ತಿ | ರೂ. | 100 |
| 9. | ಜೀವನದ ಸೂಕ್ಷ್ಮಗಳು | ರೂ. | 100 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. | 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ. | 300 |
| 12. | ತುಳಸಿ ದಳ (i) | ರೂ. | 200 |
| 13. | ತುಳಸಿ ದಳ (ii) | ರೂ. | 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. | 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. | 70 |
| 16. | ಧ್ಯಾನದಿಂದಲೇ ಜ್ಞಾನ | ರೂ. | 70 |
| 17. | ಬ್ರಹ್ಮಜ್ಞಾನ | ರೂ. | 70 |
| 18. | ಜ್ಞಾನ ಜ್ಯೋತಿ | ರೂ. | 90 |
| 19. | ಗೈಡಿಂಗ್ | ರೂ. | 100 |
| 20. | ಸಂಕಲ್ಪವೆಂದರೇನು? | ರೂ. | 50 |
| 21. | ಕರ್ಮ ಸಿದ್ಧಾಂತ | ರೂ. | 70 |
| 22. | ಜ್ಞಾನ ಕುಸುಮಗಳು | ರೂ. | 90 |
| 23. | ಆಲೋಚನಾ ಶಕ್ತಿ | ರೂ. | 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. | 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. | 40 |
| 26. | ಭಕ್ತಿ ಮುಕ್ತಿ | ರೂ. | 30 |
| 27. | ಧ್ಯಾನ ತರಂಗ | ರೂ. | 40 |
| 28. | ಜ್ಞಾನ ಯುಗ | ರೂ. | 60 |
| 29. | ಸೇತು ವಿಜ್ಞಾನ | ರೂ. | 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. | 130 |
| 31. | ಅತೀಂದ್ರಿಯ ಶಕ್ತಿಗಳು | ರೂ. | 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. | 40 |
| 33. | ಆಲೋಚಿಸಿ | ರೂ. | 70 |
| 34. | ನಿರ್ವಾಣ ಮಾರ್ಗ | ರೂ. | 60 |
| 35. | ಸತ್ಯ | ರೂ. | 40 |
| 36. | ಆರ್ಥಿಕ ಪರಿಸ್ಥಿತಿ | ರೂ. | 40 |
| 37. | ಚಕ್ರಗಳು | ರೂ. | 30 |
| 38. | ಭೂತದಯೆ ಮತ್ತು ದೈವತ್ವ | ರೂ. | 80 |
| 39 | ಮೌನ ಧ್ಯಾನ | ರೂ. | 40 |
| 40. | ಗುರುವನ್ನು ಗುರುತಿಸುವುದೇ ಹೇಗೆ? | ರೂ. | 30 |
| 41 | ತ್ರಿವಿಧಗಳು | ರೂ. | 70 |
| 42 | ಮರಣದ ನಂತರ ನಮ್ಮ ಜೊತೆ ಬರುವುದು | ರೂ. | 60 |
| 43 | ಧ್ಯಾನವೆಂದರೆ? | ರೂ. | 60 |
| 44 | ಮೆಹರ್‌ಬಾಬಾ ಸಂದೇಶ | ರೂ. | 80 |
| 45 | ಉಪಮಾನ ಧ್ಯಾನ ಸಂದೇಶ | ರೂ. | 80 |
| 46 | ದತ್ತಾತ್ರೇಯ ಮುನಿಯವರ 24 ಗುರುಗಳು | ರೂ. | 70 |
| 47 | ಜ್ಞಾನಮಾಲ | ರೂ. | 70 |
| 48 | ಭಗವಂತನೆಂದರೇ?! | ರೂ. | 90 |

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.


**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

**ಬ್ಯಾಂಕ್ ಹೆಸರು : ಭಾರತೀಯ ಸ್ಟೇಟ್ ಬ್ಯಾಂಕ್ – State Bank of India**
**ಶಾಖೆಯ ಹೆಸರು : ಚಾಮರಾಜಪೇಟೆ ಶಾಖೆ – Chamarajapete Branch**
**ಖಾತೆ ಸಂಖ್ಯೆ : 30828057680 : I.F.S.C. ಕೋಡ್ – S.B.I.N 0005794**
**ಖಾತೆಯ ಹೆಸರು : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ – K.P.D.P. Trust A/c. Dhayana Kasturi**

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಉತ್ತಮ ಪುರುಷನು ಅಂದರೆ ಬಹಳ ಉತ್ತಮವಾದವನು, ಬುದ್ಧಿಯನ್ನು ಬೆಳೆಸಿಕೊಂಡವನು, ಜ್ಞಾನವನ್ನು ಸಂಪಾದಿಸಿಕೊಂಡವನು ಎಂದು ತಿಳಿದುಕೊಳ್ಳಬೇಕು.

ಅಂಧವಿಶ್ವಾಸಗಳು ಅಂದರೆ ಮೂಢನಂಬಿಕೆಗಳು ನಿರ್ವಾಣ ತತ್ವ ವಿಜ್ಞಾನವನ್ನು ಅರಿತವರು ಅಂದರೆ ಮೋಕ್ಷದ ಶ್ರೇಷ್ಠತೆಯನ್ನು ತಿಳಿದವರು. ಭವಬಂಧಗಳು ಅಂದರೆ ಸಂಸಾರ ಬಂಧದಿಂದ ಸದಾ ಬದಲು ಮಾಡಿದವರು ಎಂದರೆ ಹೊರಬಿದ್ದವರು. ತೃಷ್ಣಾರಹಿತನು ಅಂದರೆ ಕೋರಿಕೆಗಳಿಲ್ಲದವನು. ಈ ಲಕ್ಷಣಗಳು ಯಾರಿಗೆ ಇರುತ್ತವೆಯೋ ಅವರು ಮಾನವರೆಲ್ಲರಿಗಿಂತ ಶ್ರೇಷ್ಠರು, ಅವರೇ ಉತ್ತಮ ಪುರುಷನು.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ರೂ 70/-

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org • www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689